ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'777 ಚಾರ್ಲಿ' ಜೊತೆಗೆ ರಕ್ಷಿತ್ ಶೆಟ್ಟಿ ಒಡನಾಟದ ಮಾತು...



ಸಂಖ್ಯೆ-ಸುದ್ದಿ
ರಾಷ್ಟ್ರೀಯ ಸಾಧನ ಸಮೀಕ್ಷೆ ಕಲಿಕೆ ಕಳವಳ

'ಕುಟುಂಬ ಆಧರಿತ ಪಕ್ಷ ದೇಶದ ದೊಡ್ಡ ಶತ್ರು' 6
ಹಿಜಾಬ್‌ಗೆ ಅವಕಾಶ: ಪ್ರತಿಭಟನೆ 3D

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,252 ▲	16,170 ▲	₹52,780 (ಬೆಂಗಳೂರು)	₹63,300 (ಬೆಂಗಳೂರು)	77.61 ▼

ಹಣ ಅಕ್ರಮ ವರ್ಗಾವಣೆ ಆರೋಪ • ಜಾರಿ ನಿರ್ದೇಶನಾಲಯದಿಂದ ತನಿಖೆ

ಡಿಕೆಶಿ ವಿರುದ್ಧ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಆರೋಪದೊಂದಿಗೆ 2019ರಲ್ಲಿ ಬಂಧನಕ್ಕೆ ಒಳಗಾಗಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ದೆಹಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದೂರನ್ನು ದಾಖಲಿಸಿ ತನಿಖೆ ನಡೆಸಲಾಗಿತ್ತು ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಶಿವಕುಮಾರ್, ಮತ್ತಿತರರ ವಿರುದ್ಧ ತೆರಿಗೆ ವಂಚನೆ ಮತ್ತು ಹವಾಲಾ ವ್ಯವಹಾರದ ಆರೋಪದ ಮೇಲೆ ಆದಾಯ ತೆರಿಗೆ (ಐ.ಟಿ) ಇಲಾಖೆಯು ಬೆಂಗಳೂರಿನ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪ ಪಟ್ಟಿ ಆಧರಿಸಿಯೇ ಇ.ಡಿ. ಅಧಿಕಾರಿಗಳು 2018ರಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದರು.

ಶಿವಕುಮಾರ್ ಹಾಗೂ ಅವರ ಸಹಚರ ಎಸ್.ಕೆ. ಶರ್ಮಾ ಅವರು ಇತರ ಮೂವರು ಆರೋಪಿಗಳ ಸಹಾಯದಿಂದ ಹವಾಲಾ ಮಾರ್ಗಗಳ ಮೂಲಕ ನಿಯಮಿತವಾಗಿ ಅಪಾರ ಪ್ರಮಾಣದ ಹಣವನ್ನು ಸಾಗಿಸಿದ್ದಾರೆ ಎಂದೂ ಐ.ಟಿ ಇಲಾಖೆ ಆರೋಪಿಸಿತ್ತು.

ಈ ಆರೋಪದ ಹಿನ್ನೆಲೆಯಲ್ಲಿ 2019ರ ಸೆಪ್ಟೆಂಬರ್ 3ರಂದು ಇ.ಡಿ.ಯಿಂದ ಬಂಧನಕ್ಕೆ ಒಳಗಾಗಿದ್ದ ಶಿವಕುಮಾರ್, 45 ದಿನಗಳ ಕಾಲ ತಿಹಾರ್ ಕೇಂದ್ರ ಕಾರಾಗೃಹದಲ್ಲಿದ್ದರು. ಅವರಿಗೆ ದೆಹಲಿ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

'ರಾಜಕೀಯ ಷಡ್ಯಂತ್ರ ಪ್ರಕರಣ'



'ಇದೊಂದು ರಾಜಕೀಯ ಷಡ್ಯಂತ್ರ ಪ್ರಕರಣ. ತಮ್ಮ ರಾಜಕೀಯ ಹಾದಿಗೆ ಅಡ್ಡಿಯಾಗಿರುವವರನ್ನು ನಿರ್ಮೂಲನೆ ಮಾಡಲು ಬಿಜೆಪಿಯವರು ಹೊರಟಿದ್ದಾರೆ. ಶರಣಾಗದವರನ್ನು ಮುಗಿಸಲು ಪ್ರಯತ್ನಿಸುತ್ತಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಬಿಜೆಪಿಯವರು ಅವರ ಪಕ್ಷದವರನ್ನೇ ಬಿಡುತ್ತಿಲ್ಲ, ಇನ್ನು ನನ್ನನ್ನು ಬಿಡುತ್ತಾರೆಯೇ' ಎಂದು ಪ್ರಶ್ನಿಸಿದರು.

'ರಾಜ್ಯಸಭೆ ಚುನಾವಣೆ ಸಂದರ್ಭದಲ್ಲಿ ಅಹ್ಮದ್ ಪಟೇಲ್ ಅವರಿಗೆ ಸಹಾಯ ಮಾಡಿದೆ ಎಂಬ ಕಾರಣಕ್ಕೆ ನನ್ನ ಹಾಗೂ ನನ್ನ ಸ್ನೇಹಿತರ ಮನೆಗಳ ಮೇಲೆ ದಾಳಿ ಮಾಡಿದ್ದರು. ಸ್ನೇಹಿತರ ಹಣವನ್ನೂ ನನ್ನ ಹಣ ಎಂದು ಆದಾಯ ತೆರಿಗೆ ಇಲಾಖೆಯವರು ಬರೆದಿದ್ದರು. ಐ.ಟಿಯವರು ಕಾನೂನು ವಿರುದ್ಧವಾಗಿ ಸಾಕಷ್ಟು ಸೃಷ್ಟಿ ಮಾಡಿದ್ದಾರೆ. ಈಗ ಈ ವಿಚಾರ ನನ್ನ ಹಾಗೂ ನ್ಯಾಯಾಲಯದ ಮಧ್ಯೆ ಇದೆ. ಈ ನೆಲದ ಕಾನೂನನ್ನು ನಾನು ಗೌರವಿಸುತ್ತೇನೆ. ನ್ಯಾಯಾಂಗ ವ್ಯವಸ್ಥೆ ಮೇಲೆ ಸಂಪೂರ್ಣ ವಿಶ್ವಾಸ ಹೊಂದಿದ್ದೇನೆ' ಎಂದು ಹೇಳಿದರು.

ಆಕ್ಷೇಪಣೆಗೆ ಅವಕಾಶ

ಬೆಂಗಳೂರು: ಆದಾಯ ತೆರಿಗೆ ಇಲಾಖೆಯ ನಾಲ್ಕು ವರ್ಷಗಳ ಆದಾಯ ತೆರಿಗೆ ಮೌಲ್ಯಮಾಪನ ಪ್ರಶ್ನಿಸಿ ಡಿ.ಕೆ.ಶಿವಕುಮಾರ್ ಅವರ ಇಬ್ಬರು ಆಪ್ತರು ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆ ಆಕ್ಷೇಪಣೆ ಸಲ್ಲಿಸಲು ಹೈಕೋರ್ಟ್ ಆದೇಶಿಸಿದೆ.

6ನೇ ಪುಟ ನೋಡಿ

ಡಿ.ಕೆ. ಶಿವಕುಮಾರ್ ಅವರು ಒಟ್ಟು ₹ 800 ಕೋಟಿ ಮೌಲ್ಯದ ಬೇನಾಮಿ ಆಸ್ತಿ ಹೊಂದಿದ್ದಾರೆ. ಅವರ ಕುಟುಂಬ ಸದಸ್ಯರ ಹೆಸರಿನಲ್ಲಿ ₹ 200 ಕೋಟಿಯಷ್ಟು ಹಣ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ರೂಪದಲ್ಲಿ ಪತ್ತೆಯಾಗಿದೆ. 20ಕ್ಕೂ ಅಧಿಕ ಬ್ಯಾಂಕ್‌ಗಳಲ್ಲಿ 317 ಖಾತೆಗಳು ಪತ್ತೆಯಾಗಿವೆ ಎಂದು ಇ.ಡಿ. ಅಧಿಕಾರಿಗಳು ಹೇಳಿದ್ದಾರೆ.

6ನೇ ಪುಟ ನೋಡಿ
ಇನ್ನೊಂದು ಸುದ್ದಿ 6

ಇದೇ 31ಕ್ಕೆ ತೈಲ ಖರೀದಿ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಕಂಪನಿಗಳ ನಿರ್ವಹಣೆಯಲ್ಲಿನ ವೈಫಲ್ಯದಿಂದ ತೊಂದರೆಗೆ ಸಿಲುಕಿರುವ ಪೆಟ್ರೋಲ್ ಬಂಕ್ ಮಾಲೀಕರು, ಮೇ 31ರಂದು ತೈಲ ಖರೀದಿ ನಿಲ್ಲಿಸುವ ಮೂಲಕ ಪ್ರತಿಭಟನೆ ಮಾಡಲು ನಿರ್ಧರಿಸಿದ್ದಾರೆ.

ಈ ಸಂಬಂಧ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ಅಖಿಲ ಕರ್ನಾಟಕ ಪೆಟ್ರೋಲಿಯಂ ವ್ಯಾಪಾರಿಗಳ ಒಕ್ಕೂಟ(ಎಕೆಎಪ್‌ಪಿಟಿ), 'ಅವಶ್ಯಕ್ಕೆ ಅನುಗುಣವಾಗಿ ತೈಲ ಪೂರೈಕೆ ಮಾಡದೆ ಬಂಕ್‌ಗಳಲ್ಲಿ 'ನೋ ಸ್ಟಾಕ್' ಫಲಕ ಹಾಕುವಂತಾಗಿದೆ' ಎಂದು ಅಳಲು ತೋಡಿಕೊಂಡಿದ್ದಾರೆ.

'ಖರೀದಿಸಿದ ಡೀಸೆಲ್‌ಗೆ ಸಾರಿಗೆ ಸಂಸ್ಥೆಗಳು ಹಣ ಪಾವತಿ ಮಾಡದೆ ಕಂಪನಿಗಳನ್ನು ಸಂದಿಗ್ಧ ಸ್ಥಿತಿಗೆ ತಲುಪಿಸಿವೆ. ಅದರ ಪರಿಣಾಮವನ್ನು ಸಾಮಾನ್ಯ ವಿತರಕರ ಮೇಲೆ ಹೇರಲಾಗುತ್ತಿದೆ. ಬೇಡಿಕೆಗೆ ತಕ್ಕಷ್ಟು ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಮಾಡುತ್ತಿಲ್ಲ. ಸಾಲದ ರೂಪದಲ್ಲಿ ಇಂಧನ ತಂದು ವ್ಯಾಪಾರವಾದ ಬಳಿಕ ಮರು ದಿನ ಹಣ ಪಾವತಿ ಮಾಡುವ ವ್ಯವಸ್ಥೆ ಇತ್ತು. ಈಗ ಮೊದಲೇ ಹಣ ಪಾವತಿಸಿ ಖರೀದಿ ಮಾಡಬೇಕಾದ ಸ್ಥಿತಿ ಇದೆ. ಬ್ಯಾಂಕ್ ವಹಿವಾಟು ನಿಧಾನವಾದರೆ ವಿತರಕರು ತೊಂದರೆಗೆ ಸಿಲುಕಬೇಕಾಗುತ್ತಿದೆ. ಹಣ ಪಾವತಿಸಿದರೂ ಬೇಡಿಕೆಗೆ ತಕ್ಕಷ್ಟು ಪೂರೈಕೆ ಇಲ್ಲ' ಎಂದು ಒಕ್ಕೂಟದ ಉಪಾಧ್ಯಕ್ಷ ಎ.ತಾರಾನಾಥ್ ಹೇಳಿದರು.

'ತೈಲ ಬೆಲೆ ಏರುಗತಿಯಲ್ಲಿದ್ದಾಗ ಪೈಸೆ ಲೆಕ್ಕದಲ್ಲಿ ಬೆಲೆ ಏರಿಕೆ ಮಾಡಲಾಗುತ್ತದೆ. ಸರ್ಕಾರಕ್ಕೆ ಮನಸ್ಸು ಬಂದಾಗ ಒಮ್ಮೆಗೆ ₹9 ಇಳಿಕೆ ಮಾಡಲಾಗುತ್ತದೆ. ಹಿಂದಿನ ದಿನ ಖರೀದಿಸಿ ದಾಸ್ತಾನು ಮಾಡಿಕೊಂಡಿದ್ದ ತೈಲವನ್ನು ಕಡಿಮೆ ದರದಲ್ಲೇ ಮರುದಿನ ಮಾರಾಟ ಮಾಡಬೇಕು. ಇತ್ತೀಚೆಗೆ ತೈಲ ದರ ಇಳಿಕೆ ಮಾಡಿದಾಗ ಪ್ರತಿ ವಿತರಕರಿಗೆ ಕನಿಷ್ಠ ₹3 ಲಕ್ಷದಿಂದ ₹30 ಲಕ್ಷದ ತನಕ ನಷ್ಟವಾಗಿದೆ' ಎಂದರು.

'2017ರಲ್ಲಿದ್ದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಂದಿಗೆ ಹೋಲಿಕೆ ಮಾಡಿದರೆ ದ್ವಿಗುಣವಾಗಿದೆ. ಕಮಿಷನ್ ಹೆಚ್ಚಳ ಮಾಡಬೇಕೆಂದು ಕೇಂದ್ರ ಪೆಟ್ರೋಲಿಯಂ ಸಚಿವರು ಹಾಗೂ ರಾಜ್ಯದ ಮುಖ್ಯಮಂತ್ರಿಗೆ ಮನವಿ ಮಾಡಲಾಗಿತ್ತು. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಬಂಕ್‌ಗಳ ಸಿಬ್ಬಂದಿಗೆ ಪ್ರತಿ ವರ್ಷ ವೇತನ ಪರಿಷ್ಕರಣೆ ಮಾಡಬೇಕು. ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕು. ಇದೆಲ್ಲದರ ಪರಿಣಾಮ ನಿರ್ವಹಣೆ ವೆಚ್ಚ ಹೆಚ್ಚಾಗುತ್ತಿದೆ. ಈ ಎಲ್ಲ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದರು.

ಖಾಸಗಿ ಪೆಟ್ರೋಲಿಯಂ ಕಂಪನಿಗಳಾದ ಶೆಲ್, ನಾಯರಾ ಪೆಟ್ರೋಲ್ ಬಂಕ್‌ಗಳು ಈ ಹೋರಾಟದಲ್ಲಿ ಭಾಗವಹಿಸುತ್ತಿಲ್ಲ. ಅವುಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ.

ಎಸ್ಸೆಸ್ಸೆಲ್ಸಿ ಅಕ್ರಮ: ಏಳು ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ರಾಮನಗರ: ಮಾಗಡಿಯ ಪರೀಕ್ಷಾ ಕೇಂದ್ರವೊಂದರಲ್ಲಿ ನಡೆದಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಅಕ್ರಮ ಸಂಬಂಧ ಬಂಧಿಸಲಾದ 10 ಆರೋಪಿಗಳ ಪೈಕಿ ಏಳು ಮಂದಿಯನ್ನು ನ್ಯಾಯಾಂಗದ ವಶಕ್ಕೆ ನೀಡಲಾಗಿದ್ದು, ಉಳಿದ ಮೂವರನ್ನು ಹೆಚ್ಚಿನ ವಿಚಾರಣೆಗೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಎಲ್ಲ ಆರೋಪಿಗಳನ್ನು ಬುಧವಾರ ರಾತ್ರಿ ಮಾಗಡಿ ಜೆಎಂಎಫ್‌ಸಿ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು.

6ನೇ ಪುಟ ನೋಡಿ

ಒಳ ಪುಟಗಳಲ್ಲಿ

7 ವರ್ಷ ಆಸ್ಪತ್ರೆಯಲ್ಲಿದ್ದ ಮಹಿಳೆ ಸಾವು; ₹ 9.5 ಕೋಟಿ ಬಿಲ್ 3D

ಗಂಗಾ ಮಾತೆ ಬ್ರಹ್ಮಕಲಶ ಪ್ರತಿಷ್ಠಾಪನೆ 6
ಚೀನಾ ಸೇನಾಭ್ಯಾಸ: ಅಮೆರಿಕ– ಜಪಾನ್ ಜಂಟಿ ವೈಮಾನಿಕ ಅಭ್ಯಾಸ 11

ಸಂಕ್ಷಿಪ್ತ ಸುದ್ದಿ

ಕೇರಳದತ್ತ ಮುಂಗಾರು ಮಾರುತ

ನವದೆಹಲಿ(ಪಿಟಿಐ): ಆರು ದಿನಗಳ ವಿರಾಮದ ಬಳಿಕ ನೈರುತ್ಯ ಮುಂಗಾರು ಗುರುವಾರ ದಕ್ಷಿಣ ಶ್ರೀಲಂಕಾ ಆವರಿಸಿದ್ದು, ಕ್ರಮೇಣ ಕೇರಳದ ಕಡೆಗೆ ಚಲಿಸಲಾರಂಭಿಸಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ದಕ್ಷಿಣ ಅರಬ್ಬಿ ಸಮುದ್ರದ ಕೆಲವು ಭಾಗಗಳು, ಮಾಲ್ಡೀವ್ಸ್‌ನ ಬಹುತೇಕ ಭಾಗ, ಲಕ್ಷದ್ವೀಪದ ಪಕ್ಕದ ಪ್ರದೇಶಗಳಲ್ಲಿ ನೈರುತ್ಯ ಮುಂಗಾರು ಮುನ್ನಡೆಯಲು ಪರಿಸ್ಥಿತಿ ಅನುಕೂಲಕರವಾಗಿವೆ' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ತಿಳಿಸಿದೆ.

ಮುಂದಿನ ಎರಡು ದಿನಗಳಲ್ಲಿ ಕೇರಳ, ಲಕ್ಷದೀಪದಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಹೇಳಿದೆ. ನೈರುತ್ಯ ಮುಂಗಾರು ಇದೇ 27ರಂದು ಕೇರಳ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಈ ಹಿಂದೆ ಹೇಳಿತ್ತು. ಕೇರಳದಲ್ಲಿ ಸಾಮಾನ್ಯವಾಗಿ ಜೂನ್ 1ಕ್ಕೆ ಮುಂಗಾರು ಆರಂಭವಾಗುವುದು ವಾಡಿಕೆ.

ಲಾಂಗ್‌ಜಂಪ್ ಶ್ರೀಶಂಕರ್‌ಗೆ ಚಿನ್ನ

ನವದೆಹಲಿ: ಭಾರತದ ಒಲಿಂಪಿಯನ್ ಮುರಳಿ ಶ್ರೀಶಂಕರ್ ಅವರು ಗ್ರೀಸ್‌ನಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಜಂಪಿಂಗ್ ಕೂಟದ ಲಾಂಗ್‌ಜಂಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಕಲಿಥೀಯಾದಲ್ಲಿ ಗುರುವಾರ ನಡೆದ ಸ್ಪರ್ಧೆಯಲ್ಲಿ ಅವರು 8.31 ಮೀಟರ್ಸ್ ಸಾಧನೆಯೊಂದಿಗೆ ಮೊದಲಿಗರಾದರು. ಸ್ವೀಡನ್‌ನ ತೊಬಿಯಾಸ್ ಮಾಂಟ್ಲರ್ (8.27 ಮೀ) ಮತ್ತು ಫ್ರಾನ್ಸ್‌ನ ಜೂಲ್ಸ್ ಪೊಮೆರಿ (8.17 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗಳಿಸಿದರು. 11

ಥರ್ಡ್ ಪಾರ್ಟಿ ವಿಮೆ ಕಂತು ಜೂನ್ 1ರಿಂದ ಹೆಚ್ಚಳ

ನವದೆಹಲಿ (ಪಿಟಿಐ): ಕಾರು, ದ್ವಿಚಕ್ರ ವಾಹನ ಮತ್ತು ಸರಕು ಸಾಗಣೆ ವಾಹನಗಳ ಥರ್ಡ್ ಪಾರ್ಟಿ ವಿಮೆಯ ಕಂತು ಜೂನ್ 1ರಿಂದ ಹೆಚ್ಚಾಗಲಿದೆ.

ಈ ಕುರಿತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಪರಿಷ್ಕೃತ ಅಧಿಸೂಚನೆ ಹೊರಡಿಸಿದೆ. ಇದೇ ಮೊದಲ ಬಾರಿಗೆ ರಸ್ತೆ ಸಾರಿಗೆ ಸಚಿವಾಲಯವು ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದೊಂದಿಗೆ (ಐಆರ್‌ಡಿಎಐ) ಸಮಾಲೋಚನೆ ನಡೆಸಿ ಥರ್ಡ್ ಪಾರ್ಟಿ ವಿಮೆ ಮೊತ್ತವನ್ನು ನಿರ್ಧರಿಸಿದೆ. ಈ ಮೊದಲು ವಿಮೆ ಕಂತು ಹೆಚ್ಚಳದ ಅಧಿಸೂಚನೆಯನ್ನು ಐಆರ್‌ಡಿಎಐ ಹೊರಡಿಸುತ್ತಿತ್ತು.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶುಕ್ರವಾರದ ಉಷ್ಣಾಂಶ
31° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ

ಶನಿವಾರ	ಭಾನುವಾರ	ಸೋಮವಾರ
32° 21°	32° 21°	32° 21°

ನಾವು ಎಲ್ಲದಕ್ಕೂ ಸಿದ್ಧ: ಡಿ.ಕೆ.ಸುರೇಶ್

ಬೆಂಗಳೂರು: 'ಬಿಜೆಪಿ ಸರ್ಕಾರದ ಒತ್ತಡದಿಂದ, ಷಡ್ಯಂತ್ರದಿಂದ ಡಿ.ಕೆ. ಶಿವಕುಮಾರ್ ಹಾಗೂ ನಮ್ಮ ಪಕ್ಷದ ನಾಯಕರು ಸಮಸ್ಯೆಗಳನ್ನು ಎದುರಿಸಿದ್ದಾರೆ. ನಾವು ಎಲ್ಲದಕ್ಕೂ ಸಿದ್ಧವಾಗಿದ್ದೇವೆ' ಎಂದು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿ, 'ನಾವು ಯಾವುದೇ ಕಾರಣಕ್ಕೂ ಅವರಿಗೆ ಹೆದರುವುದಿಲ್ಲ, ಸುದೀರ್ಘವಾಗಿ ತನಿಖೆ ನಡೆಯುತ್ತಲೇ ಇದೆ. ಅದನ್ನು ಎದುರಿಸಲು ನಾವು ಮಾನಸಿಕವಾಗಿ, ದೈಹಿಕವಾಗಿ ಸಮರ್ಥ-ವಾಗಿದ್ದೇವೆ. ಸರ್ಕಾರದವರು ಕೇಸ್ ಆದರೂ ಹಾಕಲಿ, ಜೈಲಿಗಾದರೂ ಹಾಕಲಿ. ನಾವು ಯಾವುದೇ ತಪ್ಪು ಮಾಡಿಲ್ಲ. ಮೋದಿ ಅವರು ಪ್ರಧಾನಿಯಾದ ಬಳಿಕ, ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿರುವವರನ್ನು ಯಾವ ರೀತಿ ಹತ್ತಿಕ್ಕಲಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇದು ಕೂಡ ಅದರ ಭಾಗ' ಎಂದರು.

'ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ರಚಿಸುವ ಮುನ್ನ ಶಾಸಕರ ಖರೀದಿ ಪ್ರಕರಣ ನಡೆದಿದೆ. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸಿಎಂ ಹುದ್ದೆ ಮಾರಾಟಕ್ಕಿದೆ ಎಂದಿದ್ದಾರೆ. ಈ ಬಗ್ಗೆ ಸಿಬಿಐ, ಇಡಿ ಯಾಕೆ ಪಾರದರ್ಶಕವಾಗಿ ತನಿಖೆ ಮಾಡಿಲ್ಲ' ಎಂದು ಪ್ರಶ್ನಿಸಿದರು.

ಹಾಲಿ ಗುತ್ತಿಗೆದಾರರ ಕಾರ್ಯವೈಖರಿಗೆ ಬಿಬಿಎಂಪಿ ಅತೃಪ್ತಿ

ಇಂದಿರಾ ಕ್ಯಾಂಟೀನ್ ನಿರ್ವಹಣೆ ಇಸ್ಕಾನ್‌ಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಯನ್ನು ಇಸ್ಕಾನ್‌ಗೆ ವಹಿಸಲು ಉತ್ಸುಕವಾಗಿರುವ ಬಿಬಿಎಂಪಿ, ಈ ಸಂಬಂಧ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ತಯಾರಿ ನಡೆಸಿದೆ.

'ಹಾಲಿ ಗುತ್ತಿಗೆದಾರರ ಬಗ್ಗೆ ಪಾಲಿಕೆಗೆ ತೃಪ್ತಿ ಇಲ್ಲ. ಆದ್ದರಿಂದ ಈ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತೆ (ಹಣಕಾಸು) ತುಳಸಿ ಮದ್ದಿನೇನಿ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಟೆಂಡರ್ ಕರೆದು ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆ ವಹಿಸಿದಾಗ ಏನಾಯಿತು ಎಂಬುದನ್ನು ನಾವು ನೋಡಿದ್ದೇವೆ. ಈ ಕ್ಯಾಂಟೀನ್‌ಗಳನ್ನು ಉದಾತ್ತ ಉದ್ದೇಶಕ್ಕಾಗಿ ತೆರೆಯಲಾಗಿದ್ದು, ಬಿಬಿಎಂಪಿ ಜತೆ ನಿಸ್ವಾರ್ಥವಾಗಿ ಕೆಲಸ ಮಾಡುವ ಪಾಲುದಾರರ ಅಗತ್ಯವಿದೆ. ಪೌರ ಕಾರ್ಮಿಕರು, ಶಾಲಾ ಮಕ್ಕಳಿಗೆ ಇಸ್ಕಾನ್ ಆಹಾರ ಪೂರೈಸುತ್ತಿರುವ ವಿಧಾನ ನೋಡಿದರೆ ಉತ್ತಮವಾಗಿ ನಿರ್ವಹಿಸುತ್ತದೆ ಎಂಬ ನಂಬಿಕೆ ಇದೆ. ಫಲಾನುಭವಿಗಳು ಉಪಾಹಾರಕ್ಕೆ ₹5 ಮತ್ತು ಮಧ್ಯಾಹ್ನದ ಊಟಕ್ಕೆ ₹10 ಪಾವತಿಸಲಿದ್ದಾರೆ. ಹೆಚ್ಚುವರಿ ಹೊರೆಯನ್ನು ಬಿಬಿಎಂಪಿ ಭರಿಸಲಿದೆ' ಎಂದರು.

'ಬೆಳ್ಳುಳ್ಳಿ, ಈರುಳ್ಳಿ ಬಳಕೆಯನ್ನು ಇಸ್ಕಾನ್ ನಿರಾಕರಿಸಿರುವುದರಿಂದ ಆಹಾರ ರುಚಿ ಇರುವುದಿಲ್ಲ ಎಂಬ ಮಾತುಗಳೂ ಇವೆ. ಆದರೆ ರುಚಿ ಮತ್ತು ಗುಣಮಟ್ಟದ ಆಹಾರ ನೀಡುವ ಭರವಸೆಯನ್ನು ಇಸ್ಕಾನ್ ನೀಡಿದೆ. ಕ್ಯಾಂಟೀನ್ ಹೆಸರು ಬದಲಾವಣೆಯ ಪ್ರಸ್ತಾವನೆ ಇಲ್ಲ' ಎಂದರು.

'ದೂರುಗಳ ಆಧಾರದಲ್ಲಿ ನಿರ್ಧಾರ'

'ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದೆ ಎಂಬ ದೂರುಗಳ ಆಧಾರದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. 2017ರಲ್ಲಿ ದರ ನಿಗದಿಯಾಗಿದ್ದು, ದಿನಕ್ಕೆ ₹55 ಪಾವತಿಸುತ್ತಿದ್ದೇವೆ. ಇದರಲ್ಲಿ ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟವೂ ಸೇರಿದೆ. ಎಲ್ಲಾ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿದೆ. 'ಇಸ್ಕಾನ್' ಈಗ ₹78 ಕೇಳುತ್ತಿದೆ. ಅಷ್ಟು ಮೊತ್ತ ಪಾವತಿ ಕಷ್ಟ, ಮಾತುಕತೆ ನಡೆಸುತ್ತೇವೆ' ಎಂದು ತುಳಸಿ ಮದ್ದಿನೇನಿ ತಿಳಿಸಿದರು.

ಮಥುರಾ: ತ್ವರಿತ ವಿಚಾರಣೆಗೆ ನಿರ್ದೇಶನ

ಮಥುರಾ (ಪಿಟಿಐ): ಶಾಹಿ ಈದ್ಗಾ ಮಸೀದಿಯ ಸಮೀಕ್ಷೆಗೆ ಕೋರ್ಟ್ ಕಮಿಷನರ್ ನೇಮಿಸಬೇಕು ಎಂದು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ತ್ವರಿತವಾಗಿ ನಡೆಸಬೇಕು ಎಂದು ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಕೆಳಹಂತದ ಕೋರ್ಟ್‌ಗೆ ನಿರ್ದೇಶಿಸಿದೆ.

ಅರ್ಜಿಗೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸುವಂತೆ ಇದೇ 23ರಂದು ಶಾಹಿ ಈದ್ಗಾ ಮಸೀದಿ ನಿರ್ವಹಣಾ ಸಮಿತಿಗೆ ಕೆಳಹಂತದ ಕೋರ್ಟ್ ಸೂಚಿಸಿತ್ತು. ಆ ಬಳಿಕ ಅರ್ಜಿದಾರರು ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ಪರಿಷ್ಕೃತ ಅರ್ಜಿ ಸಲ್ಲಿಸಿದ್ದರು.

ಮಹಿಳೆ ಮೇಲೆ ಗುಂಡಿನ ದಾಳಿ

ಶಿಗ್ಗಾವಿ: ತಾಲ್ಲೂಕಿನ ಹುಲಗೂರ ಗ್ರಾಮದಲ್ಲಿ ಮನೆಯ ಮೇಲೆ ಗುಂಡಿನ ದಾಳಿ ನಡೆದಿದ್ದು, ಕಟ್ಟೆಯ ಮೇಲೆ ಕುಳಿತಿದ್ದ ಸಲ್ಮಾಬಾನು (31) ಅವರ ಮೇಲೆ ಗುಂಡು ಹಾರಿಸಲಾಗಿದೆ. ಬಂದೂಕಿನಿಂದ ಸಿಡಿದ ಗುಂಡು ಅವರಿಗೆ ತಗುಲದೆ ಮನೆಯ ತಗಡು ಸೀಳಿ, ಗೋಡೆಗೆ ಬಡಿದಿದೆ.

ಸುದ್ದಿ 2 ನಿಮಿಷ

ಪಿಎಸ್‌ಐಗೆ ದೋಷಾರೋಪ ಪಟ್ಟಿ ಸಲ್ಲಿಸುವ ಅಧಿಕಾರವಿದೆ: ಹೈಕೋರ್ಟ್

ಬೆಂಗಳೂರು: 'ಅಪರಾಧ ಪ್ರಕರಣಗಳ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವ ಅಧಿಕಾರವನ್ನು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹೊಂದಿದ್ದಾರೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಆತ್ಮಹತ್ಯೆಗೆ ಶರಣಾದ ವಾರ ಪತ್ರಿಕೆಯೊಂದರ ಸಂಪಾದಕ ಹಲ್ಲಗೆರೆ ಶಂಕರ್ ಅವರ ಇಬ್ಬರು ಅಳಿಯಂದಿರಾದ ಇ.ಎಸ್. ಪ್ರವೀಣ್ ಕುಮಾರ್ ಹಾಗೂ ಈಡಿಗ ಶ್ರೀಕಾಂತ್ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣದಲ್ಲಿನ ಅರ್ಜಿದಾರ ಆರೋಪಿಗಳು ಹಲ್ಲಗೆರೆ ಶಂಕರ್ ಮತ್ತವರ ಕುಟುಂಬದ ಸದಸ್ಯರಿಗೆ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆ ಎಂಬುದು ಮರಣ ಪತ್ರದಿಂದ ಸ್ಪಷ್ಟವಾಗಿದೆ. ಮಗು ಸೇರಿದಂತೆ ತಾಯಿ ಹಾಗೂ ಮೂವರು ಮಕ್ಕಳು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಈ ಪ್ರಕರಣ-ವನ್ನು ಸಾಮಾನ್ಯ ಆತ್ಮಹತ್ಯೆ ಎಂದು ಪರಿಗಣಿಸಲಾಗದು. ಸಂತ್ರಸ್ತರು ಮರಣ ಪತ್ರದಲ್ಲಿ ತಮ್ಮ ಸಾವಿಗೆ ನ್ಯಾಯ ಕೋರಿರುವ ವಿಚಾರ ಸಾರ್ವಜನಿಕರ ಗಮನ ಸೆಳೆದಿದೆ. ಈ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ಜಾಮೀನು ನೀಡಲಾಗದು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

'ವಾರ್ಡ್‌ಗಳಿಗೆ ಸಾಧಕರ ಹೆಸರಿಡಿ'

ಬೆಂಗಳೂರು: 'ಬಿಬಿಎಂಪಿ ವಾರ್ಡ್‌ಗಳಿಗೆ ಬೆಂಗಳೂರಿನ ಮೂಲ ಗ್ರಾಮಗಳು, ನಾಡಿನ ಸಾಧಕರು, ಸಾಮಾಜಿಕ ಹಾಗೂ ಸಾಂಸ್ಕೃತಿಕ ದ್ಯೋತಕಗಳ ಹೆಸರುಗಳನ್ನು ಇಡಬೇಕು' ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಬಗ್ಗೆ ಪತ್ರ ಬರೆದಿರುವ ಅವರು, 'ಬಿಬಿಎಂಪಿಯಲ್ಲಿ ಹೊಸದಾಗಿ ರಚನೆಯಾಗಲಿರುವ ಹೆಚ್ಚುವರಿ 45 ವಾರ್ಡ್‌ಗಳು ಸೇರಿದಂತೆ ಒಟ್ಟು 243 ವಾರ್ಡ್‌ಗಳಿಗೆ ಸ್ಥಳೀಯರ ಹೆಸರುಗಳನ್ನು ಇಡಬೇಕು. ಸಾಹಿತಿಗಳು, ಚಿಂತಕರು, ನಾಡಿನ ಸ್ವಾತಂತ್ರ್ಯ ಹೋರಾಟಗಾರರು, ಐತಿಹಾಸಿಕ ವ್ಯಕ್ತಿಗಳು, ವಿಜ್ಞಾನಿಗಳು, ಶಿಕ್ಷಣ ತಜ್ಞರು ಹಾಗೂ ನದಿಗಳ ಹೆಸರನ್ನು ನಾಮಕರಣ ಮಾಡಬೇಕು' ಎಂದು ಮನವಿ ಮಾಡಿದ್ದಾರೆ.

ಲಾಲ್‌ಬಾಗ್‌ನಲ್ಲಿ ಬೆಳಿಗ್ಗೆ 8ರಿಂದ ಸಂಜೆ 8ರವರೆಗೆ ಪ್ರದರ್ಶನ

ಇಂದಿನಿಂದ ಮಾವು – ಹಲಸು ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣಕ್ಕೆ ಎರಡು ವರ್ಷಗಳಿಂದ ನಡೆಯದೇ ಇದ್ದ ಮಾವು-ಹಲಸು ಮೇಳ ಶುಕ್ರವಾರದಿಂದ (ಮೇ 27) ಜೂ.13 ರವರೆಗೆ ಲಾಲ್‌ಬಾಗ್‌ನಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ. ನಾಗರಾಜು, 'ಮಾವು-ಹಲಸು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ತರಹೇವಾರಿ ಹಾಗೂ ಆರೋಗ್ಯಯುತ ಹಣ್ಣುಗಳು ಸಿಗಲಿವೆ. ಮಾವು ಬೆಳೆಗಾರರು ಬೆಳೆದ ಫಲವನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ಆಶಯ ಇದಾಗಿದೆ. ಬಾದಾಮಿ, ಮಲ್ಲಿಕಾ, ರಸಪುರಿ, ಕೇಸರ್, ಬೈಗನಪಲ್ಲಿ, ಮಲಗೋವಾ, ತೋತಾಪುರಿ ಸೇರಿದಂತೆ ವಿವಿಧ ತಳಿಗಳ ಮಾವು ಖರೀದಿಗೆ ಸಿಗಲಿದೆ. ಸಿಎಂ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಸಂಜೆ 4.30ಕ್ಕೆ ಮೇಳವನ್ನು ಉದ್ಘಾಟಿಸಲಿದ್ದಾರೆ. ತೋಟಗಾರಿಕೆ ಸಚಿವ ಮುನಿರತ್ನ, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಉದಯ್ ಬಿ. ಗರುಡಾಚಾರ್, ಅ.ದೇವೇಗೌಡ ಭಾಗ-ವಹಿಸಲಿದ್ದಾರೆ' ಎಂದರು.

ನಿಗಮದ ಅಧ್ಯಕ್ಷ ಕೆ.ವಿ. ನಾಗರಾಜ್ ಮಾತನಾಡಿ, 'ಮೇಳದಲ್ಲಿ ಹಲವಾರು ಬಗೆಯ ಹಲಸಿನ ಹಣ್ಣು ಹಾಗೂ ಹಲಸಿನ ಉತ್ಪನ್ನಗಳು ಖರೀದಿಗೆ ಸಿಗಲಿವೆ. ಹಳದಿ, ಕೇಸರಿ, ಕೆಂಪು ಬಣ್ಣ ಹಾಗೂ ವೈವಿಧ್ಯಮಯ ಹಲಸು ಮತ್ತು ಹಪ್ಪಳ, ಚಿಪ್ಸ್ ಕೂಡ ಮೇಳದ ಆಕರ್ಷಣೆಯಾಗಲಿದೆ' ಎಂದರು.

ರೈತರು ಹಾಗೂ ರೈತ ಉತ್ಪಾದಕ ಸಂಘಗಳಿಗೆ 108 ಮಳಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಹಲಸು ಬೆಳೆಗಾರರಿಗೆ 16 ಹಾಗೂ ಉಪ ಉತ್ಪನ್ನಗಳ ಮಾರಾಟಗಾರರಿಗೆ 8 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ ಎಂದರು.

ಮಾವು–ಹಲಸು ಮೇಳ ಕುರಿತ ಪತ್ರಿಕಾಗೋಷ್ಠಿಯಲ್ಲಿ ರೈತ ಭಾಸ್ಕರ ರಾವ್, ಹಲಸು ಹಣ್ಣಿನ ತಜ್ಞೆ ಶ್ಯಾಮಲ, ನಿಗಮದ ಅಧ್ಯಕ್ಷ ಕೆ.ವಿ. ನಾಗರಾಜ್, ವ್ಯವಸ್ಥಾಪಕ ನಿರ್ದೇಶಕ ಸಿ.ಜಿ. ನಾಗರಾಜ್ ಹಾಗೂ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಲಲಿತಾ ಅವರು ಹಣ್ಣುಗಳನ್ನು ಪ್ರದರ್ಶಿಸಿದರು

– ಪ್ರಜಾವಾಣಿ ಚಿತ್ರ

'ಗ್ರಾಮೀಣ ವರದಿಗಾರಿಕೆ' ಹಾಗೂ 'ಸುದ್ದಿ ಮಾಧ್ಯಮದಲ್ಲಿ ಕೃಷಿ ಒಂದು ನೋಟ' ಪುಸ್ತಕಗಳನ್ನು ಸಚಿವ ವಿ.ಸುನಿಲ್‌ಕುಮಾರ್ ಬಿಡುಗಡೆ ಮಾಡಿದರು. ಲೇಖಕ ಚಿನ್ನಸ್ವಾಮಿ ವಡ್ಡಗೆರೆ, ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಮಾಜಿ ಅಧ್ಯಕ್ಷ ಎಂ.ಸಿದ್ದರಾಜು, ಸಿ.ರೂಪಾ, ಮಲ್ಲಿಕಾರ್ಜುನ ಸಿದ್ದಣ್ಣನವರ ಇದ್ದರು

– ಪ್ರಜಾವಾಣಿ ಚಿತ್ರ

'ಜಿಲ್ಲಾ ಮಟ್ಟದಲ್ಲಿ ಬರಹಗಾರರ ಶಿಬಿರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಸಮೂಹದಲ್ಲಿ ಓದುವ ಮತ್ತು ಬರೆಯುವ ಹವ್ಯಾಸ ಹೆಚ್ಚಿಸಲು ಜಿಲ್ಲಾ ಮಟ್ಟದಲ್ಲಿ ಬರಹಗಾರರ ಶಿಬಿರ ಆಯೋಜಿಸುವ ಅಗತ್ಯವಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ಅಭಿಪ್ರಾಯಪಟ್ಟರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಗುರುವಾರ ಆಯೋಜಿಸಿದ್ದ ಕಾರ್ಯ-ಕ್ರಮದಲ್ಲಿ 'ಗ್ರಾಮೀಣ ವರದಿಗಾರಿಕೆ' ಹಾಗೂ 'ಸುದ್ದಿ ಮಾಧ್ಯಮದಲ್ಲಿ ಕೃಷಿ ಒಂದು ನೋಟ' ಪುಸ್ತಕಗಳ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ವರದಿಗಾರಿಕೆಯಲ್ಲಿ ವಾಸ್ತವಕ್ಕಿಂತ ರೋಚಕತೆಗೆ ಆದ್ಯತೆ ಸಿಗುತ್ತಿದೆ. ಇದರ ನಡುವೆ ವಾಸ್ತವ ಬಿಂಬಿಸುವ ಬರಹಗಳು ಹೆಚ್ಚಾಗಬೇಕಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬರಹಗಾರರ ತಂಡಗಳನ್ನು ಹುಟ್ಟು ಹಾಕುವ ಅಗತ್ಯವಿದೆ. ಬರಹಗಾರರ ಶಿಬಿರ ಆಯೋಜಿಸಲು ಅಕಾಡೆಮಿ ಮುಂದಾದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು' ಎಂದರು.

'ಎಬಿವಿಪಿ ಕಾರ್ಯಕರ್ತನಾಗಿದ್ದ ನಾನು ನಮ್ಮದೇ ಕಾರ್ಯಕ್ರಮಗಳ ಬಗ್ಗೆ ವರದಿ ಬರೆದು ಪತ್ರಿಕಾ ಕಚೇರಿಗಳಿಗೆ ತಲುಪಿಸುವ ಮೂಲಕ ಮುಂದೆ ಪತ್ರಕರ್ತನಾಗಿಯೂ ಕೆಲಸ ಮಾಡಿದ್ದೆ. ಅಂದು ಪತ್ರಕರ್ತನಾಗಿ ಮಾಡಿದ್ದ ಕೆಲಸದಿಂದ ಗ್ರಾಮೀಣ ಜನರ ಬವಣೆ ಅರ್ಥವಾಗಿತ್ತು. ಜನಪ್ರತಿನಿಧಿಯಾಗಿ ಅವರ ನೋವುಗಳಿಗೆ ಸ್ಪಂದಿಸಲು ಸಾಧ್ಯವಾಯಿತು' ಎಂದು ಅವರು ಹೇಳಿದರು.

ಕೃತಿಗಳ ಬಗ್ಗೆ 'ಪ್ರಜಾವಾಣಿ' ಮುಖ್ಯ ಉಪಸಂಪಾದಕ ಗಾಣದಾಳು ಶ್ರೀಕಂಠ, 'ಕನ್ನಡಪ್ರಭ' ಹುಬ್ಬಳ್ಳಿ ಬ್ಯೂರೊ ಮುಖ್ಯಸ್ಥ ಮಲ್ಲಿಕಾರ್ಜುನ ಸಿದ್ದಣ್ಣನವರ ಮಾತನಾಡಿದರು. ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಉಪಸ್ಥಿತರಿದ್ದರು.

'ಲೇಖಕಿಯರ ಸಂಘಕ್ಕೆ ಚುನಾವಣೆ'

ಬೆಂಗಳೂರು: 'ಕೆಲವು ಲೇಖಕಿಯರ ಅಭಿಪ್ರಾಯಗಳನ್ನು ಗೌರವಿಸಿ, ಕರ್ನಾಟಕ ಲೇಖಕಿಯರ ಸಂಘಕ್ಕೆ ಚುನಾವಣೆ ನಡೆ-ಸಬೇಕೆನ್ನುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಸಂಘದ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ತಿಳಿಸಿದ್ದಾರೆ.

ಅಧಿಕಾರ ಅವಧಿ ಮುಗಿದಿದ್ದರೂ ಚುನಾವಣೆ ನಡೆಸಲು ವನಮಾಲಾ ಸಂಪನ್ನಕುಮಾರ್ ಸಿದ್ಧರಿಲ್ಲ ಎಂದು ಸಂಘದ ಹಲವು ಸದಸ್ಯರು ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿದ್ದರು. ಹೇಮಲತಾ ಮಹಿಷಿ, ಬಿ.ಟಿ. ಲಲಿತಾ ನಾಯಕ್, ವಿಜಯಮ್ಮ, ಉಷಾ ಪಿ. ರೈ, ಸಂಧ್ಯಾ ರೆಡ್ಡಿ, ವಸುಂಧರಾ ಭೂಪತಿ ಮುಂತಾದವರು ಸಹಕಾರ ಸಂಘಗಳ ಇಲಾಖೆ ರಿಜಿಸ್ಟ್ರಾರ್ ಅವರಿಗೆ ಈ ಕುರಿತು ಪತ್ರ ಬರೆದಿದ್ದರು.

'ಸಂಘವು 2022ರ ಏ.17ರಂದು ಕರೆದಿದ್ದ ವಾರ್ಷಿಕ ಸಭೆಯಲ್ಲಿ ಚುನಾವಣೆಯ ಬಗ್ಗೆ ಸದಸ್ಯರ ಅಭಿಪ್ರಾಯ ಸಂಗ್ರಹಿಸಲಾಯಿತು. ಕೋವಿಡ್‌ನಿಂದ ಎರಡು ವರ್ಷಗಳು ಸಂಘದ ಕೆಲಸ ಕಾರ್ಯಗಳನ್ನು ಮಾಡಲಾಗದ ಕಾರಣ, ಸಮಯ ಮತ್ತು ಹಣದ ಸದುಪಯೋಗ ದೃಷ್ಟಿಯಿಂದ ಚುನಾವಣೆ ಬೇಡವೆಂದು ಹಲವು ಸದಸ್ಯರು ತಿಳಿಸಿದ್ದರು. ಸರ್ವ ಸದಸ್ಯರ ಸಭೆಯಲ್ಲಿ ಚುನಾವಣೆ ಬೇಡ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದರೂ ಚುನಾವಣೆ ನಡೆಸುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ವನಮಾಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಕುಂಭಾಭಿಷೇಕ: ವಿಧುಶೇಖರ ಭಾರತಿ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಶೃಂಗೇರಿ ಶಾರದಾ ಮಠ, ಗಿರಿನಗರ, ಬೆಳಿಗ್ಗೆ 9.30

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮತ್ತು ವಿದ್ಯಾರ್ಥಿ ವೇತನ ಪ್ರದಾನ: ಸ್ವಾಮಿನಾರಾಯಣ ಆನಂದ ಸರಸ್ವತಿ, ಅತಿಥಿಗಳು: ದಿನೇಶ್ ಗುಂಡೂರಾವ್, ನರೇಂದ್ರ ಏಕಬೋಟೆ, ಸತ್ಯನಾರಾಯಣ ಢಗೆ, ರೂಪಾ ಸವ್ವಾಸೇರೆ, ಶಿಲ್ಪಾ ಸವ್ವಾಸೇರೆ, ಆಯೋಜನೆ: ಜಿಹ್ವೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ಸ್ಥಳ: ಪ್ರೊ. ಬಿ.ವಿ. ನಾರಾಯಣರಾವ್ ಸಭಾಂಗಣ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 10

ಬಿ. ಪುಟ್ಟಸ್ವಾಮಯ್ಯ ಅವರ 125ನೇ ಜಯಂತಿ ರಂಗ ಸಂಭ್ರಮ: ಉದ್ಘಾಟನೆ: ವೈ.ಎ. ನಾರಾಯಣಸ್ವಾಮಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪನ್ಯಾಸ: ಬಿ. ನಂಜುಂಡಸ್ವಾಮಿ, ರಂಗಗೌರವ: ಎಚ್. ಎನ್. ಸದಾಶಿವ, ಮುಖ್ಯ ಅತಿಥಿಗಳು: ಲೀಲಾದೇವಿ ಆರ್. ಪ್ರಸಾದ್, ರು. ಬಸಪ್ಪ, ಪ್ರಭಾಕರ್ ಜೋಶಿ, ಸಿ.ಎ. ರಾಮಚಂದ್ರರಾವ್, ಆಯೋಜನೆ: ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ, ಸ್ಥಳ: ಶೇಷಾದ್ರಿಪುರ ಶಿಕ್ಷಣ ದತ್ತಿ ಸಭಾಂಗಣ, ನಾಗಪ್ಪ ಬೀದಿ, ಶೇಷಾದ್ರಿಪುರ, ಸಂಜೆ 5.15

ಅಂತರ್ಯಾಗ ಸುಧಾ: ಯೋಗ, ನೃತ್ಯ, ಸಂಗೀತ, ಮುಖ್ಯ ಅತಿಥಿಗಳು: ತೇಜಸ್ವಿ ಸೂರ್ಯ, ಆನೂರು ಅನಂತಕೃಷ್ಣ ಶರ್ಮ, ಡಾ.ಎಂ.ಆರ್. ಸೂರ್ಯಪ್ರಸಾದ್, ಆಯೋಜನೆ: ಸಮುದ್ಭವ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ಮಾವು ಮತ್ತು ಹಲಸು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಚಾಲನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ, ತೋಟಗಾರಿ ಇಲಾಖೆ, ಸ್ಥಳ: ಲಾಲ್‌ಬಾಗ್, ಸಂಜೆ 4.30

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು560 052 ದೂ:080–22263479.
ಸಂಖ್ಯೆ : ಬಿಎಂಆರ್‌ಡಿಎ/ಲೆಕ್ಕಶಾಖೆ/32/2021–22 ದಿನಾಂಕ: 26.05.2022
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಚ್ಚುವರಿ ನಿಧಿಗಳ ಹೂಡಿಕೆಗಾಗಿ ಇ–ಹರಾಜನ್ನು GoKಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: www.eproc.karnataka.gov.inನಿಂದ ಪಡೆಯಬಹುದಾಗಿದೆ.
ಸಹಿ/- ಸಹಾಯಕ ಮಹಾನಗರ ಆಯುಕ್ತರು(ಪ್ರ),
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560064.
FAX:080-28460367, PH:080-28072739
ವೆಬ್‌ಸೈಟ್: www.rwf.indianrailways.gov.in ಇಮೇಲ್ :smm.rwfbllr@gmail.com
ಆಜಾದೀ का अमृत महोत्सव
ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/003/2022–23 ದಿ : 25/05/2022
ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಈ ಕೆಳಕಂಡ ಸಾಮಗ್ರಿಗಳನ್ನು ಪೂರೈಸಲು ಆಸಕ್ತ ಮಾರಾಟಗಾರರಿಂದ ಅನುಭವಿ OEMಗಳು / ತಯಾರಕರಿಂದ ಜಾಗತಿಕ, ಎಲೆಕ್ಟ್ರಾನಿಕ್ ಟೆಂಡರ್‌ನ್ನು ಭಾರತೀಯ ರೈಲ್ವೆಯ ಆನ್‌ಲೈನ್ ವೆಬ್‌ಸೈಟ್ www.ireps.gov.in ಮೂಲಕ ಆಹ್ವಾನಿಸಿದ್ದಾರೆ. ಟೆಂಡರ್‌ನ ದಾಖಲೆಗಳು ಮತ್ತು ಟೆಂಡರ್‌ಗೆ ಸಂಬಂಧಿಸಿದ ಯಾವುದೇ ತಿದ್ದುಪಡಿಗಳಿದ್ದರೆ, ನಮ್ಮ ಆನ್‌ಲೈನ್ ವೆಬ್‌ಸೈಟ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಸಂ	ಟೆಂಡರ್ ಸಂ	ಸಂಕ್ಷಿಪ್ತ ವಿವರಣೆ	ಪ್ರಮಾಣ	ಕೊ.ದಿನಾಂಕ & ಸಮಯ
1	P3215008	ಸ್ವಯಂಚಾಲಿತ ಅಲ್ಟ್ರಾಸಾನಿಕ್ ಫ್ಲೋ ಡಿಟೆಕ್ಟರ್ ವ್ಯವಸ್ಥೆ	2 ಸಂಖ್ಯೆ	20/07/22 14:00 ಘಂ.
2	P3215009	ಸ್ವಯಂಚಾಲಿತ ಅಲ್ಟ್ರಾಸಾನಿಕ್ ರೇಡಿಯಲ್ ಸ್ಕ್ಯಾನಿಂಗ್ ಯಂತ್ರ	1 ಜೊತೆ	
3	P3225010A	ಐಟಂ ನಂ.1: ಲೆಫ್ಟ್ ಹ್ಯಾಂಡ್ ಮೌಂಟಿಂಗ್(LH ಸೈಡ್) ಟರೆಟ್. ತಯಾರಕರು :ಸೌಟರ್/ಜರ್ಮನಿ ಮಾತ್ರ. ಐಟಂ ನಂ.2: ರೈಟ್ ಹ್ಯಾಂಡ್ ಮೌಂಟಿಂಗ್(RH ಸೈಡ್) ಟರೆಟ್. ತಯಾರಕರು : ಸೌಟರ್ / ಜರ್ಮನಿ ಮಾತ್ರ.	ಪ್ರತಿಯೊಂದು 1. ಸಂಖ್ಯೆ	23/06/22 14:00 ಘಂ.

ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ : www.rwf.indianrailways.gov.in ಅಥವಾ www.ireps.gov.in ನಲ್ಲಿ ನೋಡಬಹುದು.
ಉಪ ಮುಖ್ಯ ಸಾಮಗ್ರಿ ಪ್ರಬಂಧಕರು/ಜಿ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಶಾಖಾ ಕಛೇರಿ
ಎಸ್.ಎಲ್.ಎನ್ ಕಾಂಪ್ಲೆಕ್ಸ್, ಎಂ.ಜಿ.ರಸ್ತೆ, ಕೋಲಾರ, ಮೊ. ಸಂ:9448533478
ಸಾರ್ವಜನಿಕ ಪ್ರಕಟಣೆ
ಡಾ॥ ನಿಖಿತಾ ಎಸ್ ವಾಸನ್ ಕೋಂ ಭಾಸ್ಕರ್.ಬಿ.ಆರ್ ಎಂಬುವರು ಓಂ ಮಲ್ಲಿಕಾರ್ಜುನಾ ಪೌಲ್ಟ್ರೀ ಫಾರಂ ಘಟಕವನ್ನು ಸರ್ವೆ ನಂ.241/1, 2,3 ಮುತ್ತಕಪಲ್ಲಿ ಗ್ರಾಮ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, ಈ ವಿಳಾಸದಲ್ಲಿ ಸ್ಥಾಪಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕೋಲಾರ ಶಾಖೆಯಿಂದ ರೂ.300.00 ಲಕ್ಷಗಳ(ರೂಪಾಯಿ ಮೂರು ನೂರು ಲಕ್ಷಗಳು ಮಾತ್ರ)ಸಾಲ ಮಂಜೂರಾಗಿರುತ್ತದೆ.
ಸಂಸ್ಥೆಯು ಮಂಜೂರು ಮಾಡಿರುವ ಸಾಲಕ್ಕೆ ಉದ್ದಿಮೆದಾರರು ಷೆಡ್ಯೂಲ್ ಸ್ವತ್ತನ್ನು(ಶ್ರೀ ಬಿ.ಆರ್.ವಿಶ್ವನಾಥ್ ಬಿನ್ ಬಿ.ಎಂ.ರಾಮಚಂದ್ರಯ್ಯ ರವರ ಹೆಸರಿನಲ್ಲಿರುವ)ಪೂರಕ ಭದ್ರತೆಯಾಗಿ ಅಡಮಾನ/ಆಧಾರ ಮಾಡಲು ಒಪ್ಪಿರುತ್ತಾರೆ. ಈ ಸ್ವತ್ತಿನ ಕ್ರಯ ಪತ್ರದ ಸಂಖ್ಯೆ:ಖುಗಿಕ–1–01727/2006–07, CD NO. SVPD17 ದಿನಾಂಕ:13–11–2006 ರಲ್ಲಿ ಈ ಆಸ್ತಿಯನ್ನು ಶ್ರೀ ವೆಂಕಟರಾಮರೆಡ್ಡಿ ಬಿನ್ ಮುನಿರೆಪ್ಪ, ರತ್ನಮ್ಮ ಕೋಂ ವೆಂಕಟರಾಮರೆಡ್ಡಿ, ಪೂರ್ಣಪಲ್ಲಿ ಗ್ರಾಮ, ಯಲ್ದೂರು ಹೋಬಳಿ, ಶ್ರೀನಿವಾಸಪುರ ರವರಿಂದ ಶ್ರೀ ಬಿ.ಆರ್.ವಿಶ್ವನಾಥ್ ಬಿನ್ ಬಿ.ಎಂ.ರಾಮಚಂದ್ರಯ್ಯ, ಎಂ.ಜಿ.ರಸ್ತೆ, ಶ್ರೀನಿವಾಸಪುರ ರವರು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ಈ ಕ್ರಯದ ಮೂಲ ಕ್ರಯ ಪತ್ರದ ಸಂಖ್ಯೆ: SVP-1-01727/2006-07, CD NO. SVPD17 ದಿನಾಂಕ: 13–11–2006 ಈ ಮೂಲ ಕ್ರಯ ಪತ್ರ ಕಳೆದು ಹೋಗಿರುತ್ತದೆಂದು ತಿಳಿಸಿರುತ್ತಾರೆ.
ಆದ ಕಾರಣ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗೂ ಯಾವುದೇ ತರಹದ ಹಕ್ಕು ಬಾಧ್ಯತೆ, ಅಡಮಾನ, ಬೋಗ್ಯ, ತಕರಾರು ಇತ್ಯಾದಿಗಳು ಇದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರನ್ನು ಖುದ್ದಾಗಿ ಅಥವಾ ಲಿಖಿತ ಮುಖೇನ ಈ ಪ್ರಕಟಣೆಯಾದ 7 ದಿನಗಳ ಒಳಗಾಗಿ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು, ನಿಗದಿತ ದಿನಾಂಕದ ಒಳಗಾಗಿ ಆಕ್ಷೇಪಣೆ/ತಕರಾರು ಬಾರದಿದ್ದಲ್ಲಿ ಸದರಿ ಸ್ವತ್ತಿನ ಮೇಲೆ ಯಾವುದೇ ತರಹದ ತಂಟೆ/ತಕರಾರು/ಬಾಧ್ಯತೆ ಇತ್ಯಾದಿ ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತನ್ನು ಅಡಮಾನ/ಆಧಾರ ಮಾಡಿಕೊಳ್ಳಲಾಗುವುದು.
ಆಸ್ತಿಯ ಷೆಡ್ಯೂಲ್: ಸರ್ವೆ.ನಂ.241/1, 2,3 ಮುತ್ತಕಪಲ್ಲಿ ಗ್ರಾಮ ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಒಟ್ಟು ವಿಸ್ತೀರ್ಣ 4 ಎಕರೆ 31 ಗುಂಟೆವುಳ್ಳ ಸ್ವತ್ತಿಗೆ ಚೆಕ್ಕುಬಂದಿ. ಪೂರ್ವಕ್ಕೆ:– ಬಿ.ಆರ್.ವಿಶ್ವನಾಥ ರವರ ಸ್ವತ್ತು, ಪಶ್ಚಿಮಕ್ಕೆ:–ರಸ್ತೆ, ಉತ್ತರಕ್ಕೆ:–ಬಿ.ಆರ್.ವಿಶ್ವನಾಥ ರವರ ಸ್ವತ್ತು, ದಕ್ಷಿಣಕ್ಕೆ:– ಬಿ.ಆರ್.ವಿಶ್ವನಾಥ ರವರ ಸ್ವತ್ತು.
ದಿನಾಂಕ:
ಸ್ಥಳ:
ಸಹಿ/– ಶಾಖಾ ವ್ಯವಸ್ಥಾಪಕರು,
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ , ಶಾಖಾ ಕಛೇರಿ, ಕೋಲಾರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆರೋಗ್ಯಾಧಿಕಾರಿಗಳ ಕಛೇರಿ,
ಯಲಹಂಕ ವಲಯ, ಬೆಂಗಳೂರು – 560092.
ಸಂಖ್ಯೆ: ಬೃಬೆಂಮಪಾ/ಯ/ಆಅ/ಟೆಂಡರ್/01/2022–23 ದಿನಾಂಕ: 26–05–2022
ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) – (ಅಲ್ಪಾವಧಿ)
(ಜಟಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬೃಬೆಂಮಪಾ ಇವರು ಈ ಕೆಳಕಂಡ ಸೇವೆಗಳಿಗಾಗಿ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿರುವ ಅರ್ಹ ತಯಾರಕರು / ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಟೆಂಡರಿಗಿಟ್ಟಿರುವ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಸೊಳ್ಳೆ ನಿಯಂತ್ರಣ ಸೇವೆಗಳಿಗೆ ಆಟೊ ಮತ್ತು ಸಲಕರಣೆಗಳನ್ನು ಒದಗಿಸುವುದು.	24.40	61,000/-
2	ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಸೊಳ್ಳೆ ನಿಯಂತ್ರಣ ಸೇವೆಗಳಿಗೆ ಆಟೊ ಮತ್ತು ಸಲಕರಣೆಗಳನ್ನು ಒದಗಿಸುವುದು.	16.30	40,750/-
3	ವಾರ್ಡ್ ಸಂಖ್ಯೆ. 01, ಕೆಂಪೇಗೌಡ ವಾರ್ಡ್ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
4	ವಾರ್ಡ್ ಸಂಖ್ಯೆ. 02, ಚೌಡೇಶ್ವರಿ ವಾರ್ಡ್ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
5	ವಾರ್ಡ್ ಸಂಖ್ಯೆ. 03, ಅಟ್ಟೂರು ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
6	ವಾರ್ಡ್ ಸಂಖ್ಯೆ. 04, ಯಲಹಂಕ ಉಪನಗರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
7	ವಾರ್ಡ್ ಸಂಖ್ಯೆ. 05, ಜಕ್ಕೂರು ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
8	ವಾರ್ಡ್ ಸಂಖ್ಯೆ. 06, ಥಣಿಸಂದ್ರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
9	ವಾರ್ಡ್ ಸಂಖ್ಯೆ. 07, ಬ್ಯಾಟರಾಯನಪುರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
10	ವಾರ್ಡ್ ಸಂಖ್ಯೆ. 08, ಕೊಡಿಗೇಹಳ್ಳಿ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
11	ವಾರ್ಡ್ ಸಂಖ್ಯೆ. 09, ವಿದ್ಯಾರಣ್ಯಪುರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
12	ವಾರ್ಡ್ ಸಂಖ್ಯೆ. 10, ದೊಡ್ಡಬೊಮ್ಮಸಂದ್ರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-
13	ವಾರ್ಡ್ ಸಂಖ್ಯೆ. 11, ಕುವೆಂಪುನಗರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು.	7.62	19,500/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): 10–06–2022ರಂದು ಸಂಜೆ 2.00 ಗಂಟೆಯವರೆಗೆ. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 13–06–2022ರಂದು ಸಂಜೆ 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14–06–2022ರಂದು ಸಂಜೆ 4.30 ಗಂಟೆಗೆ ಸಾಧ್ಯವಾದಲ್ಲಿ. (ತಪ್ಪಿದಲ್ಲಿ ಮುಂದಿನ ಕೆಲಸದ ದಿನದಂದು). 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 17–06–2022ರಂದು ಸಂಜೆ 4.00 ಗಂಟೆಗೆ (ಸಾಧ್ಯವಾದಲ್ಲಿ).
ಸಹಿ/– ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518
ಅಧಿಸೂಚನೆ ಸಂಖ್ಯೆ: ಡಿಪಿಎಸ್9ಪಿಯುಆರ್(ಎ)2022–23/ಪ್ಲೇಟ್ & ಕೆಮಿಕಲ್ಸ್ ದಿನಾಂಕ: 26.05.2022
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಪ್ಲೇಟ್ಸ್ ಹಾಗೂ ಕೆಮಿಕಲ್ಸ್‌ಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 42.00 ಲಕ್ಷಗಳು ಹಾಗೂ ಇ.ಎಂ.ಡಿ ಮೊತ್ತ ರೂ. 2.10 ಲಕ್ಷಗಳು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 08.06.2022, 17.30 ಗಂಟೆ. ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/671/ಆಕಾರ್/22–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ.
ಕಛೇರಿ ದೂರವಾಣಿ ಸಂಖ್ಯೆ: 08152–240073
ಇ–ಮೇಲ್: jointdirector.kolar@gmail.com
ಸಂಖ್ಯೆ:ಜಂನಿ/ಸಕಇ/ಆಹಾರ/ಸಿ.ಆರ್.–04/2022–23 ದಿನಾಂಕ:23.05.200
ಟೆಂಡರ್ ಪ್ರಕಟಣೆ
ವಿಷಯ: ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳ ಪೂರೈಕೆಗಾಗಿ ಟೆಂಡರ್ ಆಹ್ವಾನಿಸುವ ಕುರಿತು.
ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಸಕಇ 738 ಪಕವಿ 2017, ದಿನಾಂಕ: 29.04.2019
2022–23ನೇ ಸಾಲಿಗೆ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಸಾಮಗ್ರಿಗಳ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮ 2000ರ ಪ್ರಕಾರ ಅರ್ಹ ಪೂರೈಕೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ (e-procurement) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಇ–ಟೆಂಡರ್ ಘಟನಾವಳಿಗಳು: (1) ಟೆಂಡರ್ ಪ್ರಕಟಣೆ ದಿನಾಂಕ:ಸಂಖ್ಯೆ: ಜಂನಿ/ಸಕಇ/ಆಹಾರ/ಸಿ.ಆರ್.–04/2022–23 ದಿನಾಂಕ:23.05.2022 (2) ಟೆಂಡರ್‌ಗೆ ಇಟ್ಟ ಮೊತ್ತ: ರೂ.1,57,74,000/– (3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:23.05.2022 (4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 09.06.2022 (5) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: 10.06.2022 ಸಂಜೆ 5.00 ಗಂಟೆಗೆ. ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಶ್ರೀನಿವಾಸಪುರ ರಸ್ತೆ, ಕೋಲಾರ. (6) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ:11.06.2022, ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಶ್ರೀನಿವಾಸಪುರ ರಸ್ತೆ, ಕೋಲಾರ. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ:ರೂ.2,36,610/–ಗಳು. (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಶ್ರೀನಿವಾಸಪುರ ರಸ್ತೆ, ಕೋಲಾರ. ದೂರವಾಣಿ ಸಂಖ್ಯೆ:08152–240073.
ಸಹಿ/– ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ97/ಎಂ.ಸಿ.ಎ/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ಕೋಲಾರ
ಸಂಖ್ಯೆ: ನಸಕೋ/ಆಶಾ/ಇಎನ್‌ವಿ/05/2021–22 ದಿನಾಂಕ: 24.05.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಜಿ-2ರ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2021–22 ಅಮೃತ್ ನಿರ್ಮಲ ನಗರ ಯೋಜನೆಯಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಕು ಮತ್ತು ಸಾಮಗ್ರಿಗಳ ಸರಬರಾಜು ಕೆಲಸಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಅಧಿಕೃತ ಸರಬರಾಜುದಾರರು/ಮಾರಾಟಗಾರರು ರವರುಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ http://eproc.karnataka.gov.in ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಖಾಲಿ ಟೆಂಡರ್ ಫಾರಂಗಳಿಗೆ ಇ-ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 03.06.2022ರ ಸಂಜೆ 5.30 ಗಂಟೆವರೆಗೆ. (2) ಟೆಂಡರ್‌ನ್ನು ತೆರೆಯುವ ದಿನಾಂಕ: 06.06.2022ರ ಬೆಳಗ್ಗೆ 10.30 ಗಂಟೆಗೆ. ಪ್ಯಾ.ಸಂ.: ಕಾಮಗಾರಿಗಳ ವಿವರ: (2021-22 ಅಮೃತನಗರ ನಿರ್ಮಲ ನಗರ ಯೋಜನೆ): (7) DMA/2021-22/IND13772/CALL-3. ನೆಲಭರ್ತಿ ಜಾಗಕ್ಕೆ 2 ಸಂಖ್ಯೆಯ ಟ್ರಾಕ್ಟರ್ ಟ್ರೈಲರ್ ಖರೀದಿಸಲು. ಟೆಂಡರ್‌ಗಿಟ್ಟ ಮೊತ್ತ: ರೂ.12,00,000.00. ಇಎಂಡಿ ಮೊತ್ತ: ರೂ.30,000.00. ಕಾಲಾವಧಿ: 1 ತಿಂಗಳು. (1) ಸ್ವಚ್ಛ ಭಾರತ್ ಮಿಷನ್ ಯೋಜನೆ (ಐಇಸಿ): CMC/HS/IEC/CR/03/2020-21/CALL-2. ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಐಇಸಿ ಕಾರ್ಯಕ್ರಮ ಕೈಗೊಳ್ಳುವುದು. ಟೆಂಡರ್‌ಗಿಟ್ಟ ಮೊತ್ತ: ರೂ.10,00,000.00. ಇಎಂಡಿ ಮೊತ್ತ: ರೂ.25,000.00. ಕಾಲಾವಧಿ: 3 ತಿಂಗಳು. (6) 2022-23ನೇ ಸಾಲಿನ ನಗರಸಭೆ ನಿಧಿ: CMC/HS/DOGS/TENDER/CR/65/2021-22/CALL-3. ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ಕಂಡು ಬರುವ ಬೀದಿ ನಾಯಿಗಳ ಹಾವಳಿ ತಪ್ಪಿಸಲು "Animal Birth Control(ABC)" and Anti Rabies immunisation ಮಾಡಲು. ಟೆಂಡರ್‌ಗಿಟ್ಟ ಮೊತ್ತ: ರೂ.4,90,000.00. ಇಎಂಡಿ ಮೊತ್ತ: ರೂ.12,500.00. ಕಾಲಾವಧಿ: 1 ತಿಂಗಳು.ಸೂಚನೆ:– ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ www.kolarcity.mrc.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.
ಸಹಿ/– ಅಧ್ಯಕ್ಷರು, ನಗರಸಭೆ, ಕೋಲಾರ
ಸಹಿ/– ಪೌರಾಯುಕ್ತರು, ನಗರಸಭೆ, ಕೋಲಾರ
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 103/ಎಂಸಿಎ/2022-23
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ. ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE
General Public are hereby informed that, my clients (1) Mrs. Manjula Reddy, (2) Mr. Y.C. Sandeep Reddy, (3) Mr. J. Prathap Reddy, S/o. J. Thimma Reddy and (4) Mr. N. Vivekananda Reddy are the Joint and absolute owners in possession and enjoyment of the converted land bearing Sy. No. 218/2 (Old Sy. No. 34/14), measuring 4 acres, situated at Gattahalli Village Sarjapura Hobli, Anekal Taluk, Bangalore Urban District.
It has come to my clients' knowledge that one Smt. Rathnamma, W/o. Late. Narayana Reddy without having any rights, interest or title over the above schedule property has colluded with revenue authority/s has got the mutation transferred to her name in the revenue records vide MR T35/2021-22, dt. 25-4-2022. My clients have challenged the same before the Hon'ble High Court of Karnataka at Bangalore in W.P.No.9683/2022. The Hon'ble High Court of Karnataka vide its order dt.17.05.2022 has stayed the order of accepting the mutation proceedings in MR No. T35/2021-22, dt. 25.04.2022 in respect of the schedule property.
In the above circumstances, my clients hereby inform and caution the public at large not to deal with the said Smt. Rathnamma W/o. Late. Narayana Reddy or any other persons in respect of the Schedule Property, as she has no manner of right, title or interest in the Schedule Property. If, anybody does so, then he/ she shall be doing the same at his/ her own risks and under no circumstances, will my Clients be held responsible for any loss incurred thereby.
SCHEDULE PROPERTY
ALL THAT PIECE AND PARCEL of property bearing residentially converted undeveloped land in **Survey No. 218/2 (Old No. 31, Block No. 14)**, situated at **GATTAHALLI VILLAGE, SARJAPURA Hobli, Anekal Taluk,** Bangalore Urban District, Bangalore (converted vide Official Memorandum/ Conversion Order No. ALN(A)(S)SR:224/12-13, dated 18/12/2012 passed by the Deputy Commissioner, Bangalore District, Bangalore), **measuring to an extent of 04 (Four) Acres** together with all rights, appurtenances whatsoever whether underneath or above the surface and the property being bounded:
ON THE EAST BY: 40 FEET ROAD; **ON THE WEST BY:** PROPERTY OF KENCHAPPA AND MUNISHAMAPPA; **ON THE NORTH BY** : PROPERTY OF RAMAIAH; **ON THE SOUTH BY:** PRIVATE PROPERTY.
G.H. NAGARAJ, Advocate
Noble Law Associates,
No.924/A-60, 1st Floor, 4th Cross, 12th Main, Above Mani Textile, Hanumantha Nagar, Bengaluru-560019.
Mob.9980465465

ಜಿಎಸ್‌ಟಿ ವಿಳಂಬ ಶುಲ್ಕ ಮನ್ನಾ

ನವದೆಹಲಿ (ಪಿಟಿಐ): 2021–22ನೇ ಸಾಲಿನಲ್ಲಿ ಜಿಎಸ್‌ಟಿ ವಿವರಗಳನ್ನು ತಡವಾಗಿ ಸಲ್ಲಿಸುವ ಸಣ್ಣ ತೆರಿಗೆದಾರರಿಗೆ ವಿಳಂಬ ಶುಲ್ಕವನ್ನು ಎರಡು ತಿಂಗಳ ಅವಧಿಗೆ ಮನ್ನಾ ಮಾಡಲಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳ ಮಂಡಳಿಯು ಅಧಿಸೂಚನೆಯಲ್ಲಿ ಹೇಳಿದೆ.

ವಾರ್ಷಿಕ ಜಿಎಸ್‌ಟಿಆರ್‌–4 ಸಲ್ಲಿಸುವುದು ತಡವಾದಲ್ಲಿ ವಿಳಂಬ ಶುಲ್ಕವನ್ನು ಮೇ 1ರಿಂದ ಜೂನ್‌30ರ ಅವಧಿಗೆ ಮನ್ನಾ ಮಾಡಲಾಗುತ್ತದೆ. ಜಿಎಸ್‌ಟಿಆರ್‌–4 ಸಲ್ಲಿಸುವುದು ತಡವಾದಲ್ಲಿ ಪ್ರತಿದಿನಕ್ಕೆ ₹ 50ರಂತೆ (ಗರಿಷ್ಠ ₹ 2,000) ವಿಳಂಬ ಶುಲ್ಕ ವಿಧಿಸಲಾಗುತ್ತದೆ. ಆದರೆ, ಪಾವತಿಸಬೇಕಿರುವ ಒಟ್ಟು ತೆರಿಗೆಯು ಶೂನ್ಯವಾಗಿದ್ದಲ್ಲಿ, ಗರಿಷ್ಠ ₹ 500ರಷ್ಟು ವಿಳಂಬ ಶುಲ್ಕ ವಿಧಿಸಲಾಗುತ್ತದೆ.

ಕಿತ್ತೂರ ರಾಣಿ ಚನ್ನಮ್ಮ ವೃತ್ತ ಬಳಿ ಅಪಘಾತ: ಚಾಲಕ ಪರಾರಿ

ಶಾಲಾ ಬಸ್ ಹರಿದು ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಸಂಚಾರ ಠಾಣೆ ವ್ಯಾಪ್ತಿಯ ಕಿತ್ತೂರ ರಾಣಿ ಚನ್ನಮ್ಮ ವೃತ್ತದ ಬಳಿ ಗುರುವಾರ ಅಪಘಾತ ಸಂಭವಿಸಿದ್ದು, ಶಾಲೆ ಬಸ್ ಮೈ ಮೇಲೆ ಹರಿದು 16 ವರ್ಷದ ಬಾಲಕಿ ಕೀರ್ತನಾ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

‘ಹಾರೋಹಳ್ಳಿ ನಿವಾಸಿ ಕೀರ್ತನಾ, ಇತ್ತೀಚೆಗಷ್ಟೇ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 70 ಅಂಕ ಪಡೆದಿದ್ದು, ಕಾಲೇಜೊಂದರಲ್ಲಿ ಪಿ.ಯು. ತರಗತಿ ಪ್ರವೇಶಕ್ಕೆ ಸಿದ್ಧತೆ ನಡೆಸುತ್ತಿದ್ದಳು. ಅಕ್ಕ ಹರ್ಷಿತಾ ಹಾಗೂ ಸ್ನೇಹಿತೆ ಜೊತೆ ಗುರುವಾರ ಬೆಳಿಗ್ಗೆ 9.20ರ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಬನಶಂಕರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಮೂವರೂ ಒಂದೇ ದ್ವಿಚಕ್ರ ವಾಹನದಲ್ಲಿ ಹೊರಟಿದ್ದು, ಹರ್ಷಿತಾ ಚಲಾಯಿಸುತ್ತಿದ್ದರು. ಹಿಂದೆ ತಂಗಿ ಕೀರ್ತನಾ ಕುಳಿತಿದ್ದರೆ ನಡುವೆ ಸ್ನೇಹಿತೆ ಕುಳಿತಿದ್ದರು. ಅತೀ ವೇಗವಾಗಿ ತೆರಳುತ್ತಿದ್ದ ಡೆಲ್ಲಿ ಪಬ್ಲಿಕ್ ಶಾಲೆ ಬಸ್ (ಕೆಎ 51 ಬಿ 3877), ದ್ವಿಚಕ್ರ ವಾಹನಕ್ಕೆ ಗುದ್ದಿತ್ತು. ರಸ್ತೆಗೆ ಬಿದ್ದ ಕೀರ್ತನಾ ಮೇಲೆಯೇ ಬಸ್ಸಿನ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡ ಅವರು ಸ್ಥಳದಲ್ಲೇ ಮೃತಪಟ್ಟರು’ ಎಂದೂ ತಿಳಿಸಿದರು.

‘ಅಪಘಾತದಲ್ಲಿ ಕೀರ್ತನಾಳ ಅಕ್ಕ ಹಾಗೂ ಸ್ನೇಹಿತೆಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಸ್ ಅನ್ನು ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಗಾಯಾಳು ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆದು ತನಿಖೆ ನಡೆಸಲಾಗುತ್ತಿದೆ. ಯಾರ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದೂ ಅವರು ಹೇಳಿದರು.

ಕೆಲಸಕ್ಕೆ ಹೊರಟಿದ್ದ ಬಾಲಕಿ: ‘ಕೀರ್ತನಾ ತಂದೆ, ಆಟೊ ಚಾಲಕ. ತಾಯಿ, ಮನೆ ಕೆಲಸ ಮಾಡುತ್ತಿದ್ದರು. ಎಸ್ಸೆಸ್ಸೆಲ್ಸಿ ಮುಗಿದ ನಂತರ ಬಾಲಕಿ, ಪೋಷಕರಿಗೆ ನೆರವಾಗಲೆಂದು ನಾಯಂಡಹಳ್ಳಿಯಲ್ಲಿರುವ ಮಳಿಗೆಯೊಂದರಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ಇನ್ನೊಂದು ಮಳಿಗೆಯಲ್ಲಿ ಅಕ್ಕ ಹರ್ಷಿತಾ ಸಹ ಕೆಲಸ ಮಾಡುತ್ತಿದ್ದಳು. ಇಬ್ಬರೂ ನಿತ್ಯವೂ ಒಟ್ಟಿಗೆ ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ಹೋಗಿ ಬರುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಗುರುವಾರವೂ ಹರ್ಷಿತಾ ಹಾಗೂ ಕೀರ್ತನಾ, ಹಾರೋಹಳ್ಳಿಯಿಂದ ನಾಯಂಡನಹಳ್ಳಿಗೆ ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ತೆರಳುತ್ತಿದ್ದರು. ಮಾರ್ಗ ಮಧ್ಯೆ ಮತ್ತೊಬ್ಬ ಸ್ನೇಹಿತೆಯನ್ನು ಹತ್ತಿಸಿಕೊಂಡಿದ್ದರು’ ಎಂದೂ ಅವರು ಹೇಳಿದರು.

‘ಚನ್ನಮ್ಮ ವೃತ್ತದ ಸರ್ವೀಸ್ ರಸ್ತೆ ಮೂಲಕ ದ್ವಿಚಕ್ರ ವಾಹನವು ಹೊರ ವರ್ತುಲ ರಸ್ತೆಗೆ ಬಂದಿತ್ತು. ಅದೇ ಸಂದರ್ಭದಲ್ಲೇ ಮೇಲ್ಸೇತುವೆಯಲ್ಲಿ ಬಂದಿದ್ದ ಶಾಲಾ ಬಸ್, ಸೇತುವೆಯಿಂದ ಇಳಿಯುತ್ತಿದ್ದಂತೆ ದ್ವಿಚಕ್ರ ವಾಹನಕ್ಕೆ ಗುದ್ದಿತ್ತು’ ಎಂದೂ ತಿಳಿಸಿದರು.

ಕೆರೆಯಲ್ಲಿ ಈಜಾಡುತ್ತಿದ್ದ ಮೂವರು ಬಾಲಕರು ನಾಪತ್ತೆ

ಕೊತ್ತನೂರು ಠಾಣೆಯಲ್ಲಿ ಪ್ರಕರಣ: ಬಾಲಕರಿಗಾಗಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಇಮ್ರಾನ್ ಪಾಷಾ

ಮುಬಾರಕ್

ಸಾಹಿಲ್

ಬೆಂಗಳೂರು: ಕೊತ್ತನೂರು ಸಮೀಪದ ದೊಡ್ಡಗುಬ್ಬಿ ಕೆರೆಯಲ್ಲಿ ಮುಳುಗಿ ಮೂವರು ಬಾಲಕರು ನಾಪತ್ತೆಯಾಗಿದ್ದಾರೆ. ಅವರ ಪತ್ತೆಗಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಕೆರೆಯಲ್ಲಿ ಶೋಧ ಆರಂಭಿಸಿದ್ದಾರೆ.

‘ಸಾರಾಯಿಪಾಳ್ಯ ಫಾತಿಮಾ ಬಡಾವಣೆಯ ಇಮ್ರಾನ್ ಪಾಷಾ (17), ಮುಬಾರಕ್ (17) ಹಾಗೂ ಸಾಹಿಲ್ (15) ಅವರು ಗುರುವಾರ ಮಧ್ಯಾಹ್ನ ಕೆರೆಯಲ್ಲಿ ಈಜಾಡುತ್ತಲೇ ನಾಪತ್ತೆಯಾಗಿದ್ದಾರೆ. ಗುರುವಾರ ರಾತ್ರಿಯವರೆಗೂ ಕಾರ್ಯಾಚರಣೆ ನಡೆಸಲಾಯಿತು. ಮೂವರ ಬಗ್ಗೆ ಯಾವುದೇ ಸುಳಿವು ಸಿಗಲಿಲ್ಲ. ಕತ್ತಲಾದ ಕಾರಣ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಶುಕ್ರವಾರ ಬೆಳಿಗ್ಗೆ ಶೋಧ ಮುಂದುವರಿಸಲಾಗುವುದು’ ಎಂದೂ ಪೊಲೀಸರು ತಿಳಿಸಿದ್ದಾರೆ.

ಈಜಲಾಗದೇ ಮುಳುಗಿದರು: ‘ನಾಪತ್ತೆಯಾಗಿರುವ ಇಮ್ರಾನ್ ಪಾಷಾ, ಎಲಿಮೆಂಟ್ಸ್ ಮಾಲ್‌ನ ಪಿವಿಆರ್‌ನಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಇನ್ನೊಬ್ಬ ಬಾಲಕ ಮುಬಾರಕ್, ವೆಲ್ಡಿಂಗ್ ಕೆಲಸಕ್ಕೆ ಹೋಗುತ್ತಿದ್ದ. ಸಾಹಿಲ್, ಸಾರಾಯಿಪಾಳ್ಯದ ಶಾಲೆಯೊಂದರಲ್ಲಿ 10ನೇ ತರಗತಿಯಲ್ಲಿ ಓದುತ್ತಿದ್ದ’ ಎಂದೂ ಅವರು ತಿಳಿಸಿದ್ದಾರೆ.

‘ಕಳೆದ ವಾರ ಕೆರೆಯಲ್ಲಿ ಈಜಾಡಿದ್ದ ಸ್ನೇಹಿತನೊಬ್ಬ, ಅದರ ವಿಡಿಯೊವನ್ನು ಚಿತ್ರೀಕರಿಸಿ ಇನ್‌ಸ್ಟಾಗ್ರಾಮ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಿದ್ದ. ಅದನ್ನು ಹೆಚ್ಚು ಮಂದಿ ನೋಡಿದ್ದರು. ಅದೇ ವಿಡಿಯೊವನ್ನು ಬಾಲಕರಿಗೆ ತೋರಿಸಿದ್ದ ಆತ, ಈಜಾಡಲು ಪುನಃ ಕೆರೆಗೆ ಹೋಗೋಣವೆಂದು ಹೇಳಿದ್ದ.’

‘ಮೂವರು ಬಾಲಕರು ಹಾಗೂ ಇತರರು, ಸಾರಾಯಿ ಪಾಳ್ಯದಿಂದ ಆಟೊದಲ್ಲಿ ದೊಡ್ಡಗುಬ್ಬಿ ಕೆರೆಗೆ ಹೋಗಿದ್ದರು. ಬಾಲಕರು ತಮ್ಮ ಮೊಬೈಲ್‌ಗಳನ್ನು ಸ್ನೇಹಿತನ ಕೈಗೆ ಕೊಟ್ಟು ಕೆರೆಗೆ ಈಜಲು ಇಳಿದಿದ್ದರು. ಮೂವರು ಕೈ ಹಿಡಿದುಕೊಂಡು ಒಂದೇ ಬಾರಿ ಕೆರೆಯ ಒಳಗೆ ಜಿಗಿದಿದ್ದರು. ಕೆಲ ನಿಮಿಷ ಈಜಾಡಿದ್ದ ಮೂವರು, ನಂತರ ಸುಸ್ತಾಗಿದ್ದರು. ಈಜಾಡಲು ಸಾಧ್ಯವಾಗದೇ ಮುಳುಗಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಬಾಲಕರು ಮುಳುಗುವುದನ್ನು ನೋಡಿದ್ದ ಸ್ಥಳೀಯ ವ್ಯಕ್ತಿಯೊಬ್ಬರು, ರಕ್ಷಣೆಗಾಗಿ ಕೆರೆಗೆ ಹಾರಿದ್ದರು. ಅಷ್ಟರಲ್ಲೇ ಯುವಕರು ನಾಪತ್ತೆಯಾಗಿದ್ದಾರೆ. ಸ್ನೇಹಿತರೇ ಘಟನೆ ಬಗ್ಗೆ ಬಾಲಕರ ಪೋಷಕರಿಗೆ ವಿಷಯ ತಿಳಿಸಿದ್ದರು’ ಎಂದೂ ಮೂಲಗಳು ಹೇಳಿವೆ.

ಟ್ಯಾಂಕರ್ ಹರಿದು ಬಾಲಕ ಸಾವು

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ ರಸ್ತೆಯ ಸೆರಿನಿಟಿ ಬಡಾವಣೆಯಲ್ಲಿ ಟ್ಯಾಂಕರ್ ಮೈ ಮೇಲೆ ಹರಿದು ಮೂರು ವರ್ಷದ ಬಾಲಕ ಪ್ರತಿಷ್ಠ್ ಮೃತಪಟ್ಟಿದ್ದಾನೆ.

‘ಮೃತ ಪ್ರತಿಷ್ಠ್, ನೇಪಾಳದ ಕೀಮ್ ರಾಜ್ ಹಾಗೂ ಜಯಂತಿ ದಂಪತಿಯ ಮಗ. ಕೆಲ ವರ್ಷಗಳ ಹಿಂದೆಯಷ್ಟೇ ಬಾಲಕನ ಪೋಷಕರು ನಗರಕ್ಕೆ ಬಂದು ನೆಲೆಸಿದ್ದರು. ತಂದೆ ಕೀಮ್ ರಾಜ್ ಅವರು, ಸೆರಿನಿಟಿ ಬಡಾವಣೆಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದರು’ ಎಂದು ಎಚ್‌ಎಸ್‌ಆರ್ ಬಡಾವಣೆಯ ಸಂಚಾರ ಪೊಲೀಸರು ಮಾಹಿತಿ ನೀಡಿದ್ದಾರೆ.

‘ಅಪಾರ್ಟ್‌ಮೆಂಟ್ ಸಮುಚ್ಚಯದವರು ಟ್ಯಾಂಕರ್ ವಾಹನದಲ್ಲಿ ನೀರು ತರಿಸಿದ್ದರು. ನಿಗದಿತ ಟ್ಯಾಂಕ್‌ನಲ್ಲಿ ನೀರು ತುಂಬಿಸಿದ್ದ ಚಾಲಕ, ವಾಹನವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು. ಅದೇ ಸ್ಥಳದಲ್ಲಿ ಬಾಲಕ ಆಟವಾಡುತ್ತಿದ್ದ. ಅದನ್ನು ಚಾಲಕ ನೋಡಿರಲಿಲ್ಲ. ಬಾಲಕನ ಮೇಲೆಯೇ ಟ್ಯಾಂಕರ್ ಚಕ್ರ ಹರಿದಿತ್ತು’ ಎಂದೂ ತಿಳಿಸಿದರು.

‘ಅಜಾಗರೂಕತೆಯ ಚಾಲನೆ ಮಾಡಿದ್ದ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಚಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದರು.

ಸನ್ನಡತೆ: ರಾಜ್ಯದ 96 ಕೈದಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ 96 ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಗುರುವಾರ ಬಿಡುಗಡೆ ಮಾಡಲಾಯಿತು.

ಕೋವಿಡ್ ಮುಂಜಾಗ್ರತಾ ಕ್ರಮವಾಗಿ ಯಾವುದೇ ಕಾರ್ಯಕ್ರಮ ಆಯೋಜಿಸದೇ ಕೈದಿಗಳಿಗೆ ಹೂವು ಕೊಟ್ಟು ಬೀಳ್ಕೊಡಲಾಯಿತು.

ಜೈಲಿನ ಅಧಿಕಾರಿಗಳೇ ಕೈದಿಗಳಿಗೆ ಬಿಡುಗಡೆ ಪ್ರಮಾಣಪತ್ರಗಳನ್ನು ವಿತರಿಸಿ, ಜೈಲಿನಿಂದ ಕಳುಹಿಸಿಕೊಟ್ಟರು. ಕುಟುಂಬಸ್ಥರು ಹಾಗೂ ಸ್ನೇಹಿತರು, ಜೈಲಿನ ಬಳಿ ಕೈದಿಗಳನ್ನು ಸ್ವಾಗತಿಸಿದರು. ಕೆಲವರು, ಕೈದಿಗಳನ್ನು ತಬ್ಬಿಕೊಂಡು ಕಣ್ಣೀರಿಟ್ಟರು.

ಜೈಲಿನಲ್ಲಿ ಉತ್ತಮ ನಡತೆ ತೋರಿದ್ದ ಅರ್ಹ ಕೈದಿಗಳ ಬಿಡುಗಡೆಗಾಗಿ ಕಾರಾಗೃಹಗಳ ಸ್ಥಾಯಿ ಸಲಹಾ ಮಂಡಳಿಗಳ ವರದಿ ಸಮೇತ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಲಾಗಿತ್ತು. ಕೈದಿಗಳ ಬಿಡುಗಡೆಗೆ ಅನುಮೋದನೆ ನೀಡಿದ್ದ ಸರ್ಕಾರ, ರಾಜ್ಯಪಾಲರಿಗೆ ಪಟ್ಟಿ ಕಳುಹಿಸಿತ್ತು. ಅದನ್ನು ಪರಿಶೀಲಿಸಿದ್ದ ರಾಜ್ಯಪಾಲರು, 96 ಕೈದಿಗಳ ಬಿಡುಗಡೆಗೆ ಒಪ್ಪಿಗೆ ನೀಡಿದ್ದರು.

ಸನ್ನಡತೆ ಆಧಾರದಲ್ಲಿ ಬಿಡುಗಡೆಯಾದ ಕೈದಿಯೊಬ್ಬರಿಗೆ ಅಧಿಕಾರಿಗಳು ಪ್ರಮಾಣಪತ್ರ ವಿತರಿಸಿದರು

ಯೋಗ ಶಿಕ್ಷಕ: ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ 45 ಕೈದಿಗಳು ಏಕಕಾಲದಲ್ಲಿ ಬಿಡುಗಡೆಯಾದರು.

‘ಜೈಲು ಮನಪರಿವರ್ತನೆ ಸ್ಥಳ. ಬಿಡುಗಡೆಯಾದ ಕೈದಿಯೊಬ್ಬ, ಜೈಲಿನಲ್ಲೇ ಯೋಗ ಕಲಿತು ಶಿಕ್ಷಕನಾಗಿದ್ದಾನೆ. ಕೆಲವರು ಪದವಿ ಪೂರ್ಣಗೊಳಿಸಿದ್ದಾರೆ. ಎಲ್ಲರೂ ಇದೀಗ ಜೈಲಿನಿಂದ ಬಿಡುಗಡೆ ಆಗಿದ್ದು, ಅವರೆಲ್ಲರ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸಿದ್ದೇವೆ’ ಎಂದು ಜೈಲಿನ ಅಧಿಕಾರಿಗಳು ಹೇಳಿದರು.

ಮೊಳಗಿದ ಸೈರನ್ ಕಳ್ಳರು ಪರಾರಿ

ಬೆಂಗಳೂರು: ರಾಜಗೋಪಾಲ ನಗರದಲ್ಲಿರುವ ಮಣಪ್ಪುರಂ ಫೈನಾನ್ಸ್ ಕಚೇರಿಯಲ್ಲಿ ಬುಧವಾರ ರಾತ್ರಿ ಕಳ್ಳತನಕ್ಕೆ ಯತ್ನಿಸಲಾಗಿದೆ.

‘ಕಚೇರಿ ಸಿಬ್ಬಂದಿ ನೀಡಿರುವ ದೂರು ಆಧರಿಸಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಗ್ಯಾಸ್ ಕಟರ್‌ನಿಂದ ಷಟರ್ ಮುರಿದು ಕಳ್ಳರು ಒಳಗೆ ನುಗ್ಗಿದ್ದರು. ಹಣ, ಚಿನ್ನಾಭರಣ ಇರಿಸಲಾಗಿದ್ದ ಕೊಠಡಿ ಬೀಗ ಮುರಿಯಲು ಯತ್ನಿಸಿದ್ದರು. ಇದೇ ವೇಳೆಯೇ ಸೈರನ್ ಮೊಳಗಿತು. ಆಗ ಕಳ್ಳರು ಸ್ಥಳದಿಂದ ಓಡಿಹೋಗಿದ್ದಾರೆ. ಸದ್ದಿನಿಂದ ಎಚ್ಚೆತ್ತುಕೊಂಡ ಕಚೇರಿ ಸಿಬ್ಬಂದಿ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳದಲ್ಲಿ ಪರಿಶೀಲನೆ ನಡೆಸಲಾಗಿದೆ ಎಂದರು.

ಎಲೆಕ್ಟ್ರಿಕಲ್ಸ್ ಮಳಿಗೆ ಮಾಲೀಕ ಕೊಲೆ: ಮೂರು ವಿಶೇಷ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆಯ ‘ದೀಪಂ ಎಲೆಕ್ಟ್ರಿಕಲ್ಸ್’ ಮಳಿಗೆ ಮಾಲೀಕ ಜುಗರಾಜ್ ಜೈನ್ (74) ಕೊಲೆ ಪ್ರಕರಣದ ತನಿಖೆ ಆರಂಭಿಸಿರುವ ಪೊಲೀಸರು, ಆರೋಪಿಗಾಗಿ ಶೋಧ ನಡೆಸುತ್ತಿದ್ದಾರೆ.

‘ಜುಗರಾಜ್ ಅವರ ಮನೆಯಲ್ಲಿ ಕೆಲಸಕ್ಕಿದ್ದ ಬಿಜರಾಮ್ ಮೇಲೆಯೇ ಅನುಮಾನವಿದ್ದು, ಆತ ಸದ್ಯ ತಲೆಮರೆಸಿಕೊಂಡಿದ್ದಾನೆ. ಆತನ ಪತ್ತೆಗಾಗಿ ಮೂರು ವಿಶೇಷ ತಂಡಗಳನ್ನು ರಚಿಸಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

‘ಜುಗರಾಜ್ ಸಂಬಂಧಿಕರು ಕೆಲಸ ನಿಮಿತ್ತ ಬೇರೆ ಊರಿಗೆ ಹೋಗಿದ್ದರು. ಇದೇ ಸಂದರ್ಭದಲ್ಲೇ ಅವರ ಕೊಲೆ ಆಗಿದೆ. ಬೀರುವಿನಲ್ಲಿದ್ದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಆರೋಪಿ ದೋಚಿದ್ದಾನೆ. ಆರೋಪಿ ಮನೆ ಇರುವ ರಾಜಸ್ಥಾನಕ್ಕೂ ತಂಡ ಹೋಗಿದೆ’ ಎಂದೂ ತಿಳಿಸಿದರು.

ಕ್ಯಾಮೆರಾದಲ್ಲಿ ಸೆರೆ: ಕೊಲೆ ಬಳಿಕ ಕೆಲಸಗಾರ ಬಿಜರಾಮ್, ಮನೆಯ ಹಲವೆಡೆ ಓಡಾಡಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯತ್ ಕುಷ್ಟಗಿ (ತಾ)
ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಕುಷ್ಟಗಿ

No:ICDS Kushtagi/Food/Tran/Tend/2022-23 Date: 21.05.2022

ಟೆಂಡರ್ ಪ್ರಕಟಣೆ

ವಿಷಯ: ಶಿಶು ಅಭಿವೃದ್ಧಿ ಯೋಜನೆಯ ಕುಷ್ಟಗಿ ಇಲ್ಲಿನ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿಯಲ್ಲಿ 2022–23ನೇ ಸಾಲಿಗೆ ಕುಷ್ಟಗಿ ತಾಲ್ಲೂಕಿನ 392 ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಗಣಿಕೆ ಮಾಡಲು ಮತ್ತು ಎಫ್.ಸಿ.ಐ, ಕೊಪ್ಪಳ ಇವರಿಂದ ಪಡಿತರ ಅಕ್ಕಿ/ಗೋಧಿ ಎತ್ತುವಳಿ ಮಾಡಲು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹಾರ ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ:–1) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕುಷ್ಟಗಿ ಇವರ ಅನುಮೋದನೆ ದಿನಾಂಕ: 17.05.2022

ಮೇಲ್ಕಂಡ ಉಲ್ಲೇಖ (1) ರನ್ವಯ 2022–23ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಶಿಶು ಅಭಿವೃದ್ಧಿ ಯೋಜನೆ ಕುಷ್ಟಗಿ ಇಲ್ಲಿನ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಎಂ.ಎಸ್.ಪಿ.ಸಿ ಘಟಕದ ಉಗ್ರಾಣದಿಂದ ಕುಷ್ಟಗಿ ತಾಲ್ಲೂಕಿನ 392 ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸಾಗಾಣಿಕೆ ಮಾಡಲು ಮತ್ತು ಭಾರತೀಯ ಆಹಾರ ನಿಗಮ ಕೊಪ್ಪಳ ಗೋದಾಮಿನಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಕುಷ್ಟಗಿ ಗೋದಾಮಿಗೆ ಪಡಿತರ ಆಹಾರ ಸಾಮಾಗ್ರಿಗಳ ಸಾಗಾಣಿಕೆ ಮಾಡಲು ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡುವ ಸಲುವಾಗಿ ಕುಷ್ಟಗಿ ತಾಲ್ಲೂಕಿನ ವ್ಯಾಪ್ತಿಗೊಳಪಟ್ಟ ನೊಂದಾಯಿಸಿದ ಮಹಿಳಾ ಮಂಡಳಿ ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಗ್ರಾಮ ಸಮುದಾಯಗಳಿಂದ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ.

ಸಾಗಾಣಿಕೆ ವಿವರ (ಪ್ರತ್ಯೇಕವಾಗಿ ಧರಗಳನ್ನು ನಮೂದಿಸುವುದು)

01. ಕುಷ್ಟಗಿ: ಇಂದ: ಎಂ.ಎಸ್.ಪಿ.ಸಿ/ಕಛೇರಿ ಉಗ್ರಾಣ ಕುಷ್ಟಗಿ. **ಇವರಿಗೆ:** *ಕುಷ್ಟಗಿ ತಾಲ್ಲೂಕಿನಲ್ಲಿರುವ ಗ್ರಾಮಗಳಲ್ಲಿನ 392 ಅಂಗನವಾಡಿ ಕೇಂದ್ರಗಳಿಗೆ.* **02 ಕುಷ್ಟಗಿ: ಇಂದ:** ಭಾರತೀಯ ಆಹಾರ ನಿಗಮ, ಕೊಪ್ಪಳ ಗೋದಾಮಿನಿಂದ ಪಡಿತರ ಧಾನ್ಯ ಸಾಗಾಣಿಕೆ. **ಇವರಿಗೆ:** *ಪಡಿತರ ಸಾಮಾಗ್ರಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ/ ಎಂ.ಎಸ್.ಪಿ.ಸಿ ಉಗ್ರಾಣ.* **03 ಕುಷ್ಟಗಿ: ಇಂದ:** ಸಿ.ಡಿ.ಪಿ.ಓ ಗೋದಾಮಿನಿಂದ. **ಇವರಿಗೆ:** *ಎಂ.ಎಸ್.ಪಿ.ಟಿ.ಸಿ ಘಟಕದ ಗೋದಾಮಿಗೆ ಸಾಗಾಣಿಕೆ*

ಟೆಂಡರ್ ಸಲ್ಲಿಸಲು ಇಚ್ಛೆಯುಳ್ಳವರು ಅರ್ಜಿ ಫಾರಂಗಳನ್ನು ದಿನಾಂಕ:**21.05.2022** ರಿಂದ *ದಿನಾಂಕ: 08.06.2022* ರವರೆಗೆ e–ಪ್ರಕ್ಯೂರ್ ಮೆಂಟ್ ಪೋರ್ಟಲ್ www.eproc. Karnataka. gov.in ಮುಖಾಂತರ CDPO/AWC/FS/KST/ 2022–23 ಟೆಂಡರ್ ಸಂಖ್ಯೆಯ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು.

ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು e–ಪ್ರಕ್ಯೂರ್‌ಮೆಂಟ್ ಮೂಲಕವೇ *ದಿನಾಂಕ:08.06.2022* ಮಧ್ಯಾಹ್ನ 05.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕುಷ್ಟಗಿ, ಜಿಲ್ಲಾ ಕೊಪ್ಪಳ

ಡಿಐಪಿಆರ್/ಕೊಪ್ಪಳ/110/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ,
ರಾರಾನಗರ ವಲಯ, ಬೃ.ಬೆಂ.ಮ.ಪಾಲಿಕೆ ಕಚೇರಿ, 2ನೇ ಮಹಡಿ,
ನೆಹರು ರಸ್ತೆ, ಬಿಇಎಮ್‌ಎಲ್ ಬಡಾವಣೆ, ಬೆಂಗಳೂರು–98.

ಸಂಖ್ಯೆ:ಬೃಬೆಂಮಪಾ/ಕಾಪಾಅ/ಯೋಜನೆ/ರಾರಾನ/ಟೆಂಡರ್/02/2022–23 ದಿನಾಂಕ: 26.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ ವಿಭಾಗ) ಬೃ.ಬೆಂ.ಮ.ಪಾಲಿಕೆ ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಕೆಟಿಪಿಪಿ ಕಾಯಿದೆ 2000 ದಡಿ ನಿಗದಿತ ನಮೂನೆಯಲ್ಲಿ ಬೃ.ಬೆಂ.ಮ.ಪಾಲಿಕೆಯ **ಸೇವಾ ಪೂರೈಕೆದಾರರು / ಗುತ್ತಿಗೆದಾರರು** ಅಥವಾ ತತ್ಸಮಾನವಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
1.	ವಾರ್ಡ್ ಸಂಖ್ಯೆ–17 ಜೆ.ಪಿ ಪಾರ್ಕ್‌ನಲ್ಲಿ ವೃದ್ಧಾಶ್ರಮ ಕಟ್ಟಡಕ್ಕೆ ಮೊದಲನೇ ಮಹಡಿಯ ಹೆಚ್ಚುವರಿ ನಿರ್ಮಾಣ ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	500.00	7,50,000/-
2.	ವಾರ್ಡ್ ಸಂಖ್ಯೆ–17ರಲ್ಲಿ ಷಟಲ್ ಕಾಕ್ ಅಂಗಳ ನಿರ್ಮಾಣದ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು.	100.00	2,00,000/-
3.	ರಾಜರಾಜೇಶ್ವರಿನಗರ ಕ್ಷೇತ್ರದ ಜಾಲಹಳ್ಳಿ, ಜೆ.ಪಿ.ಪಾರ್ಕ್, ಪೀಣ್ಯ ಮತ್ತು ಇತರೆ ಸ್ಥಳಗಳಲ್ಲಿ ಸರ್ಕಾರಿ ಮತ್ತು ಬೃ.ಬೆಂ.ಮ.ಪಾಲಿಕೆ ಶಾಲೆ ಕಟ್ಟಡಗಳನ್ನು ನಿರ್ಮಾಣ, ಸುಧಾರಣೆ ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡುವುದು.	600.00	9,00,000/-

ಟೆಂಡರ್ ವೇಳಾಪಟ್ಟಿ: (1) ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **31.05.2022**ರಿಂದ. (2) ಟೆಂಡರ್ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **07.06.2022**ರ ಸಂಜೆ **4:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ರಾ.ರಾ.ನಗರ ವಲಯದಲ್ಲಿ ದಿನಾಂಕ **08.06.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **10.06.2022**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **13.06.2022**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು **ತಾಂತ್ರಿಕವಾಗಿ ಅರ್ಹರಾದ ಬಿಡ್ದುರುಗಳಿಗೆ ತಿಳಿಸಲಾಗುವುದು.** ಟೆಂಡರ್ ತೆರೆಯಲು ನಿರ್ದಿಷ್ಟಪಡಿಸಿದ ದಿನಾಂಕವು ಕಚೇರಿಗೆ ರಜೆ ಎಂದು ಘೋಷಿಸಿದ್ದಲ್ಲಿ ನಿಯೋಜಿತ ಸಮಯ ಮತ್ತು ಸ್ಥಳದಲ್ಲಿ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, (ಯೋಜನೆ)
ರಾಜರಾಜೇಶ್ವರಿನಗರ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬಳ್ಳಾರಿ. ಬಳ್ಳಾರಿ ಡೇರಿ, ಅಗ್ನಿಶಾಮಕ ದಳ ಹತ್ತಿರ, ಸಂಜಯಗಾಂಧಿ ನಗರ, ಬಳ್ಳಾರಿ–583104 e-mail:mdrbkmul@gmail.com

No: RBKVMUl/PUR/E-PROC/480/2022 Date: 25.05.2022

ಇ–ಟೆಂಡರ್ ಪ್ರಕಟಣೆ

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಹಾಲು ಒಕ್ಕೂಟ ನಿ., ಬಳ್ಳಾರಿ ರವರಿಂದ ಟೆಂಡರುಗಳನ್ನು ಅರ್ಹ ಟೆಂಡರುದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

ಕ್ರ.ಸಂ	ಇ–ಟೆಂಡರ್ ನಂಬರ್	ಟೆಂಡರಿನ ವಿವರ	ಇ.ಎಂ.ಡಿ
01	RBKVMUL/PUR/Packing/ 2022	Biennial Rate Contract for Packing of Milk & Milk Products	7,20,000/-
02	RBKVMUL/PUR/9-10T/ 2022	Transportation of U.H.T Milk & Milk Products from Budugumppa Dairy to Different places(Veh.Cap.9-10 Ton)	30,000/-
03	RBKVMUL/PUR/1.5-2.0 T/ 2022	Transportation of U.H.T Milk & Milk Products from Budugumppa Dairy to wholesaleDealers(Veh.Cap.1.5-2.0Ton)	15,000/-
04	RBKVMUL/PUR/Mnr car/ 2022	PROVIDE TATA JUST/SHIFT/ETHIOS CAR TO MANAGER(DAIRY) BALLARI	15,000/-
05	RBKVMUL/PUR/BMC Car/ 2022	PROVIDE TATA JUST/SHIFT/ETHIOS CAR TO BMC SECTION, BALLARI COVERING 4 DISTRICT BMCS	15,000/-

1) ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 26.05.2022 ರಿಂದ 24.06.2022 ರ ವರೆಗೆ. 2)ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 27.06.2022 ಮತ್ತು ಸಮಯ ಸಂಜೆ 5.00 ಗಂಟೆಯವರೆಗೆ. 3) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ 29.06.2022 ಮತ್ತು ಸಮಯ ಬೆಳಿಗ್ಗೆ 11.00 ಘಂಟೆಗೆ 4) ವೆಬ್ ಸೈಟ್ http://www.eproc.karnataka.gov.in ಮೂಲಕ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ರಾಬಕೊವಿಹಾಒನಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/73/ಎಂಸಿಎ/2022–23

ಕಂದಾಯ ಇಲಾಖೆ
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ
5ನೇ ಮಹಡಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560 009

ಸಾರ್ವಜನಿಕ ಪ್ರಕಟಣೆ

ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್-19 ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿಯೂ ರೂ. 50,000/-ಗಳು ಹಾಗೂ ರಾಜ್ಯ ಸರ್ಕಾರದ ಘೋಷಣೆಯಂತೆ ಆರೋಗ್ಯ ಇಲಾಖೆಯ ದತ್ತಾಂಶದಲ್ಲಿ ನಮೂದಾಗಿರುವ ಬಿ.ಪಿ.ಎಲ್ ಕುಟುಂಬದ ಮರಣ ಪ್ರಕರಣಗಳಿಗೆ ಹೆಚ್ಚುವರಿ ರೂ.1.00 ಲಕ್ಷಗಳ ಪರಿಹಾರವನ್ನು ನೀಡಲಾಗುತ್ತಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ MISC App No. 1805/2021 in W.P.(C) No. 539/2021, ದಿನಾಂಕ: 24.03.2022ರನ್ವಯ ಕೋವಿಡ್-19 ವೈರಾಣು ಸೋಂಕಿನಿಂದ ಮೃತಪಟ್ಟ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಪರಿಹಾರ ನೀಡಲು ಅರ್ಜಿ ಸ್ವೀಕೃತಿಗೆ ಕುರಿತಂತೆ ಈ ಕೆಳಕಂಡಂತೆ ಕಾಲಮಿತಿ ನಿಗದಿಪಡಿಸಿ ಸುತ್ತೋಲೆ ಸಂಖ್ಯೆ: ಕಂಇ 400 ಟಿಎನ್ ಆರ್ 2021 (ಭಾಗ-1), ದಿನಾಂಕ: 07.04.2022ನ್ನು ಹೊರಡಿಸಿದೆ.

1. ದಿನಾಂಕ 20.03.2022 ಕ್ಕಿಂತ ಮೊದಲು ಕೋವಿಡ್-19 ನಿಂದ ಮೃತಪಟ್ಟ ವ್ಯಕ್ತಿಗಳ ಪ್ರಕರಣಗಳಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಲು **ದಿನಾಂಕ: 20.03.2022 ರಿಂದ 60 ದಿನಗಳ** ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.
2. ದಿನಾಂಕ 20.03.2022 ರ ನಂತರ ಕೋವಿಡ್-19 ನಿಂದ ಮೃತಪಟ್ಟ ವ್ಯಕ್ತಿಗಳ ಪ್ರಕರಣಗಳಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಲು **ಮರಣ ಸಂಭವಿಸಿದ ದಿನಾಂಕದಿಂದ 90 ದಿನಗಳ** ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.

NSAP ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಪಾಲುದಾರಿಕೆಯಲ್ಲಿ ವೃದ್ಧಾಪ್ಯ ವೇತನ ಯೋಜನೆಯಡಿ 8.99 ಲಕ್ಷ, ಅಂಗವಿಕಲ ಯೋಜನೆಯಡಿ 0.43 ಲಕ್ಷ ಹಾಗೂ ವಿಧವಾ ವೇತನ ಯೋಜನೆಯಡಿ 4.52 ಲಕ್ಷ ಫಲಾನುಭವಿಗಳಿಗೆ ಮಾಸಿಕ ಪಿಂಚಣಿ ಸೌಲಭ್ಯ ನೀಡಲಾಗುತ್ತಿದೆ.

ನಿರ್ದೇಶಕರು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಬೆಂಗಳೂರು

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2022–23/10534–38 ದಿನಾಂಕ:26.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ)

ಪಿ.ಸಿ–1187 : ಟೈಪ್–II ಅನ್‌ಇನ್‌ಹೆಬಿಟೆಡ್ ವಿದ್ಯುತ್ ಪರಿವರ್ತಕದ ತೈಲವನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರು ಮಾಡಿ ಸರಬರಾಜು ಮಾಡುವದು. ದಿನಾಂಕ: ಇ–ಪ್ರೊಕ್ಯೂರಮೆಂಟನಲ್ಲಿ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: 27.05.2022 ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 03.06.2022 ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವ ದಿನಾಂಕ: 6.6.2022 / 6.6.2022. ಟೆಂಡರ್ ಮೊತ್ತ: **ರೂ. 629.39 ಲಕ್ಷ**. ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಕಾರ್ಯನಿರ್ವಾಹಕ ಅಭಿಯಂತರರು(ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 9448359006: ಅಂತರ್ಜಾಲತಾಣದ ವಿಳಾಸ: www.eproc.karnataka.gov.in

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ವಾ.ಸಾ.ಸಂ.ಇ/ಕಲಬುರಗಿ/203/ಎಂ.ಸಿ&ಎ/2022–23 ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ನಗರಸಭಾ ಕಾರ್ಯಾಲಯ, ತಿಪಟೂರು
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in
ನಂ.ನ.ಸ.ತಿ/ತಾಂಶಾ/ಸಿ.ಆರ್/15/2022–23 ದಿನಾಂಕ: 23.05.02022

ಟೆಂಡರ್/ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999 – 2000ರ ನಿಯಮದಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ/ ವಿದ್ಯುತ್ ಪರಿವೀಕ್ಷಕರ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಮತ್ತು ಸಾಮಾಗ್ರಿಗಳ ಪೂರೈಕೆಗೆ ಅರ್ಹ ಪೂರೈಕೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಮತ್ತು ಸಾಮಾಗ್ರಿಗಳ ಪೂರೈಕೆಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 347 ರಂತೆ ಕೆಲಸ ನಿರ್ವಹಿಸಲು ಅರ್ಹ ದುರಸ್ತಿದಾರರಿಂದ ಕೋಟೇಷನ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2022-23/OW/WORK_INDENT131854	15.00	04.06.2022	07.06.2022
2	DMA/2022-23/OW/WORK_INDENT131865	3.83	04.06.2022	07.06.2022
3	DMA/2022-23/OW/WORK_INDENT131866	5.30	04.06.2022	07.06.2022
4	DMA/2022-23/OW/WORK_INDENT131868	3.39	04.06.2022	07.06.2022
5	DMA/2022-23/OW/WORK_INDENT131848	57.80	04.06.2022	07.06.2022
6	DMA/2021-22/OW/WORK_INDENT128492/CALL-4	2.00	04.06.2022	07.06.2022
7	DMA/2021-22/OW/WORK_INDENT129848/CALL-3	7.00	04.06.2022	07.06.2022
8	DMA/2021-22/OW/WORK_INDENT128499/CALL-4	1.66	04.06.2022	07.06.2022
9	DMA/2021-22/IND12860/CALL-2	1.40	04.06.2022	07.06.2022
10	DMA/2021-22/IND12805/CALL-2	4.15	04.06.2022	07.06.2022
11	DMA/2021-22/IND12996/CALL-2	4.20	04.06.2022	07.06.2022
12	DMA/2021-22/IND12995/CALL-2	3.22	04.06.2022	07.06.2022
13	DMA/2021-22/IND12994/CALL-2	7.97	04.06.2022	07.06.2022
14	DMA/2022-23/OW/WORK_INDENT131154/CALL-2	10.00	04.06.2022	07.06.2022
15	DMA/2021-22/OW/WORK_INDENT117186/CALL-5	30.30	04.06.2022	07.06.2022
16	ನಗರಸಭಾ ಕಛೇರಿ ನೂತನ ಕಟ್ಟಡಕ್ಕೆ ಹಾಗೂ ನಗರಸಭಾ ಬಸ್ ನಿಲ್ದಾಣದ ಕಟ್ಟಡಕ್ಕೆ ಮಳೆ ನೀರು ಕೊಯ್ಲು ಅಳವಡಿಸುವುದು	17.80	04.06.2022	07.06.2022
17	ನಗರದಲ್ಲಿರುವ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಕಾಮಗಾರಿ	10.00	04.06.2022	07.06.2022
18	ತಿಪಟೂರು ನಗರದ ಎಲ್ಲಾ 31 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಲ್ಲಿ ತುರ್ತಾಗಿ ಕುಡಿಯುವ ನೀರು ಪೂರೈಕೆಗೆ ಮಾಡಲು ಪೈಪ್‌ಲೈನ್ ಮಾಡುವುದು	15.00	09.06.2022	13.06.2022
19	ತಿಪಟೂರು ನಗರ ಕುಡಿಯುವ ನೀರು ಸರಬರಾಜು ವಿಭಾಗದ ದೈನಂದಿನ ದುರಸ್ಥಿ ಕೆಲಸಕ್ಕೆ ಅವಶ್ಯಕವಾಗಿರುವ ಪೈಪ್‌ಲೈನ್ ಹಾಗೂ ಇನ್ನಿತರ ದುರಸ್ಥಿ ಸಾಮಾಗ್ರಿಗಳನ್ನು ಖರೀದಿ ಮಾಡುವುದು	20.00	10.06.2022	14.06.2022
20	ತಿಪಟೂರು ನಗರಯ ಎಸ್.ಟಿ.ಪಿ ಘಟಕ ಹಾಗೂ ವೆಟ್‌ವೆಲ್ ಘಟಕದಲ್ಲಿ ಕಾರ್ಯ ನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವುದು	48.81	15.06.2022	17.06.2022

ಕರ್ನಾಟಕ ಪುರಸಭಾ ಕಾಯ್ದೆ ನಿಯಮ 347ರಡಿಯಲ್ಲಿ ಕೋಟೇಷನ್/ಟೆಂಡರ್

1	ಗಾಂಧಿನಗರದ ಜಲಶುದ್ಧೀಕರಣ ಕೇಂದ್ರದ ಪಂಪ್‌ಹೌಸ್‌ನಲ್ಲಿ ಸುಟ್ಟಿರುವ 150 ಹೆಚ್ ಪಿ ಮೋಟರ್ ರೀವೈಡಿಂಗ್ ಮತ್ತು ಕೆಟ್ಟಿರುವ 150 ಹೆಚ್ ಪಿ ಪಂಪ್ ದುರಸ್ತಿ ಮಾಡಿ ಅಳವಡಿಸುವುದು
2	ಗಾಂಧಿನಗರದ ಜಲಶುದ್ಧೀಕರಣ ಕೇಂದ್ರದ ಪಂಪ್‌ಹೌಸ್‌ನಲ್ಲಿ ಸುಟ್ಟಿರುವ 150 ಹೆಚ್ ಪಿ ಮೋಟರ್ ದುರಸ್ತಿಯಾಗುವವರೆಗೋ ಬಾಡಿಗೆ 150 ಹೆಚ್ ಪಿ ಮೋಟರ್ ಅಳವಡಿಸುವುದು
3	ಗಾಂಧಿನಗರದ ಜಲಶುದ್ಧೀಕರಣ ಕೇಂದ್ರದ ಪಂಪ್‌ಹೌಸ್‌ನಲ್ಲಿ ನೀರಿನಲ್ಲಿ ಮುಳುಗಿರುವ ಹೆಚ್ಚುವರಿ 150 ಹೆಚ್.ಪಿ ಮತ್ತು 60 ಹೆಚ್.ಪಿ ಮೋಟರ್ ಪಂಪ್‌ಗಳನ್ನು ಸರ್ವಿಸ್ ಮಾಡುವುದು.
4	ಬಿ.ಇ.ಓ ಆಫೀಸ್ ಹಿಂಭಾಗದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗೆ ಯು.ಜಿ.ಡಿ ಸಂಪರ್ಕ ಕಲ್ಪಿಸಲು (DWC Pipe Line) ಮತ್ತು 4 ಯು.ಜಿ.ಡಿ Chamber ಮಾಡುವ ಕಾಮಗಾರಿಗೆ ಕೋಟೇಷನ್ ಸಲ್ಲಿಸುವುದು
5	ಹಳೇಪಾಳ್ಯ ಕೆರೆ ಅಂಗಳದಲ್ಲಿ ಯು.ಜಿ.ಡಿ ಪೈಪ್‌ಲೈನ್ ದುರಸ್ಥಿ ಮಾಡಿ Chamber ನಿರ್ಮಿಸಲು ಕೋಟೇಷನ್ ಸಲ್ಲಿಸುವುದು
6	ವಾರ್ಡ್ ನಂ. 9 ಗೋವಿನಪುರ 3ನೇ ಕ್ರಾಸ್‌ನಲ್ಲಿ ಯು.ಜಿ.ಡಿ ಪೈಪ್‌ಲೈನ್ ಹಾಗೂ Chamber ನಿರ್ಮಿಸಲು ಕೋಟೇಷನ್ ಸಲ್ಲಿಸುವುದು

ಸೂಚನೆ: ಕೊಟೇಷನ್ ಪ್ರಕಟಣೆಗಳಿಗೆ ಸಂಬಂದಿಸಿದಂತೆ ವಿವರಗಳಿಗಾಗಿ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ಅವಧಿಯಲ್ಲಿ ಕಾರ್ಯಾಲಯದಲ್ಲಿ ಸಂಪರ್ಕಿಸಬಹುದು. ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.

ಸಹಿ/–ರಾಮಮೋಹನ್.ಪಿ.ಜೆ.(ರಾಮಿ) ಅಧ್ಯಕ್ಷರು ನಗರಸಭೆ, ತಿಪಟೂರು. | ಸಹಿ/–ಗಣೇಶ್(ಸೊಪ್ಪು), ಉಪಾಧ್ಯಕ್ಷರು ನಗರಸಭೆ, ತಿಪಟೂರು. | ಸಹಿ/–ಶಶಿಕಿರಣ್, ಸ್ಥಾಯಿಸಮಿತಿ ಅಧ್ಯಕ್ಷರು ನಗರಸಭೆ, ತಿಪಟೂರು. | ಸಹಿ/–ಉಮಾಕಾಂತ್ ಪೌರಾಯುಕ್ತರು, ನಗರಸಭೆ, ತಿಪಟೂರು.

DIPR/TUM/187/MCA/2022-23

ಲಾಭದಾಯಕ ಹುದ್ದೆ ಪ್ರಕರಣ: ಎಸ್.ಆರ್.ವಿಶ್ವನಾಥ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷರಾಗಿ ಲಾಭದಾಯಕ ಹುದ್ದೆ ಹೊಂದಿರುವ ಎಸ್.ಆರ್. ವಿಶ್ವನಾಥ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು' ಎಂದು ಸಲ್ಲಿಸಿರುವ ಅರ್ಜಿ ಕುರಿತಂತೆ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬೆಂಗಳೂರು ವಕೀಲ ಎ.ಎಸ್. ಹರೀಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರಕರಣದ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಶಾಸಕ ಎಸ್.ಆರ್. ವಿಶ್ವನಾಥ್ ಅವರಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿತು.

'2018ರ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಯಲಹಂಕ ಕ್ಷೇತ್ರದಿಂದ ಎಸ್.ಆರ್.ವಿಶ್ವನಾಥ್ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಚುನಾವಣಾ ಆಯೋಗದ ವೆಬ್‌ಸೈಟ್ ವಿವರಗಳ ಪ್ರಕಾರ, ವಿಶ್ವನಾಥ್ ಕೃಷಿ ಮತ್ತು ಸಮಾಜ ಸೇವೆಯಲ್ಲಿ ತೊಡಗಿಕೊಂಡ ಹಾಲಿ ಶಾಸಕರಾಗಿದ್ದಾರೆ. ಸಂವಿಧಾನದ 191(1) (ಎ) ವಿಧಿಯ ಅನುಸಾರ ಸಂಸದರು ಹಾಗೂ ಶಾಸಕರಾದವರು ಕೇಂದ್ರ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ಲಾಭದಾಯಕ ಹುದ್ದೆ ಹೊಂದುವಂತಿಲ್ಲ. ಒಂದು ವೇಳೆ ಲಾಭದಾಯಕ ಹುದ್ದೆ ಹೊಂದಿದ್ದರೆ ಶಾಸಕ ಅಥವಾ ಸಂಸದ ಸ್ಥಾನದಿಂದ ಅನರ್ಹರಾಗುತ್ತಾರೆ' ಎಂಬುದು ಅರ್ಜಿದಾರರ ವಾದ.

ಬಿಜೆಪಿ ಮುಖಂಡ ಆತ್ಮಹತ್ಯೆ; ಪತ್ನಿ ಮೇಲೂ ಅನುಮಾನ

ಹೃದಯಾಘಾತ ನಾಟಕ: ಅರ್ಧ ಸುಟ್ಟಿರುವ ವೇಲ್ ಪತ್ತೆ

ಪ್ರಜಾವಾಣಿ ವಾರ್ತೆ

ಬಿ.ಪಿ. ಅನಂತರಾಜು

ಬೆಂಗಳೂರು: ಹೆರೋಹಳ್ಳಿ ವಾರ್ಡ್‌ನ ಬಿಜೆಪಿ ಮುಖಂಡ ಬಿ.ಪಿ. ಅನಂತರಾಜು (46) ಆತ್ಮಹತ್ಯೆ ಪ್ರಕರಣದ ತನಿಖೆ ಮುಂದುವರಿದಿದ್ದು, ಅವರು ನೇಣು ಹಾಕಿಕೊಳ್ಳಲು ಬಳಸಿದ್ದರು ಎನ್ನಲಾದ ವೇಲ್ ಅರ್ಧ ಸುಟ್ಟಿರುವ ಸ್ಥಿತಿಯಲ್ಲಿ ಪೊಲೀಸರಿಗೆ ಸಿಕ್ಕಿದೆ.

'ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿ ಪತಿ ಅನಂತರಾಜು ಮೇ 12ರಂದು ಸಂಜೆ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂಬುದಾಗಿ ಪತ್ನಿ ಸುಮಾ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಕೆ.ಆರ್.ಪುರ ನಿವಾಸಿ ರೇಖಾ ಹಾಗೂ ಇತರರನ್ನು ಬಂಧಿಸಿದ್ದರು.

'ಅನಂತರಾಜು ಸಾವಿಗೆ ಪತ್ನಿ ಸುಮಾ ಕಾರಣ' ಎಂಬುದಾಗಿ ಬಂಧಿತ ಆರೋಪಿಗಳು ಹೇಳಿಕೆ ನೀಡಿದ್ದರಿಂದ, ಪ್ರಕರಣ ಹೊಸ ಆಯಾಮ ಪಡೆದುಕೊಂಡಿದೆ. ಪತ್ನಿ ಮೇಲೂ ಅನುಮಾನ ವ್ಯಕ್ತಪಡಿಸಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಹೃದಯಾಘಾತ ನಾಟಕ: 'ಮನೆಯ ಕೊಠಡಿಯೊಳಗೆ ಹೋಗಿದ್ದ ಅನಂತರಾಜು, ಹಲವು ಗಂಟೆಯಾದರೂ ಬಾಗಿಲು ತೆರೆದಿರಲಿಲ್ಲ. ಮಗಳು ಹೋಗಿ ಬಾಗಿಲು ಬಡಿದರೂ ಪ್ರತಿಕ್ರಿಯಿಸಿರಲಿಲ್ಲ. ನಕಲಿ ಕೀ ಬಳಸಿ ಕೊಠಡಿ ಬಾಗಿಲು ತೆರೆದಾಗ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತಿಯ ಮೃತದೇಹ ಕಂಡಿತು' ಎಂಬುದಾಗಿ ಪತ್ನಿ ಸುಮಾ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

> ಅನಂತರಾಜು ಸಾವಿನ ಬಗ್ಗೆ ಅನುಮಾನವಿದೆ. ಮರಣೋತ್ತರ ಪರೀಕ್ಷೆ, ವಿಧಿವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದ ಬಳಿಕವೇ ನಿಖರ ಮಾಹಿತಿ ತಿಳಿಯಲಿದೆ
>
> **ಸಂಜೀವ್ ಪಾಟೀಲ,** ಪಶ್ಚಿಮ ವಿಭಾಗದ ಡಿಸಿಪಿ

ಈ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಪೊಲೀಸರು, 'ಮೃತದೇಹವನ್ನು ಇಳಿಸಿದ್ದ ಪತ್ನಿ ಹಾಗೂ ಇತರರು, ಆತ್ಮಹತ್ಯೆ ವಿಷಯ ಮುಚ್ಚಿಡಲು ಯತ್ನಿಸಿದ್ದರು. ಹೃದಯಾಘಾತವಾಗಿರುವುದಾಗಿ ಸ್ಥಳೀಯರಿಗೆ ಹೇಳಿದ್ದರು. ನಂತರ, ಮೃತದೇಹವನ್ನು ಸಮೀಪದ ನರ್ಸಿಂಗ್ ಹೋಮ್‌ಗೆ ತೆಗೆದುಕೊಂಡು ಹೋಗಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಗಂಟೆಗೂ ಮುನ್ನವೇ ಅನಂತರಾಜು ಮೃತಪಟ್ಟಿರುವುದಾಗಿ ತಿಳಿಸಿದ್ದರು. ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಆಸ್ಪತ್ರೆಯವರೇ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಅನಂತರಾಜು ಸಾವಿಗೆ ಆತನ ಪತ್ನಿಯೇ ಕಾರಣ
- ಪೊಲೀಸರೆದುರು ಬಂಧಿತ ಆರೋಪಿಗಳ ಹೇಳಿಕೆ
- ಬಿಜೆಪಿ ಮುಖಂಡನ ಸಾವು ಪ್ರಕರಣಕ್ಕೆ ಹೊಸ ತಿರುವು

'ಅನಂತರಾಜು ಮೃತರಾದ ದಿನ ಯಾರೊಬ್ಬರೂ ದೂರು ನೀಡಿರಲಿಲ್ಲ. ಆಸ್ಪತ್ರೆ ಮಾಹಿತಿ ಆಧರಿಸಿ ಪೊಲೀಸರೇ ಮಾಹಿತಿ ಕಲೆಹಾಕುತ್ತಿದ್ದರು. ಮೂರು ದಿನಗಳ ನಂತರ ಪತ್ನಿ ಠಾಣೆಗೆ ಬಂದು ದೂರು ನೀಡಿದ್ದಾರೆ. ಇದು ಸಹ ಅನುಮಾನಕ್ಕೆ ಕಾರಣವಾಗಿದೆ' ಎಂದೂ ಮೂಲಗಳು ತಿಳಿಸಿವೆ.

ವೇಲ್ ಸುಡುವಂತೆ ಸೂಚನೆ: 'ಅನಂತರಾಜು ನೇಣು ಹಾಕಿಕೊಳ್ಳಲು ಬಳಸಿದ್ದರು ಎನ್ನಲಾದ ವೇಲ್ ಅನ್ನು ಕೆಲಸಗಾರರಿಗೆ ನೀಡಿದ್ದ ಸುಮಾ, ಸುಟ್ಟು ಹಾಕುವಂತೆ ಹೇಳಿದ್ದರು' ಎಂದು ಪೊಲೀಸ್ ಮೂಲಗಳು ವಿವರಿಸಿವೆ.

'ಕೆಲಸಗಾರ, ನಿರ್ಜನ ಪ್ರದೇಶವೊಂದರಲ್ಲಿ ವೇಲ್ ಸುಟ್ಟು ಬಂದಿದ್ದ. ಮಳೆ ಬಂದಿದ್ದರಿಂದ, ಅರ್ಧ ವೇಲ್ ಮಾತ್ರ ಸುಟ್ಟಿತ್ತು. ಉಳಿದ ಅರ್ಧ ವೇಲ್ ಪತ್ತೆ ಮಾಡಿ, ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ಚೆಕ್ ಬೌನ್ಸ್: ರಾಘವೇಂದ್ರ ಶೆಟ್ಟಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆಕ್ ಬೌನ್ಸ್ ಪ್ರಕರಣದಲ್ಲಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ಕರ್ನಾಟಕ ಕರಕುಶಲ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ಅವರ ಕಚೇರಿಗೆ ಶಿರಸಿ ಪೊಲೀಸರು ಸಮನ್ಸ್ ಪ್ರತಿ ಅಂಟಿಸಿ ಹೋಗಿದ್ದಾರೆ.

ವೈಯಕ್ತಿಕ ಹಣಕಾಸು ವ್ಯವಹಾರ ಸಂಬಂಧ ವ್ಯಕ್ತಿಯೊಬ್ಬರಿಗೆ ರಾಘವೇಂದ್ರ ಶೆಟ್ಟಿ ಅವರು ಚೆಕ್ ನೀಡಿದ್ದರು. ಅದು ಬೌನ್ಸ್ ಆಗಿದ್ದರಿಂದ ಆ ವ್ಯಕ್ತಿ, ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ವಿಚಾರಣೆಗಾಗಿ ರಾಘವೇಂದ್ರ ಶೆಟ್ಟಿ ಅವರಿಗೆ 4 ಬಾರಿ ಸಮನ್ಸ್ ಜಾರಿಯಾಗಿತ್ತು. ಅಷ್ಟಾದರೂ ಅವರು ವಿಚಾರಣೆಗೆ ಹಾಜರಾಗಿರಲಿಲ್ಲ.

ನ್ಯಾಯಾಲಯದ ಖಡಕ್ ಸೂಚನೆ ಮೇರೆಗೆ ಬೆಂಗಳೂರಿನಲ್ಲಿರುವ ರಾಘವೇಂದ್ರ ಶೆಟ್ಟಿ ಅವರ ಕಚೇರಿಗೆ ಬಂದ ಪೊಲೀಸರು ಬುಧವಾರ ಸಮನ್ಸ್ ಪ್ರತಿ ಅಂಟಿಸಿ, ಅದರ ಫೋಟೊ ಹಾಗೂ ವಿಡಿಯೊ ಸಮೇತ ಮಹಜರು ಮಾಡಿಕೊಂಡು ಹೋಗಿದ್ದಾರೆ.

ಹೃತ್ಪೂರ್ವಕ ಅಭಿನಂದನೆಗಳು

ಸಾಧನೆಗಳಿಗೆ ಮಿತಿಗಳಿಲ್ಲ ಎಂಬುದನ್ನು ಸಾಬೀತುಪಡಿಸಿದ ವ್ಯಕ್ತಿತ್ವ ನಮ್ಮಲ್ಲಿದೆ

ಹಾರ್ದಿಕ ಅಭಿನಂದನೆಗಳು

ಡಾ|| ಪ್ರಭಾಕರ ಬ. ಕೋರೆ
ಅಧ್ಯಕ್ಷರು, ಕೆ.ಎಲ್.ಇ. ಸಂಸ್ಥೆ, ಬೆಳಗಾವಿ
ಕುಲಾಧಿಪತಿಗಳು, ಕೆ.ಎಲ್.ಇ. ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಬೆಳಗಾವಿ
ಕುಲಾಧಿಪತಿಗಳು, ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾಲಯ, ಹುಬ್ಬಳ್ಳಿ
ಇವರಿಗೆ

"ಗೌರವ ಡಾಕ್ಟರ ಆಫ್ ಸೈನ್ಸ್"

ಪದವಿ ಪ್ರದಾನ ಮಾಡಿದವರು
ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯ (TJU),
ಫಿಲಡೆಲ್ಫಿಯಾ, USA

ಅಮೇರಿಕಾದ ಪ್ರತಿಷ್ಠಿತ ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯ ಮತ್ತು ಕೆ.ಎಲ್.ಇ. ಸಂಸ್ಥೆಯ ಸಹಯೋಗದ ತಾಯಿ ಮತ್ತು ಮಕ್ಕಳ ಆರೋಗ್ಯ ಸಂಶೋಧನೆಯಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಬೋಧಕರು ಮತ್ತು ವಿದ್ಯಾರ್ಥಿಗಳ ವಿನಿಮಯದಲ್ಲಿ ನೀಡಿದ ನಿಸ್ವಾರ್ಥ ಕೊಡುಗೆ ಹಾಗೂ ಭಾರತದಲ್ಲಿ ಕೆಳವರ್ಗದವರ ಅಭಿವೃದ್ಧಿಗಾಗಿ ಮತ್ತು ಶಿಕ್ಷಣ ಹಾಗೂ ಸಮಾಜ ಸೇವಾ ಕ್ಷೇತ್ರದಲ್ಲಿ ದಣಿವರಿಯದ ಸೇವೆ ಸಲ್ಲಿಸಿದ್ದಕ್ಕಾಗಿ ಮೇ 25, 2022 ರಂದು ಜರುಗಿದ ಘಟಿಕೋತ್ಸವದಲ್ಲಿ ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯ, ಫಿಲಡಲ್ಫಿಯಾ, USA, ಕೆ.ಎಲ್.ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ **ಡಾ|| ಪ್ರಭಾಕರ ಕೋರೆ** ಇವರಿಗೆ **'ಗೌರವ ಡಾಕ್ಟರ ಆಫ್ ಸೈನ್ಸ್'** ಪದವಿ ನೀಡಿ ಗೌರವಿಸಿದೆ.

ಡಾ|| ಪ್ರಭಾಕರ ಕೋರೆಯವರು ಅಮೇರಿಕೆಯ ಪ್ರತಿಷ್ಠಿತ ಥಾಮಸ್ ಜೆಫರ್ಸನ್ ಖಾಸಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ ಸ್ವೀಕರಿಸಿದ ಮೊದಲ ಹೆಮ್ಮೆಯ ಭಾರತೀಯರಾಗಿದ್ದಾರೆ.

ಅಭಿನಂದಿಸುವವರು

ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಚಿಕ್ಕೋಡಿ ಜಿ|| ಬೆಳಗಾವಿ

Shivashakti sugars Ltd. (Incorporated Under Companies Act 1956)
ಲಿಮಿಟೆಡ್ ಸೌಂದತ್ತಿ ತಾ|| ರಾಯಬಾಗ ಜಿ|| ಬೆಳಗಾವಿ

ಡಾ|| ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕಲಿ ತಾ|| ಚಿಕ್ಕೋಡಿ ಜಿ|| ಬೆಳಗಾವಿ

ಹರ್ಮ್ಸ್ ಡಿಸ್ಟಿಲರಿ ಪ್ರಾ. ಲಿ., ಯಡ್ರಾಂವ ತಾ|| ರಾಯಬಾಗ ಜಿ|| ಬೆಳಗಾವಿ

ಎಲ್ಲ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ.

‘ಸಚಿವಾಲಯ ಬಂದ್ ಕಾನೂನು ಬಾಹಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವಾಲಯ ನೌಕರರ ಸಂಘದವರು ಶುಕ್ರವಾರ ‘ಸಚಿವಾಲಯ ಬಂದ್’ಗೆ ಕರೆ ನೀಡಿರುವುದು ಕಾನೂನು ಬಾಹಿರ. ಕಚೇರಿಗೆ ಹಾಜರಾಗಲು ಬರುವ ಅಧಿಕಾರಿ–ಸಿಬ್ಬಂದಿಗೆ ಅಡ್ಡಿಪಡಿಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡಿ, ಶಿಸ್ತು ಕ್ರಮ ತೆಗೆದುಕೊಳ್ಳುವುದಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರು ಎಚ್ಚರಿಕೆ ನೀಡಿದ್ದಾರೆ.

‘ನೌಕರರ ಈ ನಡೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಆದ್ದರಿಂದ, ಸಚಿವಾಲಯದ ಎಲ್ಲಾ ಅಧಿಕಾರಿ, ಸಿಬ್ಬಂದಿ ಕಚೇರಿಗೆ ಕಡ್ಡಾಯವಾಗಿ ಹಾಜರಾಗಬೇಕು. ಒಂದು ವೇಳೆ ಪೂರ್ವಾನುಮತಿ ಪಡೆಯದೇ ಕಚೇರಿಗೆ ಗೈರು ಹಾಜರಾದರೆ ಅದನ್ನು ‘ಲೆಕ್ಕಕ್ಕಿಲ್ಲದ ಅವಧಿ’ ಎಂದು ಪರಿಗಣಿಸಲಾಗುವುದು’ ಎಂದು ಅವರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

‘ವಿಧಾನಪರಿಷತ್ ಮತ್ತು ರಾಜ್ಯಸಭೆ ಚುನಾವಣೆಗಳು ನಡೆಯುತ್ತಿರುವುದರಿಂದ ಬಂದ್‌ನಲ್ಲಿ ಯಾರೂ ಭಾಗವಹಿಸಬಾರದು ಎಂದು ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿಯವರು ನೌಕರರಿಗೆ ಸೂಚನೆ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಹುದ್ದೆ ಕಡಿತಗೊಳಿಸುವ ಬಗ್ಗೆ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಆದರೆ ಕೆಲವು ಇಲಾಖೆಗಳ ಪ್ರಧಾನ ಕಾರ್ಯದರ್ಶಿ, ಹೆಚ್ಚುವರಿ ಮುಖ್ಯಕಾರ್ಯದರ್ಶಿಗಳೇ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ ಎಂದು ಸಚಿವಾಲಯ ನೌಕರರು ದೂರಿದ್ದಾರೆ. ವಿಧಾನಸೌಧ, ವಿಕಾಸಸೌಧ ಸಚಿವಾಲಯದ ಸಿಬ್ಬಂದಿ ಕಚೇರಿಗೆ ಸಾಮೂಹಿಕ ರಜೆ ಹಾಕುವ ಮೂಲಕ ಬಂದ್ ಆಚರಿಸಲು ತೀರ್ಮಾನಿಸಿದ್ದಾರೆ.

ಬಂದ್ ನಡೆಸುವುದು ಏಕೆ?

ಆಡಳಿತ ಸುಧಾರಣೆ ಮತ್ತು ಆರ್ಥಿಕ ಮಿತವ್ಯಯದ ನೆಪವೊಡ್ಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಯ ಜನಸ್ಪಂದನ ವಿಭಾಗ ರದ್ದು, ಕಾನೂನು ಕೋಶ ಶಾಖೆಯಲ್ಲಿನ ಕಾರ್ಯದರ್ಶಿ ಹುದ್ದೆಗಳು ಸೇರಿ ಹಲವು ಹುದ್ದೆಗಳನ್ನು ಕಡಿತಗೊಳಿಸುತ್ತಿರುವುದನ್ನು ವಿರೋಧಿಸಿ ಸರ್ಕಾರದ ಸಚಿವಾಲಯ ನೌಕರರ ಸಂಘ ಸಚಿವಾಲಯ ಬಂದ್‌ಗೆ ಕರೆ ನೀಡಿದೆ.

‘ರಕ್ತದ ಆಕರಕೋಶ ದಾನಿಗಳ ಕೊರತೆ’

ಬೆಂಗಳೂರು: ‘ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರಕೋಶ ನೆರವಾಗುತ್ತದೆ. ಶೇ 30 ರಷ್ಟು ರೋಗಿಗಳಿಗೆ ಮಾತ್ರ ಕುಟುಂಬದ ಸದಸ್ಯರಿಂದ ಈ ರಕ್ತದ ಆಕರಕೋಶ ಲಭ್ಯವಾಗುತ್ತಿದೆ’ ಎಂದು ನಾರಾಯಣ ಹೆಲ್ತ್‌ನ ಕಸಿ ತಜ್ಞ ಡಾ. ಸುನೀಲ್ ಭಟ್ ಕಳವಳ ವ್ಯಕ್ತಪಡಿಸಿದರು.

ರಕ್ತದ ಆಕರಕೋಶ ದಾನಿಗಳ ನೋಂದಣಿ ಸೇವಾ ಸಂಸ್ಥೆ ‘ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್’ ನಗರದಲ್ಲಿ ಗುರುವಾರ ಹಮ್ಮಿಕೊಂಡ ವಿಶ್ವ ರಕ್ತ ಕ್ಯಾನ್ಸರ್ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ರಕ್ತದ ಕ್ಯಾನ್ಸರ್ ಎದುರಿಸುತ್ತಿರುವವರಲ್ಲಿ ಶೇ 70 ರಷ್ಟು ರೋಗಿಗಳಿಗೆ ದಾನಿಗಳನ್ನು ಹುಡುಕಬೇಕಾಗುತ್ತದೆ ದೇಶದಲ್ಲಿ ರಕ್ತದ ಆಕರ ಕೋಶ ದಾನಿಗಳಾಗಿ ಕೇವಲ 5 ಲಕ್ಷ ಮಂದಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಪಾಶ್ಚಾತ್ಯ ದೇಶಗಳಿಗೆ ಹೋಲಿಸಿದರೆ ಇದು ತೀರಾ ಕಡಿಮೆ. ದೇಶದಲ್ಲಿ ಪ್ರತಿ ವರ್ಷ 70 ಸಾವಿರ ಮಂದಿ ಮೃತಪಡುತ್ತಿದ್ದಾರೆ. 1 ಲಕ್ಷಕ್ಕೂ ಅಧಿಕ ಹೊಸ ರೋಗಿಗಳು ಪತ್ತೆಯಾಗುತ್ತಿದ್ದಾರೆ’ ಎಂದು ಹೇಳಿದರು.

ಬೆಂಗಳೂರು–ಚೆನ್ನೈ ಹೆದ್ದಾರಿಗೆ ಶಂಕುಸ್ಥಾಪನೆ

ಚೆನ್ನೈ (ಪಿಟಿಐ): ಬೆಂಗಳೂರು–ಚೆನ್ನೈ ನಡುವೆ ಅಂದಾಜು ₹ 14,870 ಕೋಟಿ ವೆಚ್ಚದಲ್ಲಿ 262 ಕಿ.ಮೀ ನೂತನ ಹೆದ್ದಾರಿ ಅಭಿವೃದ್ಧಿ ಪಡಿಸುವ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಇಲ್ಲಿ ಚಾಲನೆ ನೀಡಿದರು.

ಉದ್ದೇಶಿತ ಹೆದ್ದಾರಿ ಅಭಿವೃದ್ಧಿಯಿಂದ ಉಭಯ ನಗರಗಳ ನಡುವಿನ ಪ್ರಯಾಣದ ಅವಧಿ ಸುಮಾರು 2–3 ಗಂಟೆ ಕಡಿಮೆಯಾಗಲಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳ ಮೂಲಕ ನೂತನ ಹೆದ್ದಾರಿ ಹಾದುಹೋಗಲಿದೆ.

ಇದು ಸೇರಿದಂತೆ ₹ 28,000 ಕೋಟಿ ಅಂದಾಜು ವೆಚ್ಚದ ಆರು ವಿವಿಧ ಯೋಜನೆಗಳಿಗೆ ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಿದರು.

ಉದ್ಘಾಟನೆ: ಅಲ್ಲದೆ, ಸುಮಾರು 2,960 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿರುವ ಐದು ವಿವಿಧ ಯೋಜನೆಗಳನ್ನು ಪ್ರಧಾನಿ ಇದೇ ಸಂದರ್ಭದಲ್ಲಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ‘ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ನೆರವು ನೀಡಬೇಕು. ರಾಜ್ಯದಲ್ಲಿ ಅಭಿವೃದ್ಧಿ ಆರ್ಥಿಕ ಮಾನದಂಡವನ್ನಷ್ಟೇ ಒಳಗೊಂಡಿಲ್ಲ, ಸಮಗ್ರ ಅಭಿವೃದ್ಧಿಗೆ ಒತ್ತುನೀಡುವ ದ್ರಾವಿಡ ಮಾದರಿಯದ್ದಾಗಿದೆ’ ಎಂದರು.

ಅಧಿಕಾರ ದುರ್ಬಳಕೆ: ಐಎಎಸ್ ದಂಪತಿ ವರ್ಗಾವಣೆ

ನವದೆಹಲಿ (ಪಿಟಿಐ): ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಆರೋಪದ ಹಿಂದೆಯೇ ಐಎಎಸ್ ಅಧಿಕಾರಿ ದಂಪತಿಯನ್ನು ಕೇಂದ್ರ ಸರ್ಕಾರ ವರ್ಗಾವಣೆ ಮಾಡಿದೆ.

1994ನೇ ತಂಡದ ಅಧಿಕಾರಿಗಳಾದ ಖಿರ್ವಾರ್ ಅವರನ್ನು ಲಡಾಖ್‌ಗೆ ಹಾಗೂ ಅವರ ಪತ್ನಿಯನ್ನು ಅರುಣಾಚಲ ಪ್ರದೇಶಕ್ಕೆ ವರ್ಗಾಯಿಸಲಾಗಿದೆ. ಅಧಿಕಾರಿ ತಮ್ಮ ಸಾಕು ನಾಯಿಯು ವಿಹಾರ ಮಾಡಲು ಅನುವಾಗುವಂತೆ ಇಲ್ಲಿನ ತ್ಯಾಗರಾಜ್ ಕ್ರೀಡಾಂಗಣದಲ್ಲಿ ಅವಧಿಗೆ ಮೊದಲೇ ಕ್ರೀಡಾ ಚಟುವಟಿಕೆಯನ್ನು ಬಂದ್ ಮಾಡಿಸುತ್ತಿದ್ದರು ಎಂಬ ಆರೋಪವಿತ್ತು.

ಅಧಿಕಾರಿ ದಂಪತಿ ಈ ಮೂಲಕ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ಈ ಸಂಬಂಧ ವರದಿ ನೀಡುವಂತೆ ದೆಹಲಿಯ ಮುಖ್ಯ ಕಾರ್ಯದರ್ಶಿಯಿಂದ ಕೇಂದ್ರ ವರದಿ ಕೇಳಿತ್ತು.

ವರದಿಯ ಹಿಂದೆಯೇ ಕೇಂದ್ರ ಸರ್ಕಾರವು ವರ್ಗಾವಣೆಯನ್ನು ಮಾಡಿ ಆದೇಶ ಹೊರಡಿಸಿದೆ.

‘ರಾತ್ರಿ 10ರವರೆಗೆ ತೆರೆದಿರಬೇಕು’: ದೆಹಲಿಯಲ್ಲಿರುವ ಎಲ್ಲ ಕ್ರೀಡಾ ಸೌಲಭ್ಯ ಕೇಂದ್ರಗಳು ರಾತ್ರಿ 10 ಗಂಟೆವರೆಗೆ ಕ್ರೀಡಾಪಟುಗಳಿಗೆ ಮುಕ್ತವಾಗಿರಬೇಕು ಎಂದು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸೂಚನೆ ನೀಡಿದ್ದಾರೆ.

‘ಕ್ರೀಡಾಂಗಣಗಳು ಸಂಜೆ 6 ಅಥವಾ 7 ಗಂಟೆಗೆ ಮುಚ್ಚುತ್ತಿದ್ದು, ಕ್ರೀಡಾಪಟುಗಳು ಸಮಸ್ಯೆ ಎದುರಿಸುತ್ತಿರುವುದು ಗಮನಕ್ಕೆ ಬಂದಿದೆ. ಕ್ರೀಡಾಪಟುಗಳಿಗೆ ಸೌಲಭ್ಯಗಳು ಲಭ್ಯವಿರಬೇಕು’ ಎಂದು ಅವರು ಹೇಳಿದರು.

ರಿಯಲ್ ಎಸ್ಟೇಟ್ ಉದ್ಯಮಿ ಬಂಧನ

ನವದೆಹಲಿ (ಪಿಟಿಐ): ಪುಣೆ ಮೂಲದ ರಿಯಲ್ ಎಸ್ಟೇಟ್ ಸಮೂಹ ಎಬಿಐಎಲ್‌ನ ಅಧ್ಯಕ್ಷ ಅವಿನಾಶ್ ಭೋಂಸ್ಲೆ ಅವರನ್ನು ಸಿಬಿಐ ಗುರುವಾರ ಬಂಧಿಸಿದೆ.

ಯೆಸ್ ಬ್ಯಾಂಕ್ ಸ್ಥಾಪಕ ರಾಣಾ ಕಪೂರ್ ಮತ್ತು ಡಿಎಚ್‌ಎಫ್‌ಎಲ್‌ನ ಕಪಿಲ್ ವಾಧವನ್ ಅವರು ಭಾಗಿಯಾಗಿರುವ ಭ್ರಷ್ಟಾಚಾರ ಆರೋಪ ಪ್ರಕರಣದ ಸಂಬಂಧ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದ ಹಲವು ರಿಯಲ್ ಎಸ್ಟೇಟ್ ಕಂಪನಿಗಳ ಮೂಲಕ ಕಾನೂನು ಬಾಹಿರ ಹಣ ವರ್ಗಾವಣೆಯಾಗಿದೆ ಎಂದು ಸಿಬಿಐ ಶಂಕಿಸಿದೆ. ಏಪ್ರಿಲ್ 30ರಂದು ಸಿಬಿಐ ಅಧಿಕಾರಿಗಳು ಹೆಸರಾಂತ ಬಿಲ್ಡರ್‌ಗಳಿಗೆ ಸೇರಿದ ವಿವಿಧ ಸ್ಥಳಗಳ ಮೇಲೆ ದಾಳಿ ನಡೆಸಿದ್ದರು.

WEEKEND CORNER ಕ್ಲಾಸಿಫೈಡ್ಸ್

RAMAN POLYTECHNIC
12, Magadi Main Road, Kamakshipalya,
(Near Sumanahalli Bus Stop) Bengaluru-560079
Mobile: 080-23488623, 23284817, 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-22302

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Multiple Vacancy

REQUIRED TEAMLEADER, TELECALLER, & FIELD EXECUTIVE For Banking Loan collection (salary 20k). direct recruitment to company Contact:- 9620206756, 9620200756.

Teachers/ Professors

WALK-IN INTERVIEW Urgently required 1. B.A-B.Ed English Teacher for High School. 2. B.Sc- B.Ed Science and Maths Teacher. 3. D.Ed or TCH Teachers for Primary classes. Qualified and Experienced Candidates with Computer Knowledge may attend the interview on 31/5/22 along with their credentials. Timings: 10.00 am to 1.00 pm Contact: 080-25219961/ 9845615398

POWER-ONE Micro Systems Pvt.Ltd. — JOB OPPORTUNITIES
Leading Manufacturers of Highend UPS Systems requires the following Personnel for their Bengaluru Head Office.
GENERAL MANAGER MARKETING With 5 to 6 Years of Experience in UPS Sales.
MANAGER SALES With 3 to 4 Years of Experience in UPS Sales.
SALES COORDINATOR With 3 to 4 Years of experience with Good Computer Skills and Experience in GEM / Tender Preparation.
SECRETARY TO DIRECTOR With Good Communication and Computer Skills.
WALK IN INTERVIEW AT : Powerone Micro Systems Pvt. Ltd. GF-3, KSSIDC Building, 5th Cross, Peenya Industrial Estate, Bangalore - 560058.
Call: 63669 47362
E-mail: careers@poweroneups.com

Marketing & Sales

BUSINESS DEVELOPMENT Executive required for a Lubricant Distributor for sales of Industrial Lubricants. Male Graduates with atleast 1 year experience in Bidadi & Harohalli Industrial Suburbs can email resume to srenterprises.ramnagar@gmail.com .

WANTEDTEACHING STAFF & Non Teaching/ Assistant Head Master/ Academic Co-ordinators Fresher/ Experienced Teachers English/ Science (PCM) (CBZ) Maths/ Social/ Hindi/ Kannada/ Computer Good Salary with ESI/ PF/ NTTC/ PUC/ BA/ BCom/ DEd Tch/ BSc./ BE/ B.Tech/ BEd / Etc. Failed or Passed Candidates. WALK IN INTERVIEW, ALL WORKING DAYS B/w 10.30 AM TO 4.00PM MATHA'S INTERNATIONAL SCHOOL ICSE, MATHA'S ENGLISH HIGH SCHOOL State Syllabus English Medium, #55/2B, 11th K.M. Hosur Main Road, Garuve Bhavi palya Bangalore-68. M: 9606831599/ 9449814917/ 8277257669/ 8277256859/ 8277258609

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn upto 40,000/- Contact: 9741401834

GRAPHICS DESIGNER and Machine Operator Required for Textile Digital Printing Factory in Doddaballapura. Contact 9845860760

REAL ESTATE SELLING

Flat

Dollars Colony

MUST SELL Owners relocating 2 BHK semi furnished A khata Flat gated community Dollars Colony excellent amenities. Call: 9380546101

HRBR Layout

FLATS FOR Sale @ HRBR BDA Layout 2/3 BHK In Good Location Call:9538828808 9845066608

Jayanagar

NEW FLAT For Sale Jayanagar 1st Block East 2 & 3BHK Call: 9538848828, 9845066608

Malleshwaram

2 AND 3 BHK Flat for Sale at Malleshwaram Link Road 1 KM from Mantri Mall Metro station, Ready to Occupy Starts from 1.35 Cr Contact: 9901556699

Farm House/ Land/ Resorts

Jigani

400ACRES FARM LAND.FARM HOUSE Concept With Greenary Senaries.Hills Hill Station Motarable Roads-30KM From Jayanagar.Near Anekal Converting as Resort with Amenities & Upcoming More &.More Amenities. 60x100 Six Thousand Square Feet Plot N/F Available For Sale Cheap Rate. Please.Contact For Site Visit & Drop Free.Agents Welcome. Call:9482213680 9880216323 080-26654479

House

Indiranagar

HAL 3RD Stage Independent Duplex House in 30x45 site built up area 1500 sq.ft. Full DD Payment. Only Genuine buyers call #8904007677. (Brokers excuse)

RMV

SALE RMV 2nd stage, 5 Bedroom independent 50x90 Bungalow, 16 crores. Contact. 9844092859/ 9632377775.

Vijayanagar

BEHINDVIJAYANAGAR MARUTIMANDIR 30X40 house for sale, contact 9844569446 broker excuse

Vishweshwariah Layout

SALE: NEAR AMMA-ASHRAM NAGADEVANAHALLI 20X42 BBMP 'A'-KHATHA EF INDIPENDENT & DUPLEX HOUSE- 9845021795/ 9980733501

Industrial & Factory

Kanakapura Road

SALE- INDUSTRIAL PLOT 3500sft Pipeline Road, Jaraganahalli, Near JP Nagar Metro Station. Verna Developers: 9620253180/ 9353128035

Sites

Koramangala

60 X 40 Site in Koramangala 4th Block 8th Main Commercial Zone by Owner 6366064119

Kanakapura Road

30X40 SITE For Sale at Thataguni Kanakapura Main Road Just 2kms From Upcoming Metro Station Panchayat Limit Bank Loan Available For More Details Contact :9901556699

Out-Station

SHIVAMOGA SITE sale 30x50 outer ring road, behind KSRTC Bus-stand, 2000 psft negotiable. 9844092859/ 9632377775.

Vishweshwariah Layout

BDA SITE Sale Vishweshwaraiah Layout 6th Block 40x60 North Face Near BDA Complex Contact Gunuine Buyers 8892901567/ 9341733480

REAL ESTATE BUYING

Industrial & Factory

Multiple Locations

WANTED READY to move in 10,000 sq ft shed with 150 HP power in any of the following areas. Machohalli, kachohalli, Segehalli, Makali, Nelmangala. Contact 9845588666

Sites

Hebbal

WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR. Immediate settlement. "Spacelinks" 9845129934.

RENTAL PROPERTIES

Accommodation Available

Commercial

PRIME COMMERCIAL Space total 16000sft near Vijayanagar Metro Station available for Rent. Ground + 3. Suitable for Banks, Supermarkets etc. Ph: 9845869155

AUTOMOTIVE

Four Wheelers Selling

Hyundai

ACCIDENT VEHICLE KA-02 MK-7961 HYUNDAI i20 2015 model for sale without RC. For inspection contact: 9844083430/ 9632179542. Quotation to reach within SEVENDAYS.

Maruti

ACCIDENTAL DAMAGED KA-41 MC-7220 Vitara Brezza ZDI+ 2020 model for sale without documents. Inspection at Kalyani Motors Pantharapalya. For details contact: 9845074511

BUSINESS

Business Offers

WANTED BUSINESS Partner Non Veg Hotel 10 Lakhs Investment Monthly Income 1 Lakhs: 9606701007/ 8892501007

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

EDUCATIONAL

Admission

JOIN BEFORE 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

PERSONAL

Change of Name

JC668219L HONY/LT/SUB/MAJ MUKESH KUMAR 2ATC Mother Name records DULARI BHAI Instead of DULARI BAI JADHAV Notary KV Mani, Bangalore

I, PUNITH H.K S/o Kempaiah K, R/o: S/O Kempaiah K, Janatha Road, Huliyurdurga, Tumakuru, Karnataka Near Green Water Tank, Tumkur-572123, changed my name to Punith Varyan for all purposes.

I, SURFHUNNISSA, Residing at #18,'M' Block, KSDB Quarters, Lakshmidevinagar,Laggere, Bangalore-58 have changed my name as SHARFUNNISA, vide affidavit dated 26/5/2022 before Notary V.Anjanappa, Bangalore

I, RUTHVIK ARUN RAGHAVENDRA (Old Name) resident of No. 193, 3rd 'A' Cross, Upkar Residency, Ullal, Bangalore-91 have changed my name to RUTHVIK ARUNKUMAR vide affidavit dated: 25.05.2022 before notary S.T. Thippeswamy Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SUCCESS ಕ್ಲಾಸಿಫೈಡ್ಸ್

ಹಿಜಾಬ್‌ಗೆ ಅವಕಾಶ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಹಂಪನಕಟ್ಟೆಯ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಪದವಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬರುತ್ತಿದ್ದು, ಸರ್ಕಾರದ ನಿಯಮ ಉಲ್ಲಂಘನೆಯಾಗುತ್ತಿದೆ ಎಂದು ಆರೋಪಿಸಿ ಕೆಲ ವಿದ್ಯಾರ್ಥಿಗಳು ಕಾಲೇಜಿನ ಕ್ಯಾಂಪಸ್‌ನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ತರಗತಿ ಬಹಿಷ್ಕರಿಸಿದ ಈ ವಿದ್ಯಾರ್ಥಿಗಳು, ಕಾಲೇಜಿಗೆ ಬರುವ ವಿದ್ಯಾರ್ಥಿನಿಯರು ತರಗತಿಯ ಒಳಗೂ ಹಿಜಾಬ್ ಧರಿಸುತ್ತಿರುವುದಾಗಿ ಆರೋಪಿಸಿದರು. 'ವಿದ್ಯಾರ್ಥಿ ನಾಯಕ ವಿನ್ಯಾಸ್, ಹಿಜಾಬ್ ಪರ ಮಾತನಾಡುತ್ತಿದ್ದಾರೆ' ಎಂದು ಆರೋಪಿಸಿದ ವಿದ್ಯಾರ್ಥಿಗಳು, ವಿನ್ಯಾಸ್ ರಾಜೀನಾಮೆಗೆ ಆಗ್ರಹಿಸಿದರು.

ಕಾಲೇಜು ಆಡಳಿತ ಮಂಡಳಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಹಿಜಾಬ್ ನಿಯಮವನ್ನು ಕಾಲೇಜಿನಲ್ಲಿ ಅನುಷ್ಠಾನಗೊಳಿಸುವಂತೆ ಒತ್ತಾಯಿಸಿದರು.

ಮಂಗಳೂರಿನ ಹಂಪನಕಟ್ಟೆಯ ವಿಶ್ವವಿದ್ಯಾಲಯ ಕಾಲೇಜಿಗೆ ಕೆಲವು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬರುವುದನ್ನು ವಿರೋಧಿಸಿ, ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಮೇ 16ರಂದು ನಡೆದ ಮಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ವಿವಿ ಘಟಕ ಕಾಲೇಜುಗಳಲ್ಲಿ ಸಮವಸ್ತ್ರ ನಿಯಮ ಕಡ್ಡಾಯಗೊಳಿಸಬೇಕು ಮತ್ತು ವಿದ್ಯಾರ್ಥಿನಿಯರು ಶಿರವಸ್ತ್ರ ಧರಿಸುವಂತಿಲ್ಲ ಎಂದು ನಿರ್ಣಯವಾಗಿತ್ತು. ಈ ನಿರ್ಣಯವನ್ನು ಮೇ 17ರಿಂದಲೇ ಜಾರಿಗೆ ತರಲಾಗಿದ್ದು, ಸೂಚನಾ ಫಲಕದಲ್ಲಿ ಹಾಕಲಾಗಿದೆ. ತರಗತಿ ಧ್ವನಿವರ್ಧಕದ ಮೂಲಕ ಕೂಡ ವಿದ್ಯಾರ್ಥಿಗಳ ಗಮನಕ್ಕೆ ತರಲಾಗಿದೆ' ಎಂದು ಕಾಲೇಜಿನ ಪ್ರಾಂಶುಪಾಲೆ ಅನಸೂಯಾ ರೈ ತಿಳಿಸಿದ್ದಾರೆ.

'ನಂತರ ನಡೆದ ಕಾಲೇಜಿನ ವಿಭಾಗ ಮುಖ್ಯಸ್ಥರ ಸಭೆಯಲ್ಲಿ, ವಿದ್ಯಾರ್ಥಿನಿಯರು ಕಾಲೇಜಿಗೆ ಬಂದ ಮೇಲೆ ಮಹಿಳಾ ವಿಶ್ರಾಂತಿ ಕೊಠಡಿಗೆ ತೆರಳಿ, ಶಿರವಸ್ತ್ರವನ್ನು ತೆಗೆದು, ಸಮವಸ್ತ್ರದೊಂದಿಗೆ ಕಾಲೇಜಿನಲ್ಲಿ ಇರಬೇಕು ಎಂದು ನಿರ್ಣಯಿಸಲಾಗಿದೆ. ಕಾಲೇಜಿನ ಆವರಣದಲ್ಲಿ ಸಮವಸ್ತ್ರ ಹೊರತುಪಡಿಸಿ, ಬೇರೆ ಯಾವುದೇ ಉಡುಪು ಧರಿಸಲು ಅನುಮತಿ ಇಲ್ಲ. ನಿಯಮ ಉಲ್ಲಂಘಿಸಿದಲ್ಲಿ, ಶಿಸ್ತುಕ್ರಮ ಜರುಗಿಸಲಾಗುವುದು' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿನಿಯರಿಂದ ಮನವಿ ಸಲ್ಲಿಕೆ

'ಕಾಲೇಜು ಆರಂಭ ಆದಾಗಿನಿಂದ ಕಾಲೇಜಿನಲ್ಲಿ ನಮಗೆ ಹಿಜಾಬ್ ಧರಿಸಲು ಅವಕಾಶ ನೀಡಲಾಗಿತ್ತು. ಹಿಜಾಬ್ ನಮ್ಮ ಸಮವಸ್ತ್ರದ ಭಾಗವಾಗಿದ್ದು, ಕಾಲೇಜಿನ ಆವರಣದಲ್ಲಿ ಅದನ್ನು ಧರಿಸಲು ನಮಗೆ ಅವಕಾಶ ಕಲ್ಪಿಸಬೇಕು' ಎಂದು 40ಕ್ಕೂ ಹೆಚ್ಚು ಮುಸ್ಲಿಂ ವಿದ್ಯಾರ್ಥಿನಿಯರು ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಟಿ.ಸಿ ಪಡೆದ ನಾಲ್ವರು ವಿದ್ಯಾರ್ಥಿನಿಯರು

ನಗರದ ಕಾವೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಾಲ್ವರು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ, ತರಗತಿಗೆ ಹಾಜರಾಗಲು ಅನುಮತಿ ಕೇಳಿದ್ದು, ಇದಕ್ಕೆ ಅವಕಾಶ ಇಲ್ಲ ಎಂದು ಕಾಲೇಜಿನ ಪ್ರಮುಖರು ಸ್ಪಷ್ಟಪಡಿಸಿದಾಗ, ಈ ನಾಲ್ವರು ವಿದ್ಯಾರ್ಥಿನಿಯರು ವರ್ಗಾವಣೆ ಪತ್ರ (ಟಿ.ಸಿ) ಪಡೆದು ತೆರಳಿದರು ಎಂದು ಮೂಲಗಳು ತಿಳಿಸಿವೆ.

ಪಠ್ಯಪುಸ್ತಕ ಪರಿಷ್ಕರಣ ಸಮಿತಿ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣರೇ ತುಂಬಿರುವ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯನ್ನು ವಜಾಗೊಳಿಸಬೇಕು ಮತ್ತು ಇಷ್ಟೆಲ್ಲಾ ರಾದ್ಧಾಂತಗಳಿಗೆ ಕಾರಣವಾಗಿರುವ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ದಸಂಸ ಒಕ್ಕೂಟ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ದಲಿತ ಸಂಘಟನೆಗಳ ಮುಖಂಡರಾದ ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ವಿ.ನಾಗರಾಜ್, ಲಕ್ಷ್ಮೀನಾರಾಯಣ ನಾಗವಾರ, 'ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ನಿಲುವುಗಳ ಬಗ್ಗೆ ಮುಖ್ಯಮಂತ್ರಿಯ ಮೌನ ಮತ್ತು ಸಮರ್ಥನೆಯನ್ನು ನಾವು ಖಂಡಿಸುತ್ತೇವೆ. ಅವರು ಮೌನ ಮುರಿದು ಸಂವಿಧಾನ ವಿರೋಧಿ ನಿರ್ಧಾರಗಳನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನೆ ನಡೆಸಲಾಗುವುದು' ಎಂದರು.

'ಸಮಿತಿಯ ಏಳು ಜನರಲ್ಲಿ ಎಲ್ಲರೂ ಬ್ರಾಹ್ಮಣರು. ಆದ್ದರಿಂದಲೇ 10ನೇ ತರಗತಿ ಪಠ್ಯದಲ್ಲಿ ಸೇರಿಸಲಾದ 9 ಪಠ್ಯಗಳು ಬ್ರಾಹ್ಮಣ ಲೇಖಕರದ್ದೇ ಆಗಿವೆ. ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳ ಲೇಖಕರ ಪಠ್ಯಗಳನ್ನು ಕೈಬಿಡಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಜಾತಿ ಪದ್ಧತಿ, ವರ್ಣಾಶ್ರಮ ಪ್ರೋತ್ಸಾಹಿಸುವ ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಬರಹವನ್ನು ಪಠ್ಯದಲ್ಲಿ ಸೇರಿಸುವ ಮೂಲಕ ಮಕ್ಕಳಲ್ಲಿ ದ್ವೇಷ ಬಿತ್ತಲಾಗುತ್ತಿದೆ. ಚಕ್ರವರ್ತಿ ಸೂಲಿಬೆಲೆ ಎಂಬ ಸುಳ್ಳುಗಾರನ ಬರಹವನ್ನೂ ಪಠ್ಯದಲ್ಲಿ ಸೇರಿಸಲಾಗಿದೆ. ಇದರಿಂದ ಮಕ್ಕಳ ಮನಸ್ಥಿತಿ ಏನಾಗುತ್ತದೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು' ಎಂದರು.

'ಪಠ್ಯಪುಸ್ತಕದ ಮರುಪರಿಶೀಲನೆ ನಡೆಯಲಿ'

ಬೆಂಗಳೂರು: 'ಶಾಲಾ ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲ ನಿವಾರಣೆಗೆ ಉನ್ನತ ಮಟ್ಟದ ಸಮಿತಿ ರಚಿಸಿ, ಪಠ್ಯಪುಸ್ತಕಗಳನ್ನು ಮರುಪರಿಶೀಲನೆಗೆ ಒಳಪಡಿಸಬೇಕು' ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಅವರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

'ಪಠ್ಯಪುಸ್ತಕದ ಪರಿಷ್ಕರಣೆಗೆ ಸಂಬಂಧಿಸಿದಂತೆ ಪರ–ವಿರೋಧದ ನಿಲುವುಗಳು ತೀವ್ರತೆ ಪಡೆದುಕೊಳ್ಳುತ್ತಿವೆ. ಸಾಂಸ್ಕೃತಿಕ ಸಂಘರ್ಷಗಳಿಗೆ ನಾಂದಿಯಾಗುತ್ತಿವೆ. ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಸಿದ್ಧಪಡಿಸಿರುವ ಪಠ್ಯಗಳನ್ನು ಮರುಪರಿಶೀಲನೆ ನಡೆಸಲು ಶಿಕ್ಷಣ ತಜ್ಞರ ಉನ್ನತ ಮಟ್ಟದ ಸಮಿತಿ ನೇಮಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಪಠ್ಯಗಳಲ್ಲಿ ಎಡ–ಬಲ ಮುಖ್ಯವಲ್ಲ. ಮಕ್ಕಳು ನಾಡನ್ನು ಪ್ರೀತಿಸುವ, ದೇಶವನ್ನು ಗೌರವಿಸುವ, ಸಂಸ್ಕೃತಿ–ಸಂಸ್ಕಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಮಾನವೀಯ ಮೌಲ್ಯಗಳನ್ನು ರೂಪಿಸಿಕೊಳ್ಳುವ ಪಠ್ಯಗಳು ಬೇಕಾಗಿವೆ. ಹೀಗಾಗಿ, ಸೌಹಾರ್ದದಿಂದ ಈ ಸಮಸ್ಯೆ ಪರಿಹರಿಸಲು ಎಲ್ಲರೂ ಸಹಕರಿಸಬೇಕು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಿಇಟಿ: ಹಿಜಾಬ್‌ಗೆ ಅವಕಾಶ ಇಲ್ಲ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಈ ಬಾರಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮುಂದಾಗಿದೆ.

ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ರೀತಿಯಲ್ಲೇ ಪರೀಕ್ಷೆಗಳನ್ನು ನಡೆಸಲು ಪ್ರಾಧಿಕಾರ ಸಿದ್ಧತೆಗಳನ್ನು ಕೈಗೊಂಡಿದೆ. ಅಭ್ಯರ್ಥಿಗಳು ಪ್ರಾಧಿಕಾರ ರೂಪಿಸುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಹಿಜಾಬ್ ಧರಿಸಲು ಅವಕಾಶ ಇಲ್ಲ. ಪರೀಕ್ಷಾ ಕೇಂದ್ರ ಪ್ರವೇಶಕ್ಕೂ ಮುನ್ನ ಹಿಜಾಬ್ ತೆಗೆದಿಡಬೇಕು.

'ಅಭ್ಯರ್ಥಿಗಳು ಕಿವಿ ಮುಚ್ಚುವ ರೀತಿಯ ಯಾವುದೇ ಬಟ್ಟೆಯನ್ನು ಧರಿಸುವಂತಿಲ್ಲ. ಉದ್ದ ತೋಳಿನ ಅಂಗಿಯನ್ನು ಧರಿಸಬಾರದು. ಅಭ್ಯರ್ಥಿಗಳು ಚಪ್ಪಲಿ ಹಾಕಿಕೊಂಡು ಬರಬೇಕು. ಶೂ ಹಾಕಿಕೊಂಡು ಬರಬಾರದು. ಅಭ್ಯರ್ಥಿಗಳು ಪಾಲಿಸಬೇಕಾದ ನಿಯಮಗಳ ಬಗ್ಗೆ ಶೀಘ್ರ ವಿವರಗಳನ್ನು ಬಿಡುಗಡೆ ಮಾಡಲಾಗುವುದು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿ ಎಸ್. ರಮ್ಯಾ ತಿಳಿಸಿದ್ದಾರೆ.

ಜೂನ್ 16ರಿಂದ 18ರವರೆಗೆ ರಾಜ್ಯದಾದ್ಯಂತ ಪರೀಕ್ಷೆಗಳು ನಡೆಯಲಿದೆ.

ಉಡುಪ ಸಂಗೀತೋತ್ಸವ ಜೂನ್ 2ರಿಂದ

ಬೆಂಗಳೂರು: ಉಡುಪ ಪ್ರತಿಷ್ಠಾನವು ನಗರದ ಸಂಗೀತ ರಸಿಕರನ್ನು ರಂಜಿಸಲು ಸಜ್ಜಾಗಿದೆ. 'ಉಡುಪ ಸಂಗೀತೋತ್ಸವ'ದ ನಾಲ್ಕನೇ ಆವೃತ್ತಿಯು ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಜೂನ್ 2ರಿಂದ 4ರವರೆಗೆ ಪ್ರತಿದಿನ ಸಂಜೆ 7ರಿಂದ ನಡೆಯಲಿದ್ದು ದೇಶ ವಿದೇಶಗಳಲ್ಲಿ ಹೆಸರು ಮಾಡಿರುವ ಕಲಾವಿದರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ.

ಉಸ್ತಾದ್ ಅಮ್ಜದ್ ಅಲಿ ಖಾನ್

ವಿದುಷಿ ಬಾಂಬೆ ಜಯಶ್ರೀ

ಶಿವಮಣಿ

ಟಿಕೆಟ್‌ಗಳು ಬುಕ್ ಮೈಶೋನಲ್ಲಿ ಲಭ್ಯ. ಘಟಂ ಗಿರಿಧರ್ 2015ರಲ್ಲಿ ಸ್ಥಾಪಿಸಿರುವ ಉಡುಪ ಪ್ರತಿಷ್ಠಾನವು ಶಾಸ್ತ್ರೀಯ ಸಂಗೀತ, ಪ್ರದರ್ಶನ ಕಲೆ ಹಾಗೂ ಸಂಸ್ಕೃತಿಯನ್ನು ಉತ್ತೇಜಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

ಕಾರ್ಯಕ್ರಮಗಳ ವಿವರ: ಜೂನ್ 2: ಮೊದಲ ಸಂಗೀತ ಕಛೇರಿ: ವಿದ್ವಾನ್ ಮಟ್ಟನೂರ್ ಶಂಕರನ್ ಕುಟ್ಟಿ ಮರರ್ (ಚೆಂಡೆ), ಪಂಡಿತ್ ಯೋಗೀಶ್ ಸಂಸಿ (ತಬಲ), ವಿದ್ವಾನ್ ಬೆಂಗಳೂರು ಅಮೃತ್ (ಖಂಜೀರ).

ಎರಡನೇ ಸಂಗೀತ ಕಛೇರಿ: ಉಸ್ತಾದ್ ಅಮ್ಜದ್ ಅಲಿ ಖಾನ್ (ಸರೋದ್), ಪಂಡಿತ್ ಕುಮಾರ ಬೋಸ್ (ತಬಲ)

ಜೂನ್ 3: ವಿದುಷಿ ಬಾಂಬೆ ಜಯಶ್ರೀ (ಗಾಯನ), ವಿದುಷಿ ಜಯಂತಿ ಕುಮರೇಶ್ (ವೀಣೆ), ಎಚ್. ಎನ್. ಭಾಸ್ಕರ್ (ಪಿಟೀಲು), ವಿದ್ವಾನ್ ವಿ.ವಿ. ರಮಣಮೂರ್ತಿ (ಮೃದಂಗ), ವಿದ್ವಾನ್ ಜಯಚಂದ್ರ ರಾವ್ (ಮೃದಂಗ)

ಜೂನ್ 4: ಲೂಯಿಸ್ ಬ್ಯಾಂಕ್ಸ್ (ಕೀಬೋರ್ಡ್), ಶಿವಮಣಿ (ಡ್ರಮ್ಸ್), ಕಾರ್ತಿಕ್ (ಗಾಯನ), ಸ್ಟೀಫನ್ ದೇವಸಿ (ಕೀಬೋರ್ಡ್), ವಿದ್ವಾನ್ ರವಿಚಂದ್ರ ಕೂಳೂರು (ಕೊಳಲು), ಶೆಲ್ಡನ್ ಡಿಸಿಲ್ವ (ಬಾಸ್ ಗಿಟಾರ್) ಸಂಪರ್ಕ: 9886183872/ 7899882200

'ಸ್ಕೈ ವಾಕ್ ನಿರ್ಮಾಣ ಕೈಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಮತ್ತೆ 40 ಸ್ಕೈ ವಾಕ್‌ಗಳನ್ನು ನಿರ್ಮಿಸಲು ಬಿಬಿಎಂಪಿ ಮುಂದಾಗಿದೆ ಎಂದು ತಿಳಿದುಬಂದಿದೆ. ಈಗಿರುವ ಸ್ಕೈ ವಾಕ್‌ಗಳನ್ನೇ ಜನರು ಅಪ್ಪಿ–ತಪ್ಪಿಯೂ ಬಳಸುತ್ತಿಲ್ಲ. ಹಾಗಾಗಿ ಈ ಪ್ರಸ್ತಾವವನ್ನು ಕೈಬಿಡಬೇಕು' ಎಂದು ಸರ್ಕಾರದ ಶಿಕ್ಷಣ ಸುಧಾರಣೆ ಮಾಜಿ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಒತ್ತಾಯಿಸಿದ್ದಾರೆ.

'ಸ್ಕೈವಾಕ್ ಬಳಸಲು ಮೇಲಕ್ಕೆ ಹತ್ತಿ ಇಳಿಯಬೇಕು. ಇದಕ್ಕೆ ಜನ ಸಿದ್ಧರಿಲ್ಲ. ಬಿಬಿಎಂಪಿ ಕಚೇರಿ ಸಮೀಪವೇ ನಿರ್ಮಿಸಿರುವ ಸ್ಕೈ ವಾಕ್ ಕೂಡ ಬಳಕೆಯಾಗುತ್ತಿಲ್ಲ' ಎಂದು ಅವರು ತಿಳಿಸಿದ್ದಾರೆ.

ದೊರೆಸ್ವಾಮಿ

'ಈ ಹಿಂದೆ ಸ್ಕೈ ವಾಕ್‌ಗಳ ಬಳಕೆಯನ್ನು ಸುಗಮಗೊಳಿಸಲು ಎಸ್ಕಲೇಟರ್‌ಗಳನ್ನು ಅಳವಡಿಸಬೇಕು ಎಂಬ ಸಲಹೆ ವ್ಯಕ್ತವಾಗಿತ್ತು. ಇದಕ್ಕೆ ದುಬಾರಿ ವೆಚ್ಚವಾಗುತ್ತದೆ. ಸ್ಕೈವಾಕ್ ನಿರ್ಮಾಣಕ್ಕೂ ಭಾರಿ ಪ್ರಮಾಣದ ಉಕ್ಕು ಬೇಕಾಗುತ್ತದೆ. ಇಷ್ಟೆಲ್ಲ ವೆಚ್ಚ ಮಾಡಿಯೂ ಅವುಗಳನ್ನು ಜನರು ಬಳಸದಿದ್ದರೆ ತೆರಿಗೆದಾರರ ಹಣ ವ್ಯರ್ಥವಾಗುತ್ತದೆ ಅಷ್ಟೇ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಹಿಂದಿನ ತಪ್ಪುಗಳಿಂದ ಪಾಠ ಕಲಿಯಬೇಕು. ಅನುದಾನದ ಕೊರತೆ ಎದುರಿಸುತ್ತಿರುವ ಸಂದರ್ಭದಲ್ಲಿ ಬಿಬಿಎಂಪಿಯು ಹಣವನ್ನು ಎಚ್ಚರಿಕೆಯಿಂದ ವೆಚ್ಚ ಮಾಡುವುದನ್ನು ಬಿಟ್ಟು ಈ ರೀತಿ ದುಂದು ವೆಚ್ಚ ಮಾಡುವುದನ್ನು ಸಮರ್ಥಿಸಲಾಗದು. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ನೆರವಾಗುವುದಾದರೆ, ಸ್ಕೈ ವಾಕ್‌ಗಳು ನಿರ್ಮಿಸುವುದನ್ನು ಸ್ವಾಗತಿಸಬಹುದು. ಆದರೆ, ಜಾಹೀರಾತು ಪ್ರಕಟಣೆ ಹೊರತಾಗಿ ಬೇರಾವ ಪ್ರಯೋಜನವೂ ಇವುಗಳಿಂದ ಆಗುತ್ತಿಲ್ಲ' ಎಂದು ಅವರು ಪ್ರತಿಪಾದಿಸಿದ್ದಾರೆ.

ಫಲಿತಾಂಶ ಪ್ರಕಟಿಸದ ಕೆಪಿಎಸ್ಸಿ: ಸುರೇಶ್ ಕುಮಾರ್ ಪತ್ರ

ಬೆಂಗಳೂರು: ಕೆಪಿಎಸ್‌ಸಿ ಕರ್ನಾಟಕ ನಾಗರಿಕ ಸೇವೆಯ 106 ಹುದ್ದೆಗಳಿಗೆ ಮುಖ್ಯ ಪರೀಕ್ಷೆ ನಡೆಸಿ 15 ತಿಂಗಳು ಕಳೆದಿದ್ದರೂ ಇನ್ನೂ ಫಲಿತಾಂಶ ಪ್ರಕಟವಾಗಿಲ್ಲ. ಇದರಿಂದ ಅಭ್ಯರ್ಥಿಗಳು ಹತಾಶೆಗೊಳಗಾಗಿ ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಳ್ಳಬಹುದು ಎಂದು ಶಾಸಕ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ.

ಸುರೇಶ್ ಕುಮಾರ್

ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಅವರು, 'ಈ ವಿಚಾರವಾಗಿ ಮಾರ್ಚ್ 24 ರಂದು ಪತ್ರ ಬರೆದಿದ್ದೆ. ಅಲ್ಲದೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನೂ ಭೇಟಿ ಮಾಡಿ ವಾಸ್ತವಾಂಶಗಳನ್ನು ವಿವರಿಸಿದ್ದೇನೆ. ಆದರೆ ನಿಖರವಾದ ಮಾಹಿತಿ ನನಗಾಗಲೀ, ಅಭ್ಯರ್ಥಿಗಳಾಗಲಿ ಲಭ್ಯವಾಗಿಲ್ಲ' ಎಂದು ತಿಳಿಸಿದ್ದಾರೆ.

ಕೆಪಿಎಸ್‌ಸಿಯಿಂದ 10 ವರ್ಷಗಳಲ್ಲಿ ನಡೆದಿರುವ ಪರೀಕ್ಷೆ ನಾಲ್ಕು ಬಾರಿ ಮಾತ್ರ. 106 ಹುದ್ದೆಗಳಿಗೆ 2017 ನೇ ಸಾಲಿನ ಅಧಿಸೂಚನೆ 2020 ರ ಫೆಬ್ರುವರಿಯಲ್ಲಿ ಪ್ರಕಟವಾಯಿತು. 1.67 ಲಕ್ಷ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆ ತೆಗೆದುಕೊಂಡಿದ್ದರು. ಇವರಲ್ಲಿ 2,200 ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹರಾಗಿದ್ದರು. ಈ ಅಭ್ಯರ್ಥಿಗಳಿಗೆ ಪೂರ್ವಭಾವಿ ಪರೀಕ್ಷೆ ನಡೆದದ್ದು 2020 ರ ಆಗಸ್ಟ್ 24 ರಂದು. 2021 ರ ಫೆಬ್ರುವರಿಯಲ್ಲಿ ಮುಖ್ಯಪರೀಕ್ಷೆ ನಡೆದಿತ್ತು. ಈವರೆಗೂ ಫಲಿತಾಂಶ ಪ್ರಕಟವಾಗಿಲ್ಲ ಎಂದು ಹೇಳಿದ್ದಾರೆ.

ಮೂತ್ರಪಿಂಡ ಸಮಸ್ಯೆ: ಬಾಲಕನಿಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ಮೂತ್ರಪಿಂಡದ ಸಮಸ್ಯೆ ಎದುರಿಸುತ್ತಿದ್ದ 12 ವರ್ಷದ ಬಾಲಕನಿಗೆ ಎನ್‌ಯು ಆಸ್ಪತ್ರೆಯು ವರ್ಸಿಯಸ್ ರೋಬೋಟಿಕ್ ತಂತ್ರಜ್ಞಾನದ ನೆರವಿನಿಂದ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದೆ.

ಶಾನುಭೋಗನಹಳ್ಳಿಯಲ್ಲಿ ನೆಲೆಸಿರುವ ಬಾಲಕನಿಗೆ ಕೆಲ ದಿನಗಳಿಂದ ಮೂತ್ರಪಿಂಡದಲ್ಲಿ ನೋವು ಕಾಣಿಸಿಕೊಂಡಿತ್ತು.ಈ ನೋವುನಿಂದಾಗಿ ಬೆನ್ನು ನೋವು ಸಮಸ್ಯೆಯನ್ನೂ ಎದುರಿಸಬೇಕಾಗಿತ್ತು. 4 ಗಂಟೆ ಕಾಲ ನಡೆದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ ಎಂದು ಆಸ್ಪತ್ರೆ ತಿಳಿಸಿದೆ. 'ವರ್ಸಿಯಸ್ ರೋಬೋಟಿಕ್ ತಂತ್ರಜ್ಞಾನದಿಂದಾಗಿ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನೂ ಸುಲಭವಾಗಿ ನಡೆಸಬಹುದು. ರೋಗಿಯು ಶಸ್ತ್ರಚಿಕಿತ್ಸೆ ನಡೆದ ದಿನವೇ ಮನೆಗೆ ತೆರಳಬಹುದು' ಎಂದು ಆಸ್ಪತ್ರೆಯ ಮಕ್ಕಳ ಮೂತ್ರ ತಜ್ಞ ಡಾ. ಪ್ರಸನ್ನ ವೆಂಕಟೇಶ್ ತಿಳಿಸಿದ್ದಾರೆ.

ಕೋಡಿಹಳ್ಳಿ ವಿರುದ್ಧ ಸಿಬಿಐ ತನಿಖೆಗೆ ಆಗ್ರಹ

ಬೆಂಗಳೂರು: ಕಳೆದ ವರ್ಷ ನಾಲ್ಕು ಸಾರಿಗೆ ನಿಗಮಗಳ ನೌಕರರ ಮುಷ್ಕರ ವಾಪಸ್ ಪಡೆಯುವ ಸಂದರ್ಭದಲ್ಲಿ ನಡೆದಿರುವ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಒತ್ತಾಯಿಸಿದೆ.

2021ರ ಏಪ್ರಿಲ್ 7ರಿಂದ 21ರವರೆಗೆ ಕರೆ ನೀಡಿದ್ದ ಮುಷ್ಕರ ಯಾವುದೇ 'ಕೈಗಾರಿಕಾ ಒಪ್ಪಂದ' ಇಲ್ಲದೆ ಅಂತ್ಯಗೊಂಡಿತ್ತು. ಈ ಮುಷ್ಕರ ವಾಪಸ್ ಪಡೆಯುವ ವಿಚಾರದಲ್ಲಿ ಮುಷ್ಕರದ ನೇತೃತ್ವ ವಹಿಸಿದವರಿಗೆ ಕೋಟ್ಯಂತರ ರೂಪಾಯಿ ಕಿಕ್‌ಬ್ಯಾಕ್ ನೀಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ ಎಂದು ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನೌಕರರ ನಾಯಕತ್ವವನ್ನು ರೈತ ಸಂಘದ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ವಹಿಸಿದ್ದರು. ಮುಷ್ಕರವನ್ನು ವಾಪಸ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಅವರು ₹35 ಕೋಟಿ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ. ಈ ಮೊತ್ತವನ್ನು ಯಾವ ಸಂಪನ್ಮೂಲದಿಂದ ನೀಡಲಾಗಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಕಿಕ್‌ಬ್ಯಾಕ್‌ನ ಅರ್ಧ ಮೊತ್ತವನ್ನು ಕಪ್ಪು ಹಣದ ರೂಪದಲ್ಲಿ ಮತ್ತು ಉಳಿದರ್ಧ ಹಣವನ್ನು ದುಬೈನಲ್ಲಿರುವ ಕೋಡಿಹಳ್ಳಿ ಚಂದ್ರಶೇಖರ್ ಅವರ ಪತ್ನಿ ಮತ್ತು ಮಗನ ಖಾತೆಗೆ ಹಾಕಿದ್ದಾರೆ ಎನ್ನಲಾಗಿದೆ. ಕಪ್ಪು ಹಣ ಯಾರಿಗೆ ನೀಡಲಾಗಿದೆ ಎನ್ನುವುದು ಬಹಿರಂಗವಾಗಬೇಕು. ಹೀಗಾಗಿ, ತಕ್ಷಣವೇ ಕೋಡಿಹಳ್ಳಿ ಚಂದ್ರಶೇಖರ್ ಅವರ ವಿರುದ್ಧ ಭ್ರಷ್ಟಾಚಾರದ ಆರೋಪದ ಮೇಲೆ ಮೊಕದ್ದಮೆ ದಾಖಲಿಸಬೇಕು ಮತ್ತು ಎಲ್ಲ ಅಂಶಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಸಂಪರ್ಕಿಸಿದರೂ ದೂರವಾಣಿ ಕರೆ ಸ್ವೀಕರಿಸಲಿಲ್ಲ.

ಗಂಗಾಕಲ್ಯಾಣ: ಅಕ್ರಮ ನಡೆಯದಿದ್ದಲ್ಲಿ ತನಿಖೆ ಏಕೆ– ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ಪರಿಶಿಷ್ಟರ ಕಲ್ಯಾಣಕ್ಕಾಗಿ ₹431 ಕೋಟಿ ಮೊತ್ತದ 'ಗಂಗಾ ಕಲ್ಯಾಣ' ಯೋಜನೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಪ್ರತಿಪಾದಿಸಿದ್ದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಈಗ ತನಿಖಾ ತಂಡ ರಚಿಸಿರುವುದೇಕೆ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗಂಗಾ ಕಲ್ಯಾಣ ಯೋಜನೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಕಾಂಗ್ರೆಸ್‌ನವರು ಯಾವುದೇ ಪುರಾವೆ, ದಾಖಲೆಗಳಿಲ್ಲದೇ ಕೇವಲ ಹಿಟ್ ಅಂಡ್ ರನ್ ಮಾಡುತ್ತಿದ್ದಾರೆ ಎಂದು ಸಚಿವ ಕೋಟ ಅವರು ಹೇಳಿದ್ದರು. ಅವರ ಈಗಿನ ನಡೆಗೆ ಏನು ಕಾರಣ' ಎಂದು ಕೇಳಿದರು.

'ಮೇ 11 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಮುಖ್ಯಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಗೆ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ. ಮೂರು ಪ್ರಕರಣಗಳಲ್ಲಿ ಲೋಪವಾಗಿದೆ ಎಂದಿರುವ ವರದಿ, ಯೋಜನೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂದು ತಿಳಿಸಿದೆ. ಸಚಿವರಿಗೆ ತಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎಂಬ ಅರಿವಿಲ್ಲವೇ? ಅರಿವಿದ್ದರೂ ರಾಜ್ಯದ ಜನರಿಗೆ ಸುಳ್ಳು ಹೇಳುತ್ತಿದ್ದಾರಾ ಎಂಬ ಬಗ್ಗೆ ಸ್ಪಷ್ಟನೆ ನೀಡಬೇಕು' ಎಂದು ಪ್ರಿಯಾಂಕ್ ಆಗ್ರಹಿಸಿದರು.

ಸರ್ಕಾರ ರಚಿಸಿರುವ ತನಿಖಾ ತಂಡಗಳಿಗೆ ಅಧಿಕಾರಿಗಳು ದಾಖಲೆ ನೀಡುತ್ತಿಲ್ಲ ಯಾಕೆ? ತನಿಖಾ ವರದಿಯಲ್ಲಿ ಯಾವ ನಿಗಮ ಎಷ್ಟು ದಾಖಲೆ ನೀಡಿದೆ ಎಂಬುದನ್ನು ಉಲ್ಲೇಖಿಸಲಾಗಿದೆ. ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ 30 ಪ್ಯಾಕೇಜ್‌ನಲ್ಲಿ 8 ಪ್ಯಾಕೇಜ್, ವಾಲ್ಮೀಕಿ ಮಹರ್ಷಿ ಅಭಿವೃದ್ಧಿ ನಿಗಮ 27 ಪ್ಯಾಕೇಜ್ ನಲ್ಲಿ 18 ಪ್ಯಾಕೇಜ್, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ 7 ಪ್ಯಾಕೇಜ್ ಪೈಕಿ 2ರ ಮಾಹಿತಿ ನೀಡಿದ್ದರೆ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು 14 ಪ್ಯಾಕೇಜ್‌ಗಳ ಪೈಕಿ ಒಂದರ ಮಾಹಿತಿಯನ್ನೂ ನೀಡದೇ ಇರುವುದು ವರದಿಯಲ್ಲಿದೆ' ಎಂದು ಅವರು ವಿವರಿಸಿದರು.

ಗಂಗಾಕಲ್ಯಾಣದ ಅಕ್ರಮದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿದರೆ ಎಲ್ಲವೂ ಬಯಲಿಗೆ ಬರಲಿದೆ ಎಂದೂ ಅವರು ಹೇಳಿದರು.

ದಯಾನಂದ ಸಾಗರ ಕಾಲೇಜಿನಲ್ಲಿ 'ವೈಬ್ರೇಷನ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಯಾನಂದ ಸಾಗರ ಕಾಲೇಜಿನ 'ವೈಬ್ರೇಷನ್ಸ್' ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ನಟ ಮಾಸ್ಟರ್ ಆನಂದ್, ಚೈತ್ರ ವಾಸುದೇವನ್ ಹಾಗೂ ವಿಕ್ಕಿ ವರುಣ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾಲೇಜಿನ ಪ್ರದರ್ಶನ ಕಲೆಗಳ ಕೇಂದ್ರದ 'ಮುದ್ರಾ' ನೃತ್ಯ ತಂಡದಿಂದ ಆಕರ್ಷಕವಾದ ನೃತ್ಯ ಪ್ರದರ್ಶನ ಗಮನಸೆಳೆಯಿತು.

'ಬಾಹ್ಯಾಕಾಶ' ಎನ್ನುವ ವಿಷಯದೊಂದಿಗೆ ಈ ವರ್ಷದ ವೈಬ್ರೇಷನ್ಸ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳನ್ನು ರಂಜಿಸಿದವು. ತಾಳಕ್ಕೆ ತಕ್ಕಂತೆ ಕುಣಿದ ಗಗನಯಾತ್ರಿಯ ಕಾರ್ಯಕ್ರಮ ಉತ್ಸವಕ್ಕೆ ಮೆರುಗು ನೀಡಿತು. ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ಉತ್ಸವಕ್ಕೆ ಕಳೆ ತಂದರು.

ದಯಾನಂದ ಸಾಗರ ಕಾಲೇಜಿನಲ್ಲಿ ನಡೆದ 'ವೈಬ್ರೇಷನ್ಸ್' ಕಾರ್ಯಕ್ರಮದಲ್ಲಿ ಚೈತ್ರ ವಾಸುದೇವನ್, ವಿಕ್ಕಿ ವರುಣ್, ನಟ ಮಾಸ್ಟರ್ ಆನಂದ್, ಪಾಲ್ಗೊಂಡಿದ್ದರು.

ಎಸ್‌ಎಸ್‌ಎಂ ಶಾಲೆಗೆ ಶೇ 100 ಫಲಿತಾಂಶ

ಬೆಂಗಳೂರು: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಎಸ್‌ಎಸ್‌ಎಂ ಪಬ್ಲಿಕ್ ಶಾಲೆಗೆ ಶೇ 100ರಷ್ಟು ಫಲಿತಾಂಶ ದೊರೆತಿದೆ.

ಶಾಲೆಯ ಪರಿಣಿತಾ ಆರ್. ಕಾಮತ್ 623 ಅಂಕಗಳನ್ನು ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಪಿಇಎಸ್ ವಿಶ್ವವಿದ್ಯಾಲಯ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.



ನಿತ್ಯಾ ಎಸ್ (619 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

ಎನ್‌ಡಿ. ಸುಷ್ಮಿತಾ (622 ಅಂಕಗಳು) ಸ್ಟೆಲ್ಲಾ ಮೇರೀಸ್ ಪ್ರೌಢಶಾಲೆ

ಯಶಸ್ (617 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ



ಪರಿಣತಾ ಆರ್. ಕಾಮತ್ (623 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಸ್ಕೂಲ್

ಪ್ರಜ್ವಲ್ ಮೌದಗಲ್ಯಾ (602 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಶಾಲೆ

ನಿಖಿಲ್ ಸಿ. ಗೌಡ (617 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

ತೃಪ್ತಿ ದಧಿಚ್ (621 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

ವಸಂತ ಕುಮಾರ್ (611 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

ಡಿ. ದೀಪಾ (609 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಶಾಲೆ

ಶಶಾಂಕ ಬಿ. ಜೈನ್ (622 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಶಾಲೆ

ಡಿ. ಕೌಶಿಕ್ (602 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಶಾಲೆ

ರುತು ಅಮೋಲ್ (625 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

ಪಲ್ಲವಿ ಜೆ (601 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

ಅಕ್ಷಯ್ ಕೆ.ಎಸ್. (615 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಶಾಲೆ

ರಾಘವೇಂದ್ರ ಭಟ್ (606 ಅಂಕಗಳು) ಎಸ್‌ಎಸ್‌ಎಂ ಪಬ್ಲಿಕ್ ಶಾಲೆ

ರವಿಚಂದ್ರ ಬಿ.ಪಿ. (607 ಅಂಕಗಳು) ಕ್ಯಾಮ್ಲಿನ್ ಹೈಸ್ಕೂಲ್, ಹಂಪಿನಗರ

7 ವರ್ಷ ಆಸ್ಪತ್ರೆಯಲ್ಲಿದ್ದ ಮಹಿಳೆ ಸಾವು; ₹ 9.5 ಕೋಟಿ ಬಿಲ್

ಬೆಂಗಳೂರು: ಸುಮಾರು 7 ವರ್ಷಗಳ ಕಾಲ ಆಸ್ಪತ್ರೆಯಲ್ಲಿದ್ದ 35 ವರ್ಷದ ಮಹಿಳೆಯೊಬ್ಬರು ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

ಅಕ್ಸೆಂಚರ್ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದ, ದೆಹಲಿ ಮೂಲದ ಪೂನಮ್ ರಾಣಾ 2015ರ ಅಕ್ಟೋಬರ್‌ನಲ್ಲಿ ಹೊಟ್ಟೆ ನೋವಿನ ಕಾರಣಕ್ಕೆ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಆರಂಭದಲ್ಲಿ ಸಾಮಾನ್ಯ ಪ್ರಕರಣ ಎಂದೇ ಭಾವಿಸಲಾಗಿತ್ತು. ಸಣ್ಣ ಶಸ್ತ್ರಚಿಕಿತ್ಸೆ ಬಳಿಕ ಸಂಕಷ್ಟಗಳು ಎದುರಾದವು. ಮಹಿಳೆ ಮಂಗಳವಾರ ಮೃತಪಟ್ಟ ಸಂದರ್ಭದಲ್ಲೂ ಕೋಮಾದಲ್ಲೇ ಇದ್ದರು ಎಂದು ಪೂನಮ್ ಅವರ ಪತಿ ರಾಜೇಶ್ ನಾಯರ್ ತಿಳಿಸಿದ್ದಾರೆ.

ಚಿಕಿತ್ಸೆಗಾಗಿ ₹9.5 ಕೋಟಿ ಬಿಲ್ ಆಗಿದೆ. ₹2 ಕೋಟಿ ಬಿಲ್ ಪಾವತಿಸಲಾಗಿದೆ ಎಂದು ರಾಜೇಶ್ ತಿಳಿಸಿದರು.

ಮಣಿಪಾಲ್ ಆಸ್ಪತ್ರೆ ಹೇಳಿಕೆ: '2015ರ ಅಕ್ಟೋಬರ್ 2ರಂದು ಪೂನಮ್ ಅವರನ್ನು ಎಂಐಸಿಯುಗೆ (ಮೆಡಿಕಲ್ ಇಂಟೆನ್ಸಿವ್ ಕೇರ್ ಯುನಿಟ್) ದಾಖಲಿಸಲಾಗಿತ್ತು. ಎಲ್ಲ ಪ್ರಯತ್ನಗಳ ನಂತರವೂ 2022ರ ಮೇ 24ರಂದು ಮಧ್ಯರಾತ್ರಿ 12 ಗಂಟೆಗೆ ಮೃತರಾದರು' ಎಂದು ಮಣಿಪಾಲ್ ಆಸ್ಪತ್ರೆಯು ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ಕೇರಳ ಮೂಲದ ರಾಜೇಶ್ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ದಂಪತಿಗೆ ಮಕ್ಕಳಿರಲಿಲ್ಲ. ಈ ಮೊದಲು ಸುಮಾರು 42 ವರ್ಷ ಕಾಲ ಆಸ್ಪತ್ರೆಯಲ್ಲಿಯೇ ಕೋಮಾ ಸ್ಥಿತಿಯಲ್ಲಿದ್ದ ಅರುಣಾ ಶಾನ್‌ಬಾಗ್ ಪ್ರಕರಣದ ಬಳಿಕ ಆಸ್ಪತ್ರೆಯಲ್ಲಿ ರೋಗಿ ಸುದೀರ್ಘ ಅವಧಿ ಕಳೆದ 2ನೇ ಪ್ರಕರಣವಿದು ಎನ್ನಲಾಗಿದೆ.

ಆರು ಮಂದಿಗೆ 'ಕನಕ ವೈದ್ಯ ಪ್ರಶಸ್ತಿ'

ಬೆಂಗಳೂರು: ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, 'ಕನಕ ವೈದ್ಯ ವಿಭೂಷಣ ಪ್ರಶಸ್ತಿ'ಗೆ ಮಹಾರಾಷ್ಟ್ರದ ರಾಜ್ಯಸಭೆ ಸದಸ್ಯ ಡಾ. ವಿಕಾಸ್ ಮಹಾತ್ಮೆ ಆಯ್ಕೆಯಾಗಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಸಂಸ್ಥಾಪಕ ಟ್ರಸ್ಟಿ ಡಾ. ವಿಜಯಲಕ್ಷ್ಮಿ ಪರಮೇಶ್, 'ಕನಕ ವೈದ್ಯ ರತ್ನ ಪ್ರಶಸ್ತಿ'ಗೆ ತುಮಕೂರಿನ ಶ್ರೀದೇವಿ ಸಮೂಹ ಸಂಸ್ಥೆಯ ಸಂಸ್ಥಾಪಕ ಡಾ. ಹುಲಿನಾಯ್ಕ್, 'ಕನಕ ವೈದ್ಯಶ್ರೀ ಪ್ರಶಸ್ತಿ'ಗೆ ನಾಗಪುರದ ಹೃದಯ ತಜ್ಞ ಡಾ. ಸತೀಶ ಖಡ್ಸೆ ಹಾಗೂ ಮಧುಮೇಹ ತಜ್ಞ ಡಾ. ವಿಕ್ರಮ್ ಆರೇಳ್ಕ, 'ಕನಕ ವೈದ್ಯ ಗುರು ಪ್ರಶಸ್ತಿ'ಗೆ ಮೈಸೂರಿನ ರೋಗವಿಜ್ಞಾನದ ಪ್ರಾಧ್ಯಾಪಕ ಡಾ. ರಂಗಸ್ವಾಮಿ ಹಾಗೂ 'ಅಹಿಲ್ಯಾ ವೈದ್ಯ ರತ್ನ ಪ್ರಶಸ್ತಿ'ಗೆ ಅನಂತಪುರದ ಸಹ ಪ್ರಾಧ್ಯಾಪಕಿ ಡಾ.ಸಿ. ಭವಾನಿ ಆಯ್ಕೆಯಾಗಿದ್ದಾರೆ' ಎಂದು ತಿಳಿಸಿದರು.

'ಇದೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಕಾಚರಕನಹಳ್ಳಿಯ ಎಚ್‌ಬಿಆರ್ ಬಡಾವಣೆಯ ಶ್ರೀಸಾಯಿ ಕಲಾ ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗುವುದು. ಇದೇ ವೇಳೆ ಸರ್ಕಾರಿ ಕೋಟಾದಲ್ಲಿ ಎಂಬಿಬಿಎಸ್ ಸೀಟು ಪಡೆದ 160 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು' ಎಂದು ಹೇಳಿದರು.

ನಂಬರ್ ಪ್ಲೇಟ್ ಜತೆಗೆ ಅಳವಡಿಕೆ ಮಾಡಿಕೊಂಡಿದ್ದ ಫಲಕಗಳನ್ನು ಸಾರಿಗೆ ಇಲಾಖೆ ಸಿಬ್ಬಂದಿ ತೆರವುಗೊಳಿಸಿದರು –ಪ್ರಜಾವಾಣಿ ಚಿತ್ರ

ಅನಧಿಕೃತ ಫಲಕ ತೆರವು

ಬೆಂಗಳೂರು: ವಾಹನಗಳ ಮೇಲೆ ಸರ್ಕಾರದ ಲಾಂಛನ ಮತ್ತು ಅನಧಿಕೃತ ಫಲಕ ಬಳಕೆ ವಿರುದ್ಧ ಸಾರಿಗೆ ಇಲಾಖೆ ಗುರುವಾರ ಕಾರ್ಯಾಚರಣೆ ನಡೆಸಿ, 91 ವಾಹನಗಳ ಮೇಲಿದ್ದ ಫಲಕ ತೆರವುಗೊಳಿಸಿತು.

'ನಿಗಮ–ಮಂಡಳಿಗಳ ವಾಹನಗಳ ಮೇಲೆ ಸರ್ಕಾರದ ಲಾಂಛನ ಮತ್ತು ಖಾಸಗಿ ವಾಹನಗಳ ಮೇಲೆ ಅನಧಿಕೃತ ಫಲಕ ಇರಬಾರದು. ತೆರವುಗೊಳಿಸಲು ವಿಫಲವಾದರೆ ನ್ಯಾಯಾಂಗ ನಿಂದನಾ ಕ್ರಮ ಜರುಗಿಸಲಾಗುವುದು' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರು ಇತ್ತೀಚೆಗೆ ಎಚ್ಚರಿಕೆ ನೀಡಿದ್ದರು.

ಗುರುವಾರ ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ಆರಂಭಿಸಿದ ಸಾರಿಗೆ ಇಲಾಖೆ ಬೆಂಗಳೂರು ನಗರ ಜಂಟಿ ಆಯುಕ್ತ ಕೆ.ಟಿ. ಹಾಲಸ್ವಾಮಿ ನೇತೃತ್ವದ ತಂಡ, ವಿಧಾನಸೌಧದ ಆಜುಬಾಜಿನಲ್ಲಿ ವಾಹನಗಳನ್ನು ಅಡ್ಡಗಟ್ಟಿ ಅನಧಿಕೃತ ಫಲಕ ತೆರವುಗೊಳಿಸಿತು. ವಾಹನಗಳ ಮಾಲೀಕರಿಗೆ ದಂಡವನ್ನೂ ಅಧಿಕಾರಿಗಳು ವಿಧಿಸಿದರು.

'ಬೆಂಗಳೂರು ಕೇಂದ್ರ, ಪಶ್ಚಿಮ, ಉತ್ತರ, ದಕ್ಷಿಣ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್.ಪುರ ಸಾರಿಗೆ ಕಚೇರಿಗಳಿಂದಲೂ ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಲಾಯಿತು. ಅನಧಿಕೃತ ನಂಬರ್ ಪ್ಲೇಟ್ ಅಳವಡಿಕೆಯಾಗಿದ್ದ 29 ಮತ್ತು ಇತರೆ ಫಲಕಗಳನ್ನು ಹಾಕಿಕೊಂಡಿದ್ದ 62 ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲಾಯಿತು' ಎಂದು ಕೆ.ಟಿ.ಹಾಲಸ್ವಾಮಿ 'ಪ್ರಜಾವಾಣಿ'ಗೆ ವಿವರಿಸಿದರು.

ಲೇಖಕಿ ಬಿ.ಟಿ.ಲಲಿತಾ ನಾಯಕ್ ಅಭಿಪ್ರಾಯ

'ಜನಪರ ಹೋರಾಟಗಳ ಶಕ್ತಿ ದೊರೆಸ್ವಾಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್.ಎಸ್.ದೊರೆಸ್ವಾಮಿ ಅವರು ರಾಜ್ಯದಾದ್ಯಂತ ಎಲ್ಲಾ ಜನಪರ ಹೋರಾಟಗಳ ಶಕ್ತಿಯಾಗಿದ್ದರು. ಕೋಮುವಾದದ ವಿರುದ್ಧ ಅವರದು ರಾಜಿಯಿಲ್ಲದ ಹೋರಾಟವಾಗಿತ್ತು' ಎಂದು ಲೇಖಕಿ ಬಿ.ಟಿ.ಲಲಿತಾ ನಾಯಕ್ ಅಭಿಪ್ರಾಯಪಟ್ಟರು.

'ಎಚ್.ಎಸ್.ದೊರೆಸ್ವಾಮಿ ಅನುಯಾಯಿಗಳ ಬಳಗ'ದ ವತಿಯಿಂದ ಗುರುವಾರ ಏರ್ಪಡಿಸಿದ್ದ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎಚ್.ಎಸ್.ದೊರೆಸ್ವಾಮಿ ಅವರ ಮೊದಲ ವರ್ಷದ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದೊರೆಸ್ವಾಮಿ ಅವರ ಹೋರಾಟದ ಬದುಕನ್ನು ಅವರ ಅನುಯಾಯಿಗಳು, ಒಡನಾಡಿಗಳು ಹೋರಾಟಗಾರರು ಸ್ಮರಿಸಿದರು.

ಮಾಜಿ ಐಎಎಸ್ ಅಧಿಕಾರಿ ಶಶಿಕಾಂತ್ ಸೆಂಥಿಲ್, 'ಇನ್ನು ಮುಂದೆ ಈ ಹೋರಾಟಗಳನ್ನು ಮುಂದುವರೆಸುವ ಹೊಣೆ ಯುವ ಪೀಳಿಗೆಯದು ಎಂದಿದ್ದರು' ಎಂದು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಹಳ್ಳಿ ಮಕ್ಕಳ ಸಂಘದ ಯಡಿಯೂರು ಮಂಜುನಾಥ್, ಸಾಮಾಜಿಕ ಕಾರ್ಯಕರ್ತರಾದ ಬಾಬು ಕೋವಿ, ಪ್ರಭಾ ಬೆಳವಂಗಲ, ವಿಜಯಮ್ಮ, ವೆಂಕಟೇಶ್ ಎಚ್.ಎಂ ಹಾಗೂ ಇತರರು ಎಚ್.ಎಸ್. ದೊರೆಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಪ್ರಜಾವಾಣಿ ಚಿತ್ರ

ಹೋರಾಟಗಾರ ನೂರ್ ಶ್ರೀಧರ್, 'ಬದುಕಿನ ಕೊನೆಯ ದಿನಗಳಲ್ಲಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಇದ್ದಾಗಲೂ ದೊರೆಸ್ವಾಮಿ ಅವರು 'ಹೋರಾಟಕ್ಕೆ ಸೋಲೆಂಬುದಿಲ್ಲ' ಎಂದು ಆತ್ಮವಿಶ್ವಾಸದಿಂದ ಹೇಳಿದ್ದರು. ಅವರು ವಹಿಸಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿಕೊಂಡು ಹೋಗಬೇಕಿದೆ' ಎಂದರು.

ಸಿರಿಮನೆ ನಾಗರಾಜ್, 'ದೇಶದಲ್ಲಿ ಬಡತನವನ್ನು ಸಂಪೂರ್ಣ ನಿವಾರಣೆ ಮಾಡುವ ಹಾಗೂ ಕಟ್ಟಕಡೆಯ ಮನುಷ್ಯನ ಕಣ್ಣೀರನ್ನೂ ಒರೆಸುವ ಗಾಂಧೀಜಿಯವರ ಆಶಯ ಸಾಕಾರವಾಗುವವರೆಗೂ ಸ್ವಾತಂತ್ರ್ಯ ಹೋರಾಟ ಮುಂದುವರಿಯುತ್ತದೆ ಎಂದು ದೊರೆಸ್ವಾಮಿ ಹೇಳುತ್ತಿದ್ದರು. ಈ ಆಶಯವನ್ನು ಎಲ್ಲರೂ ಒಗ್ಗೂಡಿ ಈಡೇರಿಸಬೇಕು' ಎಂದರು.

ಅಧ್ಯಕ್ಷತೆ ವಹಿಸಿದ್ದ ಲೇಖಕಿ ವಿಜಯಮ್ಮ, 'ದೊರೆಸ್ವಾಮಿಯವರ ಬದುಕು, ಚಿಂತನೆ, ಹೋರಾಟಗಳ ಚಿತ್ರಣವನ್ನು ಮುಂದಿನ ಪೀಳಿಗೆಗೆ ತಲುಪಿಸಲು ಪುಸ್ತಕವನ್ನು ವರ್ಷದೊಳಗೆ ಪ್ರಕಟಿಸಬೇಕು' ಎಂದರು.

ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ, ಲೇಖಕ ಶಿವಸುಂದರ್, ಸಾಮಾಜಿಕ ಕಾರ್ಯಕರ್ತರಾದ ವೆಂಕಟೇಶ್, ಅಜಯ್, ನರಸಿಂಹಮೂರ್ತಿ, ಕರ್ನಾಟಕ ಜನಾಂದೋಲನ ಸಂಘಟನೆಯ ಕೆ. ಮರಿಯಪ್ಪ, ಸಮಾಜವಾದಿ ಮುಖಂಡ ರಾಬಿನ್ ಮ್ಯಾಥ್ಯೂ, ಸೈಯದ್ ಸಿದ್ದಿಕಿ, ಜ್ಞಾನವಿಜ್ಞಾನ ಸಮಿತಿಯ ಪ್ರಭಾ ಬೆಳವಂಗಲ, ನಾಗೇಶ್ವರರಾವ್ ಮತ್ತಿತರರು ಭಾಗವಹಿಸಿದ್ದರು.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕು • ಅಮ್ರಿತ್ ಪೌಲ್ ಹೇಳಿಕೆ ದಾಖಲು

ಎಡಿಜಿಪಿ–ಡಿವೈಎಸ್ಪಿ ಮುಖಾಮುಖಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕು-ಗೊಳಿಸಿರುವ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮ್ರಿತ್ ಪೌಲ್ ಅವರನ್ನು ಗುರುವಾರವೂ ವಿಚಾರಣೆ ನಡೆಸಿದರು.

ಪ್ರಕರಣದ ಪ್ರಮುಖ ರೂವಾರಿ ಎನ್ನಲಾದ ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರೆ ನೌಕರರನ್ನು ಸಿಐಡಿ ಅಧಿಕಾರಿಗಳು ಈಗಾಗಲೇ ಬಂಧಿಸಿದ್ದಾರೆ. ಇವರ ಜೊತೆಗಿನ ಒಡನಾಟದ ಬಗ್ಗೆ ಎಡಿಜಿಪಿ ಅವರಿಂದ ಅಧಿಕಾರಿಗಳು ಮಾಹಿತಿ ಪಡೆದುಕೊಂಡರು.

ವಿಚಾರಣೆಗಾಗಿ ಕಸ್ಟಡಿಗೆ ಪಡೆದಿರುವ ಶಾಂತಕುಮಾರ್ ಹಾಗೂ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಮುಖಾಮುಖಿಯಾಗಿ ಕೂರಿಸಿ ಕೆಲ ಪ್ರಶ್ನೆಗಳಿಗೆ ಅಧಿಕಾರಿಗಳು ಉತ್ತರ

ಅಮ್ರಿತ್ ಪೌಲ್

ಪಡೆದರು. ಇಬ್ಬರ ಹೇಳಿಕೆಯನ್ನೂ ವಿಡಿಯೊ ಚಿತ್ರೀಕರಣ ಮಾಡಿ-ಕೊಂಡಿರುವುದಾಗಿ ಗೊತ್ತಾಗಿದೆ.

'ಅಮ್ರಿತ್ ಪೌಲ್ ಅಧೀನದಲ್ಲಿ ಶಾಂತಕುಮಾರ್ ಹಾಗೂ ಇತರೆ ಆರೋಪಿಗಳು ಕೆಲಸ ಮಾಡುತ್ತಿದ್ದರು. ಅವರೆಲ್ಲರೂ ಈಗಾಗಲೇ ತಪ್ಪೊಪ್ಪಿಗೆ ನೀಡಿದ್ದು, ಪ್ರಕರಣದಲ್ಲಿ ಎಡಿಜಿಪಿ ಪಾತ್ರವೇನು ಎಂಬುದನ್ನು ಪುರಾವೆ ಸಮೇತ ಪತ್ತೆ ಮಾಡಬೇಕಿದೆ. ಹೀಗಾಗಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ತನಿಖೆ ವೇಳೆ ದೊರೆತ ಪುರಾವೆ ಆಧರಿಸಿ ಅಮ್ರಿತ್ ಪೌಲ್ ಅವರಿಗೆ ನೋಟಿಸ್ ನೀಡಲಾಗಿತ್ತು. ಕಾರ್ಲಟನ್ ಕಟ್ಟಡದ ಸಿಐಡಿ ಕಚೇರಿಯಲ್ಲಿ ಬುಧವಾರ ಸಂಜೆ 4 ಗಂಟೆಯಿಂದ ರಾತ್ರಿ 7.30ರವರೆಗೆ ವಿಚಾರಣೆ ನಡೆಸಿ ವಾಪಸ್ ಕಳುಹಿಸಲಾಗಿತ್ತು.'

'ಗುರುವಾರ ಬೆಳಿಗ್ಗೆಯೂ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೂ ಎರಡನೇ ಬಾರಿ ವಿಚಾರಣೆ ನಡೆಸಿ, ವಾಪಸ್ ಕಳುಹಿಸಲಾಗಿದೆ. ಅಗತ್ಯವಿದ್ದರೆ, ಮತ್ತೆ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಪ್ರಕರಣ ದಾಖಲಾಗುತ್ತಿದ್ದಂತೆ ಅಮ್ರಿತ್ ಪೌಲ್ ಅವರನ್ನು ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಎಡಿಜಿಪಿ ಆಗಿ ಸರ್ಕಾರ ವರ್ಗಾವಣೆ ಮಾಡಿತ್ತು.

ಶಾಂತಕುಮಾರ್ ನ್ಯಾಯಾಂಗ ಬಂಧನಕ್ಕೆ: ಸಿಐಡಿ ಕಸ್ಟಡಿ ಅವಧಿ ಮುಗಿದಿದ್ದರಿಂದ ಶಾಂತಕುಮಾರ್ ಅವರನ್ನು ನ್ಯಾಯಾಲಯಕ್ಕೆ ಗುರುವಾರ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶ, ಶಾಂತಕುಮಾರ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಅಭ್ಯರ್ಥಿಗಳಿಗೇ ಸಿಮ್ ಕಾರ್ಡ್ ಖರೀದಿ ಹೊಣೆ!

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸದ್ಯ ಸಿಐಡಿ ವಶದಲ್ಲಿರುವ ಪ್ರಮುಖ ಆರೋಪಿ ಆರ್‌.ಡಿ. ಪಾಟೀಲ, ಪರೀಕ್ಷೆ ವೇಳೆ ಬ್ಲೂಟೂತ್ ಸಾಧನ ಹಾಗೂ ಸಿಮ್‌ಕಾರ್ಡ್‌ಗಳ ಖರೀದಿ ಹೊಣೆ ಅಭ್ಯರ್ಥಿಗೆ ವಹಿಸುತ್ತಿದ್ದ. ಪರೀಕ್ಷೆ ಮುಗಿದ ಬಳಿಕ ಎರಡನ್ನೂ ಬಿಸಾಕುವಂತೆ ಹೇಳುತ್ತಿದ್ದ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ನಗರದ ಎಂ.ಎಸ್. ಇರಾನಿ ಕಾಲೇಜಿನ ಪಿಎಸ್‌ಐ ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಯಾಗಿದ್ದ ಪ್ರಭು ಎಂಬಾತ ನೀಡಿದ ಮಾಹಿತಿ ಮೇರೆಗೆ ಆರ್‌.ಡಿ. ಪಾಟೀಲ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಸಿಐಡಿ ಅಧಿಕಾರಿಗಳು, ಎರಡನೇ ಬಾರಿಗೆ ವಶಕ್ಕೆ ಪಡೆದು ವಿಚಾರಣೆ ನಡೆಸುವ ವೇಳೆ ಈ ಮಾಹಿತಿ ಗೊತ್ತಾಗಿದೆ.

ಪರೀಕ್ಷೆಯ ವೇಳೆ ಬಳಸಲಾದ ಎರಡು ಸಿಮ್‌ಕಾರ್ಡ್‌ಗಳನ್ನು ಆರೋಪಿ ಪ್ರಭು ಹಾಗೂ ಆತನ ತಂದೆ ಶರಣಪ್ಪ ಕಲಬುರಗಿಯಲ್ಲೇ ಖರೀದಿಸಿದ್ದರು. ಪರೀಕ್ಷೆ ಮುಗಿದ ಬಳಿಕ ಯಾವುದೇ ಕಾರಣಕ್ಕೂ ಅವುಗಳನ್ನು ಬಳಸದಂತೆ ಆರ್‌.ಡಿ. ಪಾಟೀಲ ತಾಕೀತು ಮಾಡಿದ್ದ ಎಂದು ವಿಚಾರಣೆ ವೇಳೆ ತಂದೆ– ಮಗ ಹೇಳಿಕೆ ನೀಡಿದ್ದಾರೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ತನಿಖೆ ನಡೆಸುವುದಕ್ಕಾಗಿ ಆರ್‌.ಡಿ.ಪಾಟೀಲಗೆ ಏಳು ದಿನಗಳವರೆಗೆ ತಮ್ಮ ವಶಕ್ಕೆ ಪಡೆದಿದ್ದಾರೆ.

ತನಿಖೆಗೆ ಅಸಹಕಾರ: ಯಾವುದೇ ಪ್ರಶ್ನೆ ಕೇಳಿದರೂ ಆರೋಪಿ ಆರ್‌.ಡಿ. ಪಾಟೀಲ ಹಾರಿಕೆ ಉತ್ತರ ನೀಡು-ತ್ತಿದ್ದು, ಇದು ಸಿಐಡಿ ಅಧಿಕಾರಿಗಳಿಗೆ ತಲೆನೋವಾಗಿದೆ. ಆದಾಗ್ಯೂ, ಬೇರೆ ಬೇರೆ ಆರೋಪಿಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಇಟ್ಟುಕೊಂಡೇ ಪಾಟೀಲಗೆ ಬೆವರಿಳಿಸುತ್ತಿ-ದ್ದಾರೆ ಎಂದು ಮೂಲಗಳಿಂದ ಗೊತ್ತಾಗಿದೆ.

ಅಭ್ಯರ್ಥಿಯಾಗಿದ್ದ ಪ್ರಭುಗೆ ಬ್ಲೂಟೂತ್ ಸಾಧನ ಬಳಸಿ ಉತ್ತರ ಹೇಳುವ ಮೂಲಕ ಪಾಸ್ ಮಾಡಿಸಲು ಆರ್‌.ಡಿ. ಪಾಟೀಲ ₹ 50 ಲಕ್ಷ ಬೇಡಿಕೆ ಇಟ್ಟಿದ್ದ. ಅಷ್ಟೂ ಹಣವನ್ನು ತಮ್ಮ ನಿಕಟವರ್ತಿ, ಲೆಕ್ಕ ಪರಿಶೋಧಕ ಚಂದ್ರಕಾಂತ ಕುಲಕರ್ಣಿ ಮೂಲಕ ಪಡೆದುಕೊಂಡಿದ್ದ ಬಗ್ಗೆ ಒಪ್ಪಿಕೊಂಡಿ-ದ್ದಾನೆ ಎಂದು ಮೂಲಗಳು ತಿಳಿಸಿವೆ.

ಸಚಿವ ಅಶ್ವತ್ಥನಾರಾಯಣ ವಿರುದ್ಧ 3 ಖಾಸಗಿ ದೂರು

ಮಂಡ್ಯ: ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿರುವ ಬಗ್ಗೆ ಜಿಲ್ಲಾ ಮಟ್ಟದ ಮಾದರಿ ನೀತಿ ಸಂಹಿತೆ ತಂಡದ ಮುಖ್ಯಸ್ಥರು ವರದಿ ನೀಡಿದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ವಿರುದ್ಧ ನ್ಯಾಯಾಲಯದಲ್ಲಿ ಮೂರು ಖಾಸಗಿ ದೂರು ದಾಖಲಿಸಿದ್ದಾರೆ.

ಮೇ 16ರಂದು ಡಾ.ಅಶ್ವತ್ಥನಾರಾ-ಯಣ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್), ಮಹಿಳಾ ಕಾಲೇಜು, ಮಾಂಡವ್ಯ ಸಮೂಹ ಸಂಸ್ಥೆ, ಮಂಡ್ಯ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿದ್ದರು. 'ಸಚಿವರು ನೀತಿ ಸಂಹಿತೆ ಉಲ್ಲಂಘನೆ ಮಾಡಿದ್ದಾರೆ' ಎಂದು ಆರೋಪಿಸಿ ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ, ವಕೀಲ ಸುಂಡಹಳ್ಳಿ ಮಂಜುನಾಥ್ ಸಹಾಯಕ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದ್ದರು.

ಈ ಬಗ್ಗೆ ಪರಿಶೀಲನೆ ನಡೆಸಿದ ಜಿಲ್ಲಾ ಮಟ್ಟದ ಮಾದರಿ ನೀತಿ ಸಂಹಿತೆ ತಂಡದ ಮುಖ್ಯಸ್ಥರೂ ಆದ ಜಿಲ್ಲಾ ಪಂಚಾಯಿತಿ ಸಿಇಒ ದಿವ್ಯಾಪ್ರಭು, ಸಚಿವರು ನೀತಿ ಸಂಹಿತೆ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಕ್ರಮ ಕೈಗೊಳ್ಳುವಂತೆ ವರದಿ ನೀಡಿದ್ದರು. ಇದರ ಆಧಾರದ ಮೇಲೆ ಚುನಾವಣಾ ಸಂಚಾರಿ ದಳದ ಮುಖ್ಯಸ್ಥರಾದ ಶಾಹೇದಾ ಅಹಮದಿ ಅವರು 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ.

ಮೂರೂ ನ್ಯಾಯಾಲಯಗಳು ದೂರು ದಾಖಲು ಮಾಡಿಕೊಂಡಿವೆ. 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಚಿವರ ವಿರುದ್ಧ ತನಿಖೆ ನಡೆಸುವಂತೆ ಪೊಲೀಸರಿಗೆ ಆದೇಶಿಸಿದೆ. ಸಚಿವರ ವಿರುದ್ಧ ಎಫ್‌ಐಆರ್ ದಾಖಲಾಗುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನೀತಿಸಂಹಿತೆ ಉಲ್ಲಂಘನೆ ಸಂಬಂಧ ಮೈಸೂರಿನಲ್ಲೂ ಅಶ್ವತ್ಥನಾರಾ-ಯಣ ವಿರುದ್ಧ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಚುನಾವಣಾಧಿಕಾರಿಗೆ ದೂರು ನೀಡಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಭಾಗವಹಿಸಲು ಸರ್ಕಾರಿ ಕಾರು ದುರ್ಬಳಕೆ ಮಾಡಿಕೊಂಡು ನೀತಿ ಸಂಹಿತೆ ಉಲ್ಲಂ-ಘಿಸಿದ್ದಾರೆ ಎಂದು ಗುರುವಾರ ಬಿಜೆಪಿ ಮುಖಂಡರು ಚುನಾವಣಾಧಿಕಾರಿಗೆ ದೂರು ಸಲ್ಲಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಗುರುವಾರ ನಡೆದ 'ಸುಪ್ರಿಯಾ ಇಂಟರ್‌ನ್ಯಾಷನಲ್ ಹೋಟೆಲ್' ಉದ್ಘಾಟನಾ ಸಮಾರಂಭದಲ್ಲಿ ಚಿತ್ರನಟ ಶಿವರಾಜ್‌ಕುಮಾರ್ ಮತ್ತು ಶಾಸಕ ಆರ್‌.ವಿ.ದೇಶಪಾಂಡೆ ಜ್ಯೋತಿ ಬೆಳಗಿದರು. ಮಾಜಿ ಶಾಸಕ ಅಶೋಕ ಪಟ್ಟಣ, ಹೋಟೆಲ್ ಸಹ ಮಾಲೀಕ ಅಶ್ವಿನ್ ನಾಯ್ಕ, ಮಾಲೀಕ ಭೀಮಣ್ಣ ನಾಯ್ಕ, ಶಿರಸಿ ನಗರಸಭೆ ಅಧ್ಯಕ್ಷ ಗಣಪತಿ ನಾಯ್ಕ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ಮಾಜಿ ಶಾಸಕ ಮಧು ಬಂಗಾರಪ್ಪ ಇದ್ದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯುಟ್ಯೂಬ್, ಟ್ವಿಟರ್‌ನಲ್ಲಿ ವರದಿಗಳ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ

ಬಹುಭಾಷಾ ಚಿತ್ರ ನಟಿ ಪ್ರಿಯಾಂಕಾ ಉಪೇಂದ್ರ
ಆಕ್ಷನ್ ಕ್ವೀನ್
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ 12

ಹೆಡಗೇವಾರ್ ಸ್ವಾತಂತ್ರ್ಯ ಹೋರಾಟ ಮಾಡಿದ್ದಕ್ಕೆ ದಾಖಲೆ ಇಲ್ಲ: ಬಿಕೆಸಿ

ಬೆಂಗಳೂರು: 'ಕೇಶವ ಬಲಿರಾಮ್ ಹೆಡಗೇವಾರ್ ಸೇರಿದಂತೆ ಆರೆಸ್ಸೆಸ್‌ನ ಯಾರೊಬ್ಬರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಬಗ್ಗೆ ಆರೆಸ್ಸೆಸ್‌ನ ದಾಖಲೆಗಳಲ್ಲಿಯೂ ಇಲ್ಲ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದ ನಂತರ ದೆಹಲಿಯ ಕೆಂಪು ಕೋಟೆಯಲ್ಲಿ ನೆಹರೂ ಅವರು ರಾಷ್ಟ್ರಧ್ವಜ ಹಾರಿಸಬೇಕಿತ್ತು. ಆ ಹೊತ್ತಿನಲ್ಲಿ, 'ರಾಷ್ಟ್ರಧ್ವಜದಲ್ಲಿ 3 ಬಣ್ಣಗಳಿವೆ. ಮೂರು ಎಂಬುದು ಕೆಡುಕು, ಅದು ಮಾನಸಿಕವಾಗಿ ಕೆಟ್ಟ ಪರಿಣಾಮ ಬೀರುತ್ತದೆ. ಇದನ್ನು ಯಾರೂ ಹಾರಿಸಬಾರದು' ಎಂದು ಹೆಡಗೇವಾರ್ ಹೇಳಿದ್ದರು. ಇಂತಹ ಹಿನ್ನೆಲೆ ಹೆಡಗೇವಾರ್ ಅವರದ್ದಾಗಿದೆ. ಹೀಗಿದ್ದರೂ ಹೆಡಗೇವಾರ್ ಭಾಷಣವನ್ನು ಪಠ್ಯದಲ್ಲಿ ಸೇರಿಸಿದರೆ ತಪ್ಪೇನು ಎಂದು ಶಿಕ್ಷಣ ಸಚಿವರು ಪ್ರಶ್ನಿಸಿದ್ದಾರೆ. ಆರೆಸ್ಸೆಸ್ ಕಾರ್ಯಸೂಚಿಯನ್ನು ಜಾರಿಗೆ ತರುವುದಷ್ಟೇ ಬಿಜೆಪಿಯವರ ಉದ್ದೇಶ ಎಂದು ಅವರು ಟೀಕಿಸಿದರು.

ಹಿಂದೂಧರ್ಮದ ಬಗ್ಗೆ ಪಠ್ಯಪುಸ್ತಕದಲ್ಲಿ ಸೇರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಎನ್‌ಸಿಇಆರ್‌ಟಿಗೆ ಅನೌಪಚಾರಿಕ ಆದೇಶ ನೀಡಿದ್ದರು. ಪ್ರಕಾಶ್ ಜಾವಡೇಕರ್ ಅವರು ಮಾನವ ಸಂಪನ್ಮೂಲ ಸಚಿವರಾಗಿದ್ದಾಗ ಸಿಬಿಎಸ್‌ಸಿ ಶಾಲೆಗಳ 180 ಪಠ್ಯಪುಸ್ತಕಗಳಲ್ಲಿನ 1,334 ಪಾಠಗಳನ್ನು ಬದಲಾವಣೆ ಮಾಡಿಸಿದ್ದರು ಎಂದು ದೂರಿದರು.

ಸಮಿತಿ ವಿಸರ್ಜಿಸಿ: 'ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಏಕಮುಖ ಹಾಗೂ ಆರೆಸ್ಸೆಸ್ ಚಿಂತನೆ ಇರುವವರ ಸಮಿತಿಯಾಗಿದೆ. ಸಮಿತಿ ವಿಸರ್ಜಿಸಿ, ಪಠ್ಯ ಪರಿಷ್ಕರಣೆಯ ವಿಷಯವನ್ನು ತಜ್ಞರಿಗೆ ವಹಿಸಬೇಕು' ಎಂದು ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ಆಗ್ರಹಿಸಿದರು.

ಪಠ್ಯಪುಸ್ತಕ ಪ್ರತಿ ಸುಟ್ಟು ಪ್ರತಿಭಟನೆ

ಮಂಡ್ಯ: 'ಪಠ್ಯಪುಸ್ತಕಗಳನ್ನು ಮನಸ್ಸಿಗೆ ಮಾಡಲು ಹೊರಟಿರುವ ಕ್ರಮವನ್ನು ಕೈಬಿಡಬೇಕು. ರಾಷ್ಟ್ರಕವಿ ಕುವೆಂಪು ಅವರಿಗೆ ಅವಮಾನ ಮಾಡಿರುವ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಜಿಲ್ಲಾ ಸಮಾನ ಮನಸ್ಕರ ವೇದಿಕೆ ಸದಸ್ಯರು ಗುರುವಾರ ನಗರದ ಜೆ.ಸಿ.ವೃತ್ತದಲ್ಲಿ ಪರಿಷ್ಕೃತ ಪಠ್ಯಪುಸ್ತಕಗಳ ಪ್ರತಿ ಸುಟ್ಟು ಪ್ರತಿಭಟಿಸಿದರು.

'ಪಠ್ಯದಲ್ಲಿ ಜಿನ್ನಾ ವಿಚಾರ ಸೇರಿಸಬೇಕಿತ್ತಾ?'

ಬಾಗಲಕೋಟೆ: ಶಾಲಾ ಪಠ್ಯದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೇವಾರ್ ಬದಲಿಗೆ ಮೊಹಮ್ಮದ್ ಅಲಿ ಜಿನ್ನಾ, ಈಶ್ವರ ಲಿಂಗ ಒಡೆದ ಔರಂಗಜೇಬನ ಕುರಿತ ವಿಷಯಗಳ ಸೇರಿಸಬೇಕಿತ್ತಾ ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಹಿಂದೂ ಸಮಾಜ ಒಂದು ಮಾಡುವ ಪ್ರಯತ್ನವನ್ನು ಹೆಡಗೇವಾರ್ ಮಾಡಿದ್ದರು. ಹೀಗಾಗಿ ದೇಶದ ಸಂಸ್ಕೃತಿ ವಿಚಾರದಲ್ಲಿ ಅವರು ಮಾಡಿರುವ ಭಾಷಣದ ಒಂದಂಶವನ್ನು ಪಠ್ಯದಲ್ಲಿ ಸೇರಿಸಲಾಗಿದೆ ಎಂದರು.

'ಮೈಸೂರು ಹುಲಿ ಟಿಪ್ಪು ಸುಲ್ತಾನ್', 'ಅಲೆಗ್ಸಾಂಡರ್ ದಿ ಗ್ರೇಟ್' ಇವುಗಳನ್ನು ಮಕ್ಕಳು ಓದುತ್ತಿದ್ದರು. ಯಾರು ನಮ್ಮ ದೇಶವನ್ನು ಹಾಳು ಮಾಡಿದ್ರೋ, ನಮ್ಮ ಸಂಸ್ಕೃತಿ ಒಡೆದು ಪುಡಿಪುಡಿ ಮಾಡಿದ್ರೋ ಅಂಥವರ ವೈಭವೀಕರಣ ಪಠ್ಯದಲ್ಲಿತ್ತು. ಹೆಡಗೇವಾರ್ ಅವರು ಹಿಂದುತ್ವದ ವಿಚಾರ ಹರಡದಿದ್ದಿದ್ರೇ ಈ ದೇಶ ತುಂಡು ತುಂಡಾಗಿ ಹೋಗ್ತಿತ್ತು' ಎಂದರು.

'ಹಿಂದುತ್ವ ಇಷ್ಟು ಜಾಗೃತವಾಗಿರುವುದರಿಂದಲೇ ರಾಷ್ಟ್ರದ್ರೋಹಿಗಳು, ಭಯೋತ್ಪಾದಕರು ಆಟ ಆಡ್ತಿದ್ದಾರೆ. ವಿಚಾರವಾದಿಗಳು ಅಂತಾ ಹೇಳಿಕೊಂಡು ತಿರುಗಾಡೋರಿಗೆ ಟಿಪ್ಪು ಸುಲ್ತಾನ್ ಬಗ್ಗೆ ಹೇಳಿದ್ರೆ ಅದೇ ಆನಂದ. ದೇಶ ಹಾಳು ಮಾಡಿದ ವರದ್ದು ಪಠ್ಯ-ದಲ್ಲಿರಬೇಕೆನ್ನುವ ಆಸೆ ಅವರದ್ದಾಗಿದೆ' ಎಂದು ಟೀಕಿಸಿದರು.

'ಪಠ್ಯಪುಸ್ತಕ ರಚನಾ ಸಮಿತಿ ರಾಷ್ಟ್ರಭಕ್ತಿಯನ್ನು ಮಕ್ಕಳಿಗೆ ಹೇಳಿಕೊಡಲು ತೀರ್ಮಾನಿಸಿದೆ. ಹಾಗಾಗಿ ರಾಷ್ಟ್ರೀಯ ಮಹಾನ್ ಪುರುಷರ ವಿಚಾರ ಸೇರ್ಪಡೆ ಮಾಡಲಾಗಿದೆ. ಇದರಲ್ಲಿ ತಪ್ಪೇನು' ಎಂದು ಈಶ್ವರಪ್ಪ ಪ್ರಶ್ನಿಸಿದರು.



ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರನ್ನು ಗುರುವಾರ ಹೂಗುಚ್ಛ ನೀಡಿ ಸ್ವಾಗತಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಇದ್ದರು.

ದಸರಾ ವೇಳೆ ಹೊಸ ರಾಜಕೀಯ ವೇದಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ದಸರಾ ಹಬ್ಬದ ವೇಳೆ ರಾಷ್ಟ್ರಮಟ್ಟದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಹೊಸ ರಾಜಕೀಯ ವೇದಿಕೆ ಸ್ಥಾಪನೆ ಮಾಡುವ ಬಗ್ಗೆ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಸೂಚನೆ ನೀಡಿದ್ದಾರೆ.

ಈ ಸಂಬಂಧ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರನ್ನು ಪದ್ಮನಾಭ ನಗರದ ನಿವಾಸದಲ್ಲಿ ಗುರುವಾರ ಭೇಟಿ ಮಾಡಿ ಸುಮಾರು ಮೂರು ಗಂಟೆಗಳ ಕಾಲ ಮಾತುಕತೆ ನಡೆಸಿದರು. ಎಚ್‌.ಡಿ.ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಹಾಜರಿದ್ದರು. ರಾಷ್ಟ್ರಪತಿ ಚುನಾವಣೆ, 2024 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಬಗ್ಗೆ ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೆ.ಚಂದ್ರಶೇಖರ ರಾವ್, 'ರಾಷ್ಟ್ರಮಟ್ಟದಲ್ಲಿ ದೊಡ್ಡ ಮಟ್ಟದ ಬದಲಾವಣೆ ಆಗುವುದು ನಿಶ್ಚಿತ. ಇದನ್ನು ತಡೆಯಲು ಯಾವುದೇ ವ್ಯಕ್ತಿಯಿಂದಲೂ ಸಾಧ್ಯವಿಲ್ಲ. ಇನ್ನು ಎರಡು– ಮೂರು ತಿಂಗಳಲ್ಲಿ ಈ ಸಂಬಂಧ ಮಹತ್ವದ ಸುದ್ದಿ ನಿಮಗೆ ಸಿಗುತ್ತದೆ' ಎಂದು ಹೇಳಿದರು.

'ನಾವು ಕಾಂಗ್ರೆಸ್ ಅಥವಾ ಬಿಜೆಪಿ ಜತೆ ಸೇರಿ ಸರ್ಕಾರ ಮಾಡುತ್ತೇವೆಯೋ ಇಲ್ಲವೋ ಎಂಬ ಪ್ರಶ್ನೆ ಬೇರೆ. ನಾವು(ಪರ್ಯಾಯ ಶಕ್ತಿ) ಒಗ್ಗೂಡಿ ದೇಶದ ಭವಿಷ್ಯವನ್ನು ಇನ್ನಷ್ಟು ಉಜ್ವಲ-ಗೊಳಿಸುವುದು ನಿಶ್ಚಿತ' ಎಂದು ಅವರು ಹೇಳಿದರು.

'2018ರ ಕರ್ನಾಟಕ ವಿಧಾನಸಭಾ ಚುನಾವಣೆಗೆ ಮುನ್ನ ಬೆಂಗಳೂರಿಗೆ ಬಂದಿದ್ದೆ. ಕುಮಾರಸ್ವಾಮಿ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಬರುತ್ತೇನೆ ಎಂದು ಹೇಳಿದ್ದೆ. ನಾನು ಹೇಳಿದ್ದು ನಿಜವಾಯಿತು, ಅವರು ಮುಖ್ಯಮಂತ್ರಿ ಆದರು. ಈಗಲೂ ಹೇಳುತ್ತೇನೆ ರಾಷ್ಟ್ರ ಮಟ್ಟದಲ್ಲಿ ದೊಡ್ಡ ಬದಲಾವಣೆ ಆಗಲಿದೆ' ಎಂದರು.

ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿ, 'ದೇಶದಲ್ಲಿ ಪ್ರಾದೇಶಿಕ ಪಕ್ಷಗಳು ಬಲಿಷ್ಠವಾಗಿವೆ. ಈ ಪಕ್ಷಗಳ ಮುಖಂಡರ ಜತೆ ಕೆಸಿಆರ್ ಚರ್ಚೆ ಮಾಡುತ್ತಿದ್ದಾರೆ. ಹಿಂದಿನ ಪ್ರಯತ್ನಕ್ಕಿಂತ ಹೊಸ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ದೇಶದ ಸಂಪತ್ತು ಕಡು ಬಡವರಿಗೆ ತಲುಪಬೇಕಿದೆ. ಈ ಬಗ್ಗೆ ಅವರು ಚರ್ಚಿಸಿದ್ದಾರೆ'ಎಂದರು.

ತೃತೀಯ ರಂಗಕ್ಕೆ ಗೌಡರ ಮಾರ್ಗದರ್ಶನ?

ಬಿಜೆಪಿ– ಕಾಂಗ್ರೆಸ್‌ಗೆ ಪರ್ಯಾಯವಾಗಿ (ತೃತೀಯ ರಂಗ) ಹುಟ್ಟು ಹಾಕುವ ರಾಜಕೀಯ ವೇದಿಕೆಯಲ್ಲಿ ಎಎಪಿ, ಸಮಾಜವಾದಿ ಪಕ್ಷ ಮುಂತಾದ ಪ್ರಮುಖ ಪಕ್ಷಗಳು ಇರಲಿವೆ. ಎಚ್‌.ಡಿ.ದೇವೇಗೌಡ ಅವರು ಇದಕ್ಕೆ ಮಾರ್ಗದರ್ಶನ ನೀಡಲಿದ್ದಾರೆ ಎಂದು ಜೆಡಿಎಸ್ ಮೂಲಗಳು ಹೇಳಿವೆ.

'ಪರ್ಯಾಯ ವೇದಿಕೆಯ ಬಗ್ಗೆ ಇವತ್ತು ಪ್ರಾಥಮಿಕ ಹಂತದ ಮಾತುಕತೆ ನಡೆದಿದ್ದು, ಇನ್ನಷ್ಟೇ ಸ್ಪಷ್ಟ ರೂಪ ಪಡೆದುಕೊಳ್ಳಬೇಕಾಗಿದೆ. ಇನ್ನೊಮ್ಮೆ ದೇವೇಗೌಡರನ್ನು ಭೇಟಿ ಮಾಡುತ್ತೇನೆ' ಎಂದು ಕೆಸಿಆರ್ ಹೇಳಿದರು.

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ವಿಭಾಗ, ಚಿತ್ರದುರ್ಗ.
Ph: 08194230402, e-mail: dcf.cta@gmail.com
ಸಂಖ್ಯೆ: ಎ3/ಬಿಜಿಟಿ/ಟೆಂಡರ್/ಸಿಆರ್–01/2022–23 ದಿನಾಂಕ: 24.05.2022
ಮರು ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಚಿತ್ರದುರ್ಗ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ 2022–23ನೇ ಸಾಲಿಗೆ ಲೆಕ್ಕಶೀರ್ಷಿಕೆ "4406-Capital Outlay on Forestry & Wildlife 01 Forestry 101-0-04 Distribution of saplings Afforestation on Non-Forests Areas 139 MW" ಯಡಿ ರಸ್ತೆಬದಿ ನೆಡುತೋಪು ಯೋಜನೆ (ಆರ್‌ಎಸ್‌ಪಿ), ನಗರ ಪ್ರದೇಶದ ಹಸಿರೀಕರಣ (ಜಿಯುಎ), ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವುದು (ಆರ್‌ಎಸ್‌ಡಿಪಿ) ಯೋಜನೆಗಳಡಿ ನೆಡುತೋಪು ನಿರ್ಮಾಣ, ಸಸಿಗಳನ್ನು ಬೆಳೆಸುವ ಕಾಮಗಾರಿಗೆ ಸಂಬಂಧಿಸಿದಂತೆ, 2022–23ನೇ ಸಾಲಿಗೆ ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಣಿ ಆಗಿರುವ/ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಣಿಯಾಗಿರುವ, ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.06.2022ರಂದು 16:00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್ ವಿವರಗಳನ್ನು http://www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ ವಿಭಾಗ, ಚಿತ್ರದುರ್ಗ.
RO No. 177: DIPR/CTA/MCA/2022-23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.
ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಕಿ.ಇಂ–1/ಟೆಂಡರ್/2022–23/231 ದಿನಾಂಕ: 26–05–2022
ದ್ವಿತೀಯ ಕರೆಯ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2021–22 ನೇ ಸಾಲಿನ ಜಲ ಜೀವನ್ ಮಿಶನ್ ಯೋಜನೆಯಲ್ಲಿ ಮಂಜೂರಾದ ISRA ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು. ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: 26.05.2022 ರಿಂದ Download ಮಾಡಿಕೊಳ್ಳಬಹುದಾಗಿದೆ.
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.
1) ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ. 2) ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ : **26/05/2022 ಸಮಯ 10:00 ಗಂಟೆಯಿಂದ 13/06/2022 ಸಮಯ 10:00 ಗಂಟೆವರೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ : **26/05/2022 ಸಮಯ 16:00 ಗಂಟೆಯಿಂದ 13/06/2022 ಸಮಯ 16:00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **14/06/2022 ರಂದು 17:00 ಗಂಟೆಗೆ** ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ. 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **20/06/2022** ರಂದು ಅಥವಾ ತಾಂತ್ರಿಕ ಬಿಡ್ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ.
ವಾ.ಸಾ.ಇ./ಕೊಪ್ಪಳ/117/2022–23/ದೇಶಪಾಂಡೆ ಪಬ್ಲಿಸಿಟಿ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ
ದೂರವಾಣಿ:080–29907088 ಇಮೇಲ್:dcfrural@gmail.com
ಸಂಖ್ಯೆ:ಎ2/ಉಅಸಂ(ಬೆಂಗ್ರಾ)/ಬಿಯುಡಿ/ಪಾಲಿಥಿನ್ ಟೆಂಡರ್/ಸಿಆರ್–20/22–23 ದಿನಾಂಕ:21.05.2022
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ಅರಣ್ಯ ಇಲಾಖೆಯ ಬೆಂಗಳೂರು ವೃತ್ತ ವ್ಯಾಪ್ತಿಯ ವಿಭಾಗಗಳು ಘಟಕಗಳಿಗೆ 2022–23ನೇ ಸಾಲಿನಲ್ಲಿ ಅಂದರೆ 1ನೇ ಜೂನ್–2022 ರಿಂದ 31ನೇ ಮಾರ್ಚ್–2023 ರ ಅವಧಿಗೆ 4x6, 5x8, 6x9 ಮತ್ತು 8x12 ಅಳತೆಯ ಪಾಲಿಥಿನ್ ಚೀಲ/ಎಲ್‌ಡಿಪಿಇ ಪಾಲಿಥಿನ್ ಶೀಟ್ಸ್ ಹಾಗೂ 8x12 10x16 ಮತ್ತು 14x20 ಅಳತೆಯ ಹೆಚ್‌ಡಿಪಿಇ ನೇಯ್ದು ವೋವೆನ್ ಸ್ಯಾಕ್ಸ್ ಚೀಲಗಳನ್ನು ಸರಬರಾಜು ಮಾಡಲು ಇಚ್ಛೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ, ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಅಂಗೀಕೃತ ಉತ್ಪಾದಕ/ಉದ್ದಿಮೆದಾರರಿಂದ ಇ–ಟೆಂಡರ್ ಮೂಲಕ ದರ ನಿಗಧಿಪಡಿಸಲು ಕರ್ನಾಟಕ ಸರ್ಕಾರದ ಇ–ಪೋರ್ಟಲ್ (http://eproc.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಅ) ಪಾಲಿಥಿನ್ ಚೀಲ/ಎಲ್‌ಡಿಪಿಇ ಪಾಲಿಥಿನ್ ಶೀಟ್ಸ್ ಮತ್ತು ಹೆಚ್‌ಡಿಪಿಇ ನೇಯ್ದು ವೋವೆನ್ ಸ್ಯಾಕ್ಸ್ ಚೀಲಗಳ ಸ್ಯಾಂಪಲ್ಸ್ ಅನ್ನು **ದಿನಾಂಕ 18.06.2022**ರ ಒಳಗಾಗಿ ಸಲ್ಲಿಸುವುದು.
ಆ) ಟೆಂಡರ್ ನಮೂನೆಗಳನ್ನು **ದಿನಾಂಕ 21.06.2022**ರಂದು 16:00 ಸಮಯದ ತನಕ ಸ್ವೀಕರಿಸಲಾಗುವುದು.
ಇ) **ದಿನಾಂಕ 23.06.2022** ರಂದು 11.00 ಗಂಟೆಗೆ ಭುವನಹಳ್ಳಿ ನರ್ಸರಿಯಲ್ಲಿ ಗುಣಮಟ್ಟ ಪರೀಕ್ಷೆ ನಡೆಸಲಾಗುವುದು.
ಈ) ತಾಂತ್ರಿಕ ಬಿಡ್‌ಗಳನ್ನು **ದಿನಾಂಕ 27.06.2022** ರಂದು 16.00 ಗಂಟೆಯಿಂದ ತೆರೆಯಲಾಗುವುದು.
ಉ) ತಾಂತ್ರಿಕ ಪರಿಶೀಲನೆಯ ಹಂತದಲ್ಲಿ, ಅರ್ಹರಾದ ಸವಾಲುದಾರರ ಆರ್ಥಿಕ ಬಿಡ್‌ಗಳನ್ನು **ದಿನಾಂಕ 30.06.2022** ರಂದು 16.00 ಗಂಟೆಯಿಂದ ತೆರೆಯಲಾಗುವುದು / ಡೌನ್ ಲೋಡ್ ಮಾಡಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ರವರ ಕಛೇರಿಯಿಂದ ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ 080–29907088** ಮೂಲಕ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ
DIPR/CP/KAVITA/619/2022-23

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(9ಇ):2022–23: ಎಇ–2 ದಿನಾಂಕ: 23.05.2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
1. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ ಇಂಡೆಂಟ್ ನಂ.150756 ಪ್ಯಾಕೇಜ್ (ಅಂದಾಜು ಮೊತ್ತ ರೂ. 430.00 ಲಕ್ಷ) 2. ಇಂಡೆಂಟ್ ನಂ. 150279 (ಅಂದಾಜು ಮೊತ್ತ ರೂ.20.00 ಲಕ್ಷ) 3. ಇಂಡೆಂಟ್ ನಂ. 150789 (ಅಂದಾಜು ಮೊತ್ತ ರೂ. 50.00 ಲಕ್ಷ) **ಲೆಕ್ಕಶೀರ್ಷಿಕೆ :–"5054 ಎಸ್.ಸಿ.ಪಿ ಕಾಮಗಾರಿಗಳು**
2. ಇಂಡೆಂಟ್ ನಂ. 151112 ಪ್ಯಾಕೇಜ್ (ಅಂದಾಜು ಮೊತ್ತ ರೂ. 280.00 ಲಕ್ಷ), ಇಂಡೆಂಟ್ ನಂ.151093 ಪ್ಯಾಕೇಜ್ (ಅಂದಾಜು ಮೊತ್ತ ರೂ. 145.00 ಲಕ್ಷ), ಇಂಡೆಂಟ್ ನಂ. 150634 (ಅಂದಾಜು ಮೊತ್ತ ರೂ.25.00 ಲಕ್ಷ), ಇಂಡೆಂಟ್ ನಂ.150638 (ಅಂದಾಜು ಮೊತ್ತ ರೂ. 50.00 ಲಕ್ಷ), **ಲೆಕ್ಕಶೀರ್ಷಿಕೆ :–"5054 ಟಿ.ಎಸ್.ಪಿ ಕಾಮಗಾರಿಗಳು**
ಈ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕಃ **10.06.2022 (ಮಧ್ಯಾಹ್ನ 4.00 ಗಂಟೆಯವರೆಗೆ** ಮಾತ್ರ) ನಿಗದಿಪಡಿಸಲಾಗಿರುತ್ತದೆ. ಕಾಮಗಾರಿವಾರು ಮೀಸಲಾತಿ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿದುಕೊಳ್ಳುವುದು.
ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ / ಕರೆ / ತಿದ್ದುಪಡಿ / ಟೆಂಡರು ಮುಂದೂಡಿಕೆ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೋಡಿಕೊಳ್ಳುವುದು.
ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **https://eproc.karnataka.gov.in**ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
DIPR/MNG/MCA/195/22-23 dt.26.05.2022

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಕಾರ್ಯಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581 301.
ದೂರವಾಣಿ: 08382–228935, ಫ್ಯಾಕ್ಸ್: 229735 e-mail: eerdwsd.uk@gmail.com
ನಂ.:ಕಾನಿಇಂ/ಗ್ರಾಕುನೀ&ನೈವಿ/ಕಾರವಾರ/ಪಿಬಿ–1/ಅಲ್ಪಾವಧಿ ಟೆಂಡರ/JJM/2022–23/368 ದಿನಾಂಕ: 24.05.2022
ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ//ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document KW-3 ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.
ಕಾಮಗಾರಿ ಹೆಸರು : (1) INDENT39760/Call-3 (2) INDENT40343
(1) Downloading of document through e-proc portal: 25.05.2022 to 14.06.2022 up to 16.00 Hrs. (2) Time & date of Pre-Bid Conference : 04.06.2022 Time: 11.30 Hrs. Venue : O/o. Executive Engineer, Rural Drinking Water & Sanitation Division, Po: Habbuwada, Karwar- Uttara Kannada Dist. (3) Last Date & Time for Receipt of Bids: 14.06.2022 Time: 16.00 Hrs. (4) Date & Time of Technical Bid Opening: 15.06.2022 Time: 17:00 Hrs. (5) Date & Time of Financial Bid Opening: Will be informed technically qualified bidders after approval of Technical Bid.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಾರವಾರ (ಉ.ಕ.ಜಿಲ್ಲೆ)
DIPR/ADK/MCA/70/ 22-23 dt.26.05.2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಎಸ್‌ಡಬ್ಲ್ಯೂಡಿ, ಮಹದೇವಪುರ ವಲಯ, ಬಿಬಿಎಂಪಿ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560011.
ಸಂಖ್ಯೆ: ಕಾಅ/ಎಸ್‌ಡಬ್ಲ್ಯೂಡಿ/ಮಪು/ಟೆಂಡರ್/03/2022–23 ದಿನಾಂಕ: 26–05–2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಎಸ್‌ಡಬ್ಲ್ಯೂಡಿ–ಮಹದೇವಪುರ ವಲಯ), ಬಿಬಿಎಂಪಿ, ಬೆಂಗಳೂರು ಇವರು ಬಿಬಿಎಂಪಿಯಲ್ಲಿ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್/ ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ4)

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ. 25, 26 ರಲ್ಲಿನ ಗೆದ್ದಲಹಳ್ಳಿ ಸಾಯಿ ಲೇಔಟ್ ಹೆಚ್–300 ಇಲ್ಲಿನ ರೈಲ್ವೆ ಕೆಳಸೇತುವೆಯಲ್ಲಿ ಮಳೆ ನೀರಿನ ಚರಂಡಿಗೆ ಹೆಚ್ಚುವರಿ ದ್ವಾರ ನಿರ್ಮಿಸುವುದು.	3500.00	35.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **16–06–2022ರಂದು 16.00 ಗಂಟೆಗೆ, ಮುಖ್ಯ ಅಭಿಯಂತರರ ಕಛೇರಿ, ಮಳೆ ನೀರಿನ ಚರಂಡಿ, ಬಿಬಿಎಂಪಿ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಬೆಂಗಳೂರು** ಇಲ್ಲಿ ನಡೆಯುವುದು. 3) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **20–06–2022ರಂದು 16.00 ಗಂಟೆಗೆ.** 4) ಟೆಂಡರ್ ದಸ್ತಾವೇಜು ಸ್ವೀಕರಿಸಲು ಕೊನೆಯ ದಿನಾಂಕ: **28–06–2022ರಂದು 16.00 ಗಂಟೆವರೆಗೆ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30–06–2022ರಂದು 16.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ, ಮಹದೇವಪುರ ವಲಯ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗ ಕಾರ್ಯಾಲಯ, ಕನಕದಾಸ ಬಡಾವಣೆ, ಜಿಲ್ಲಾ ಪಂಚಾಯತ್ ಆವರಣ, ವಿಜಯಪುರ – 586 109
ದೂರವಾಣಿ: 08352–277941, ಇ–ಮೇಲ್: eerdws.bjp@gmail.com
ಕ್ರ.ಸಂ:ಕಾಇಂ/ಗ್ರಾ.ಕು.ನೀ.ನೈ.ವಿ/ವಿಜ/ಇಪ್ರಾ/ಟೆಂಡರ್/2022–23/339 ದಿನಾಂಕ:23.05.2022
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು (Standard tender docuement KW-1/2/3) & KTPP ನಿಯಮಾನುಸಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ವಿಜಯಪುರ ವಿಭಾಗದಡಿ ಬರುವ ಗ್ರಾಮೀಣ ಜನವಸತಿಗಳಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ಕಾರ್ಯಾತ್ಮಕ ನಳ ಸಂಪರ್ಕ (FHTC) ಹಾಗೂ ಕುಡಿಯುವ ನೀರಿನ ಮೂಲಭೂತ ಸೌಕರ್ಯ (In village pipeline network system with Tap and meter installation), ಲೆಕ್ಕ ಶಿರ್ಷಿಕೆಗಳಡಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.
ದ್ವಿ ಲಕೋಟೆ : 2 ಕಾಮಗಾರಿಗಳು
ಇ–ಪ್ರೊಕ್ಯೂರಮೆಂಟ್ ಮುಖಾಂತರ ಆನ್‌ಲೈನ್ ಟೆಂಡರ್ ಸಲ್ಲಿಸವ ಕೊನೆಯ ದಿನಾಂಕ: 15.06.2022 ರಂದು ಸಾಯಂಕಾಲ 5.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.06.2022. ಬೆಳಿಗ್ಗೆ 11.00 ಘಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.06.2022. ಬೆಳಿಗ್ಗೆ 11.00 ಘಂಟೆ
ಟೆಂಡರ್ ಷರತ್ತುಗಳು ಹಾಗೂ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ www.eproc.karnataka.gov.in ನಲ್ಲಿ ನೋಡಬಹುದು ಹಾಗೂ ಈ ವಿಭಾಗ ಕಛೇರಿಯಿಂದ ಪಡೆಯಬಹುದು
ಸಹಿ/– (ಚಂದ್ರಶೇಖರ ವ್ಹಿ ಚವ್ಹಾಣ) ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕು.ನೀರು & ನೈರ್ಮಲ್ಯ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/116/ಎಂಸಿಎ/2022–23

ರಾಜ್ಯ ಗುಪ್ತವಾರ್ತೆ
ನಿರ್ದೇಶಕರ ಕಛೇರಿ, ರಾಜ್ಯ ಗುಪ್ತವಾರ್ತೆ, ನಂ.2, ನೃಪತುಂಗ ರಸ್ತೆ, ಬೆಂಗಳೂರು.
ಇ–ಮೇಲ್: estint@ksp.gov.in ವೆಬ್‌ಸೈಟ್: ksp.karnataka.gov.in
ಸಂಖ್ಯೆ: ಎಸ್‌ಬಿಎ/ಸಿಬ್ಬಂದಿ–6/ಪ್ರಸ್ತಾವನೆ–79/2020 ದಿನಾಂಕ: 26.05.2022
ಅವಧಿ ವಿಸ್ತರಣೆ
ರಾಜ್ಯ ಗುಪ್ತವಾರ್ತೆ ಘಟಕಕ್ಕೆ ಈ ಕೆಳಕಂಡ 06 ತಾಂತ್ರಿಕ ಹುದ್ದೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಸಂಬಂಧ ದಿನಾಂಕ: 11.05.2022 ರಂದು ಈ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ, ದಿನಾಂಕ: 12.05.2022 ರಿಂದ 26.05.2022 ರವರೆಗೆ ಅರ್ಜಿ ಸಲ್ಲಿಸಲು ಸಮಯ ನಿಗದಿಪಡಿಸಲಾಗಿತ್ತು. **ಆಡಳಿತಾತ್ಮಕ ಕಾರಣಗಳಿಂದಾಗಿ ನಿಗದಿತ ಕೊನೆಯ ದಿನಾಂಕವನ್ನು 10 ದಿನಗಳವರೆಗೆ ವಿಸ್ತರಿಸಲಾಗಿದ್ದು, ದಿನಾಂಕ 05.06.2022 ಕ್ಕೆ ನಿಗದಿಪಡಿಸಲಾಗಿದೆ.**

ಕ್ರ. ಸಂ.	ವಿವರ	ಹುದ್ದೆಗಳು
1.	Agriculture Economist (ಅಗ್ರಿಕಲ್ಚರಲ್ ಎಕಾನಾಮಿಸ್ಟ್)	1
2.	Statistician/Data Analyst (ಸ್ಟ್ಯಾಟಿಸ್ಟೀಷಿಯನ್/ಡೇಟಾ ಅನಾಲಿಸ್ಟ್)	1
3.	Ethical Hacker & Social Media Analyst (ಎಥಿಕಲ್ ಹ್ಯಾಕರ್ ಮತ್ತು ಸೋಷಿಯಲ್ ಮೀಡಿಯಾ ಅನಾಲಿಸ್ಟ್)	2
4.	Big Data Analytics (ಬಿಗ್ ಡೇಟಾ ಅನಾಲಿಟಿಕ್ಸ್)	1
5.	System Administrator & Programmer (ಸಿಸ್ಟಂ ಅಡ್ಮಿನಿಸ್ಟ್ರೇಟರ್ ಮತ್ತು ಪ್ರೋಗ್ರಾಮರ್)	1
	ಒಟ್ಟು	6

ಅಭ್ಯರ್ಥಿಗಳು ದಿನಾಂಕ ಬದಲಾವಣೆಯನ್ನು ಗಮನಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್ ನಿಂದ ಪಡೆಯಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ) ನಿರ್ದೇಶಕರು, ರಾಜ್ಯ ಗುಪ್ತವಾರ್ತೆ ಬೆಂಗಳೂರುರವರ ಪರವಾಗಿ.
ವಾ.ಸಾ.ಸಂ.ಇ/ವಾಪ್ರ/672/ಆಕಾರ್/22–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರತಿಷ್ಠೆಯ ಫಲಿತಾಂಶಕ್ಕೆ ಸಾಮೂಹಿಕ ನಕಲು?

• ಆರ್. ಜಿತೇಂದ್ರ

ರಾಮನಗರ: ಉತ್ತಮ ಫಲಿತಾಂಶದ ಪ್ರತಿಷ್ಠೆಗೆ ಬಿದ್ದು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸಾಮೂಹಿಕ ನಕಲಿಗೆ ಅವಕಾಶ ಮಾಡಿಕೊಟ್ಟಿರುವ ಸಂಗತಿ ಪೊಲೀಸ್ ತನಿಖೆ ವೇಳೆ ಬಹಿರಂಗವಾಗಿದೆ.

ಪರೀಕ್ಷಾ ಅಕ್ರಮದ ಆರೋಪದ ಮೇಲೆ ಬಂಧಿತರಾಗಿರುವ ಮಾಗಡಿಯ ಒಬ್ಬ ಪ್ರಾಚಾರ್ಯ, ಕ್ಲರ್ಕ್, ಏಳು ಶಿಕ್ಷಕರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದು, ಫಲಿತಾಂಶ ಉತ್ತಮಪಡಿಸುವ ಸಲುವಾಗಿಯೇ ಈ ಕಾರ್ಯಕ್ಕೆ ಮುಂದಾಗಿದ್ದಾಗಿ ಅವರು ಬಾಯಿಬಿಟ್ಟಿದ್ದಾರೆ.

ಪರೀಕ್ಷೆಯಲ್ಲಿ ಅಕ್ರಮವೆಸಗಿ ಹಣ ಮಾಡುವ ಉದ್ದೇಶದಿಂದ ಆರೋಪಿಗಳು ಈ ಕೃತ್ಯ ನಡೆಸಿರುವ ಬಗ್ಗೆ ಪೊಲೀಸರಿಗೆ ಯಾವುದೇ ಸಾಕ್ಷ್ಯಗಳು ಸಿಕ್ಕಿಲ್ಲ. ಬೇರೆ ಜಿಲ್ಲೆಗಳಿಗೆ ಪ್ರಶ್ನೆಪತ್ರಿಕೆ ಕಳುಹಿಸಿಕೊಟ್ಟಿರುವ ಸಾಧ್ಯತೆಗಳೂ ಇಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದಾಖಲಾತಿ ಹೆಚ್ಚಿಸಿಕೊಳ್ಳಲು ಖಾಸಗಿ ಶಾಲೆಗಳು ಪೈಪೋಟಿಗೆ ಬಿದ್ದಿದ್ದು, ಅದಕ್ಕಾಗಿ ಶೇ 100ರ ಫಲಿತಾಂಶದ ಬೆನ್ನು ಬಿದ್ದಿವೆ. ಸರ್ಕಾರಿ ಶಾಲೆಗಳಲ್ಲಿ ಸಹ ಉತ್ತಮ ಫಲಿತಾಂಶ ಬರಲೇಬೇಕು ಎಂದು ಅಧಿಕಾರಿಗಳ ಒತ್ತಡ ಹೆಚ್ಚಿದೆ. ಈ ಎಲ್ಲವೂ ಪರೋಕ್ಷವಾಗಿ ಸಾಮೂಹಿಕ ನಕಲಿಗೆ ಪ್ರಚೋದನೆ ನೀಡಿವೆ ಎನ್ನಲಾಗಿದೆ.

ಸಾಮೂಹಿಕ ನಕಲು: ಅಕ್ರಮ ನಡೆದಿದೆ ಎನ್ನಲಾದ ಮಾಗಡಿಯ ರಂಗನಾಥ ಸ್ವಾಮಿ ಪ್ರೌಢಶಾಲೆಯ ಪರೀಕ್ಷಾ ಕೇಂದ್ರದಲ್ಲಿ 54 ಬಾಲಕರು ಹಾಗೂ 90 ಬಾಲಕಿಯರು ಸೇರಿದಂತೆ ಒಟ್ಟು 144 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. 7 ಕೊಠಡಿಗಳಲ್ಲಿ ಪರೀಕ್ಷೆಗಳು ನಡೆದಿವೆ. ಮಾಗಡಿಯ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಇಲ್ಲಿ ಪರೀಕ್ಷೆಗೆ ಹಾಜರಾಗಿದ್ದಾರೆ. ಮಾಗಡಿಯ ಇತರ ಮೂರು ಪರೀಕ್ಷಾ ಕೇಂದ್ರಗಳಲ್ಲಿನ ಸಿಬ್ಬಂದಿ ಹಾಗೂ ಸಿಸಿಟಿವಿ ದೃಶ್ಯಾವಳಿಗಳನ್ನೂ ಪೊಲೀಸರು ಜಾಲಾಡತೊಡಗಿದ್ದಾರೆ.

ಪರೀಕ್ಷೆ ಆರಂಭವಾದ ಒಂದು ಗಂಟೆ ಬಳಿಕ ವಿದ್ಯಾರ್ಥಿಗಳಿಗೆ ಉತ್ತರ ಹೇಳಿ ಕೊಡಲಾಗುತ್ತಿತ್ತು. ಈ ಸಂದರ್ಭ ಕೊಠಡಿ ಮೇಲ್ವಿಚಾರಕರೇ ಹೊರಗೆ ನಿಲ್ಲುತ್ತಿದ್ದರು ಎನ್ನಲಾಗಿದೆ. ಹೀಗಾಗಿ ಅಷ್ಟೂ ವಿದ್ಯಾರ್ಥಿಗಳು ಒಂದೇ ರೀತಿ ಉತ್ತರ ಬರೆದಿರುವ ಸಾಧ್ಯತೆ ಇದೆ. ಮಾಗಡಿ ಮಾತ್ರವಲ್ಲ, ಇತರ ಜಿಲ್ಲೆಗಳ ಪರೀಕ್ಷಾ ಕೇಂದ್ರಗಳಲ್ಲಿಯೂ ಈ ರೀತಿ ಅಕ್ರಮ ನಡೆದಿರುವ ಸುದ್ದಿ ದಟ್ಟವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿ ಮೌಲ್ಯಮಾಪನದ ವೇಳೆಯೂ ಇದಕ್ಕೆ ಪೂರಕ ಸಾಕ್ಷ್ಯಗಳು ದೊರೆತಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯು ಈಗಾಗಲೇ ತನಿಖಾ ತಂಡ ರಚಿಸಿದೆ.

ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಈ ಅಕ್ರಮದಲ್ಲಿ ಭಾಗಿ ಆಗಿದ್ದಾಗಿ ಆರೋಪಿಗಳು ಹೇಳಿದ್ದಾರೆ. ಹಣಕ್ಕಾಗಿ ಉತ್ತರ ಹೇಳಿಕೊಟ್ಟಿರುವ ಸಾಧ್ಯತೆ ಕಡಿಮೆ

ಕೆ. ಸಂತೋಷ್ ಬಾಬು, ಎಸ್‌ಪಿ ರಾಮನಗರ



'ಪೊಲೀಸ್ ಇಲಾಖೆ ವರದಿ ಬಳಿಕ ಕ್ರಮ'

ಬೆಂಗಳೂರು: 'ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಮನಗರದಲ್ಲಿ ನಡೆದಿರುವ ಅಕ್ರಮದ ಬಗ್ಗೆ ಪೊಲೀಸರು ತನಿಖೆ ನಡೆಸಿದ್ದಾರೆ. ಈ ಪ್ರಕರಣದ ಬಗ್ಗೆ ಪೊಲೀಸ್ ಇಲಾಖೆ ವರದಿ ಸಲ್ಲಿಸಿದ ನಂತರವೇ ಮಂಡಳಿಯ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸಲಾಗುವುದು' ಎಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕ ಎಚ್.ಎನ್. ಗೋಪಾಲಕೃಷ್ಣ ತಿಳಿಸಿದ್ದಾರೆ.

'ಪ್ರಜಾವಾಣಿ' ಜತೆ ಮಾತನಾಡಿ, 'ನಿಯಮಾನುಸಾರವೇ ಮಂಡಳಿ ಕ್ರಮಕೈಗೊಳ್ಳಲಿದೆ. ರಾಮನಗರ ಬಿಟ್ಟರೆ ಬೇರೆ ಯಾವ ಜಿಲ್ಲೆಗಳಲ್ಲೂ ಈ ರೀತಿ ಪ್ರಕರಣ ವರದಿಯಾಗಿಲ್ಲ' ಎಂದರು.

ಏಳು ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ಒಂದನೇ ಪುಟದಿಂದ

ಈ ಪೈಕಿ ಕೆಂಪೇಗೌಡ ಶಾಲೆಯ ಕ್ಲರ್ಕ್ ರಂಗೇಗೌಡ, ರಂಗನಾಥ ಶಾಲೆಯ ಹಿಂದಿ ಶಿಕ್ಷಕ ಕೃಷ್ಣಮೂರ್ತಿ ಹಾಗೂ ಶಿಕ್ಷಕ ಲೋಕೇಶ್ ಅವರನ್ನು ಪೊಲೀಸರು ಮರಳಿ ವಶಕ್ಕೆ ಪಡೆದರು. ಕೆಂಪೇಗೌಡ ಪ್ರೌಢಶಾಲೆ ಪ್ರಾಚಾರ್ಯ ಶ್ರೀನಿವಾಸ, ವಿಷಯ ತಜ್ಞರಾದ ಸುಬ್ಬಣ್ಣ, ಶ್ರೀನಿವಾಸ, ಅರ್ಜುನ್, ಅಲೀಲ ಉಲ್ಲಾ, ನಾಗರಾಜು, ಸ್ಥಳೀಯ ಪತ್ರಕರ್ತ ವಿಜಯ್ ಕುಮಾರ್ ಎಂಬುವವರನ್ನು ರಾಮನಗರ ಜಿಲ್ಲಾ ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಸುದ್ದಿ 2 ನಿಮಿಷ

ಜೈಲಿನಲ್ಲಿ ಸಿಧುಗೆ ಜ್ಯೂಸ್, ಬಾದಾಮಿ, ಹರ್ಬಲ್ ಟೀ!

ಚಂಡೀಗಢ: ಇಲ್ಲಿನ ಪಟಿಯಾಲಾ ಕೇಂದ್ರ ಕಾರಾಗೃಹದಲ್ಲಿರುವ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರು, ಜೈಲಿನಲ್ಲಿ ಗುಮಾಸ್ತ ಕೆಲಸ ನೀಡಿದ್ದು ದಿನಕ್ಕೆ ₹90 ದಿನಗೂಲಿ ನೀಡಲಾಗುವುದು ಎಂದು ಕಾರಾಗೃಹದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಅವರಿಗೆ ನಿತ್ಯ ಎಳನೀರು, ಲ್ಯಾಕ್ಟೋಸ್ ಮುಕ್ತ ಹಾಲು, ಜ್ಯೂಸ್, ಬಾದಾಮಿ ಮತ್ತು ಹರ್ಬಲ್ ಟೀ ನೀಡಬೇಕೆಂದು ವೈದ್ಯರು ಶಿಫಾರಸು ಮಾಡಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಮೇ 23ರಂದು ಪಟಿಯಾಲಾದ ರಾಜೀಂದ್ರ ಆಸ್ಪತ್ರೆಯಲ್ಲಿ ಸಿಧು ಅವರನ್ನು ವೈದ್ಯಕೀಯ ತಪಾಸಣೆಗೊಳಪಡಿಸಲಾಗಿತ್ತು. ಸಿಧುಗೆ ಯಕೃತ್ತಿಗೆ ಸಂಬಂಧಿಸಿದ ಕಾಯಿಲೆ ಇದ್ದು, ಜೈಲಿನಲ್ಲಿ ಅವರಿಗೆ ವಿಶೇಷ ಡಯಟ್ ಪಟ್ಟಿಯಂತೆ ಆಹಾರ ನೀಡಬೇಕೆಂದು ವೈದ್ಯರ ಮಂಡಳಿಯು ಶಿಫಾರಸು ಮಾಡಿದೆ.

ಪ್ರಭಾಕರ ಕೋರೆಗೆ ಅಮೆರಿಕ ವಿ.ವಿ. ಗೌರವ ಡಾಕ್ಟರೇಟ್

ಬೆಳಗಾವಿ: ಇಲ್ಲಿನ ಕೆಎಲ್‌ಇ ಸೊಸೈಟಿ ಕಾರ್ಯಾಧ್ಯಕ್ಷ ಮತ್ತು ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿಯ ಕುಲಾಧಿಪತಿ ಪ್ರಭಾಕರ ಕೋರೆ ಅವರಿಗೆ ಅಮೆರಿಕದ ಫಿಲಾಡೆಲ್ಫಿಯಾದ ಥಾಮಸ್ ಜೆಫರ್‌ಸನ್ ವಿಶ್ವವಿದ್ಯಾಲಯದಿಂದ 'ಡಾಕ್ಟರ್ ಆಫ್ ಸೈನ್ಸ್' ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ.

ಅವರು ಶಿಕ್ಷಣ ಮತ್ತು ಆರೋಗ್ಯ ಸೇವಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಪರಿಗಣಿಸಿ ಬುಧವಾರ ಅಲ್ಲಿ ನಡೆದ ಘಟಿಕೋತ್ಸವದಲ್ಲಿ ಗೌರವಿಸಲಾಗಿದೆ.

'ಥಾಮಸ್ ಜೆಫರ್‌ಸನ್ ವಿಶ್ವವಿದ್ಯಾಲಯದ ಅಧ್ಯಕ್ಷ ಹಾಗೂ ಸಿಇಒ ಎಚ್. ರಿಚರ್ಡ್ ಹ್ಯಾವರ್‌ಸ್ಟಿಕ್, ವಿಶ್ವವಿದ್ಯಾಲಯದ ಶೈಕ್ಷಣಿಕ ವ್ಯವಹಾರಗಳ ಮುಖ್ಯಸ್ಥ ಹಾಗೂ ಕಾರ್ಯನಿರ್ವಾಹಕ ಉಪಾಧ್ಯಕ್ಷ ಡಾ.ಮಾರ್ಕ್ ಎಲ್. ಟೈಕೋಸಿನಸ್ಕಿ ಪ್ರದಾನ ಮಾಡಿದ್ದಾರೆ. ಅಮೆರಿಕದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ಖಾಸಗಿ ವಿಶ್ವವಿದ್ಯಾಲಯದಿಂದ ಈ ಪದವಿ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆ ಕೋರೆ ಅವರದಾಗಿದೆ' ಎಂದು ಕೆಎಲ್‌ಇ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಬ್ರಹ್ಮಕಲಶಕ್ಕೆ ಪವಿತ್ರ ಜಲ ತುಂಬಿಸಿದ ಎಚ್‌.ಡಿ.ಕುಮಾರಸ್ವಾಮಿ

ಗಂಗಾ ಮಾತೆ ಬ್ರಹ್ಮಕಲಶ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಜನತಾ ಜಲಧಾರೆ ಗಂಗಾ ರಥಯಾತ್ರೆ ಅಂಗವಾಗಿ ರಾಜ್ಯದ ಎಲ್ಲ ನದಿಗಳಿಂದ ಸಂಗ್ರಹಿಸಿದ್ದ ಪವಿತ್ರ ಗಂಗಾ ಜಲದ ಕಲಶ ಪ್ರತಿಷ್ಠಾಪನೆಯ ಮಹಾಪೂಜೆ ಹಾಗೂ ಪ್ರತಿಷ್ಠಾಪನೆ ಗುರುವಾರ ನಡೆಯಿತು.

ಜೆಡಿಎಸ್ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಇರಿಸಿರುವ ಬೃಹತ್ ಬ್ರಹ್ಮಕಲಶಕ್ಕೆ ಪಂಡಿತ ಭಾನುಪ್ರಕಾಶ್ ಶರ್ಮ ನೇತೃತ್ವದ ಪಂಡಿತರ ತಂಡ ಪೂಜಾ ಕೈಂಕರ್ಯಗಳು ನಡೆಸಿಕೊಟ್ಟಿತು.

10 ಅಡಿ ಎತ್ತರದ 500 ಲೀಟರ್ ಜಲ ತುಂಬಲಿರುವ ಕಲಶವನ್ನು ಪ್ರತಿಷ್ಠಾಪನೆ ಮಾಡಲಾಯಿತು.

ಬೆಳಿಗ್ಗೆ 9 ಗಂಟೆಯಿಂದಲೇ ಗಣ ಹೋಮ, ನವಗ್ರಹ ಹೋಮ, ಗಂಗಾ ಪೂಜೆ, ಪರ್ಜನ್ಯ ಹೋಮ, ಪೂರ್ಣಾಹುತಿ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಪೂಜೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಪಾಲ್ಗೊಂಡಿದ್ದರು.

ದೇಶದ ಏಳು ಮಹಾನದಿಗಳ ಹೆಸರಿನಲ್ಲಿ ಇರಿಸಲಾಗಿದ್ದ ಹದಿನೈದು ಪುಟ್ಟ ಕಲಶಗಳಿಗೆ ಕುಮಾರಸ್ವಾಮಿ ಅವರು ಶಾಸ್ತ್ರಬದ್ಧವಾಗಿ ಪೂಜೆ, ವಿಧಿ ವಿಧಾನ ನೆರವೇರಿಸಿದರು. ಬಳಿಕ, ಬ್ರಹ್ಮಕಲಶ ಪ್ರತಿಷ್ಠಾಪನೆ ನಡೆಯಿತು. ರಾಜ್ಯದ ಉದ್ದಗಲಕ್ಕೂ ಸಂಗ್ರಹಿಸಿದ್ದ ಜಲವನ್ನು ಅದಕ್ಕೆ ತುಂಬಿಸಲಾಯಿತು.

ರಾಜ್ಯದ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಹಾಗೂ ಎಲ್ಲ ಜಿಲ್ಲೆಗಳಿಗೂ ಸಮಗ್ರ ನೀರಾವರಿ ಕಲಿಸುವ ಸಂಕಲ್ಪ ಮಾಡಲಾಯಿತು.

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವಿಶೇಷ ಮಂಟಪ

ಕಲಶ ಪ್ರತಿಷ್ಠಾಪನೆ ಮಾಡಿರುವ ಮಂಟಪವನ್ನು ವಿಶೇಷವಾಗಿ ವಿನ್ಯಾಸ ಮಾಡಲಾಗಿದೆ. ಕರ್ನಾಟಕದ ಪರಂಪರೆಯನ್ನು ಬಿಂಬಿಸುವ ವಾಸ್ತುಶಿಲ್ಪವುಳ್ಳ ಮಂಟಪ ವಿಶೇಷ ಆಕರ್ಷಣೆಯಾಗಿದೆ. ಇಡೀ ಮಂಟಪವನ್ನು ಆವರಣ ಮಂಟಪ ಕಲಾ ಆರ್ಟ್‌ನ ಕಲಾವಿದರು ಸಿದ್ಧಪಡಿಸಿದ್ದಾರೆ.

ಬೆಂಗಳೂರಿನ ಜೆಡಿಎಸ್ ಕಚೇರಿಯಲ್ಲಿ ಗುರುವಾರ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರು ಬ್ರಹ್ಮಕಲಶಕ್ಕೆ ಪವಿತ್ರ ಜಲ ತುಂಬಿಸಿದರು. ಪುರೋಹಿತ ಭಾನುಪ್ರಕಾಶ್ ಶರ್ಮ, ಶ್ರೀರಂಗಪಟ್ಟಣದ ಶಾಸಕ ರವೀಂದ್ರ ಶ್ರೀಕಂಠಯ್ಯ ಇದ್ದರು –ಪ್ರಜಾವಾಣಿ ಚಿತ್ರ

ಮೊದಲು, ಕುಮಾರಸ್ವಾಮಿ ಅವರು ಪುಟ್ಟ ಕಲಶದ ಮೂಲಕ ಬ್ರಹ್ಮಕಲಶಕ್ಕೆ ಪವಿತ್ರ ಜಲವನ್ನು ತುಂಬಿಸಿದರು.

ಗುರುವಾರದಿಂದ ಮುಂದಿನ ಒಂದು ವರ್ಷ ಅಂದರೆ ಚುನಾವಣೆ ನಡೆಯುವವರೆಗೆ ಕಲಶಕ್ಕೆ ನಿತ್ಯ ಗಂಗಾಪೂಜೆ ನಡೆಯುತ್ತದೆ. ನೀರು ಕೆಡದಂತೆ ನೋಡಿಕೊಳ್ಳಲು ವಿಶೇಷ 'ಯುವಿ - ಓಜೋನೈಶನ್' ವ್ಯವಸ್ಥೆ ಮಾಡಲಾಗಿದೆ. ಇದು ಆಮ್ಲಜನಕಯುಕ್ತ ಆಗಿರುತ್ತದೆ ಎಂದು ಕುಮಾರಸ್ವಾಮಿ ಅವರು ಮಾಹಿತಿ ನೀಡಿದರು.

ತೊರವಿ, ಅಂಕಲಿಕರ್‌ಗೆ ಉಸ್ತಾದ್ ಬಾಲೇಖಾನ್ ಸಂಸ್ಮರಣಾ ಪ್ರಶಸ್ತಿ

ಧಾರವಾಡ: ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಅವರ ನೆನಪಿನಲ್ಲಿ ನೀಡಲಾಗುವ 2020 ಹಾಗೂ 2021ನೇ ಸಾಲಿನ ವಾರ್ಷಿಕ ಪ್ರಶಸ್ತಿಯು ಕ್ರಮವಾಗಿ ಹಿರಿಯ ಹಿಂದೂಸ್ತಾನಿ ಗಾಯಕ ಪಂ. ವಿನಾಯಕ ತೊರವಿ ಹಾಗೂ ವಿದುಷಿ ಆರತಿ ಅಂಕಲಿಕರ್ ಅವರಿಗೆ ಲಭಿಸಿದೆ.

ಪಂ. ವಿನಾಯಕ ತೊರವಿ

ವಿದುಷಿ ಆರತಿ ಅಂಕಲಿಕರ್

ಇನ್ಫೊಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಹೆಸರಿನ ಪ್ರಶಸ್ತಿಯು ತಲಾ ₹1ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.

ಇದೇ ಕಾರ್ಯಕ್ರಮದಲ್ಲಿ ಉಸ್ತಾದ್ ಬಾಲೇಖಾನ್ ಟ್ರಸ್ಟ್ ನೀಡುವ ಸಹ ಕಲಾವಿದರ ಪ್ರಶಸ್ತಿಯು 2020ನೇ ಸಾಲಿನಲ್ಲಿ ತಬಲಾ ವಾದಕ ಪಂ.ರಾಜೇಂದ್ರ ನಾಕೋಡ್ ಹಾಗೂ 2021ನೇ ಸಾಲಿನಲ್ಲಿ ಹಾರ್ಮೋನಿಯಂ ಕಲಾವಿದ ವ್ಯಾಸಮೂರ್ತಿ ಕಟ್ಟಿ ಅವರಿಗೆ ನೀಡಲಾಗುವುದು. ಜೀವಮಾನ ಸಾಧನೆ ಪ್ರಶಸ್ತಿಯನ್ನು ಮಿರಜ್‌ನ ಸಿತಾರ್ ತಯಾರಕ ಹಾಜಿ ಅಹ್ಮದ್ ಸೊಅಬಾಸೊ ಅವರಿಗೆ ನೀಡಲಾಗುತ್ತಿದ್ದು, ಮೂರೂ ಪ್ರಶಸ್ತಿಗಳು ತಲಾ ₹25ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.

ಇದೇ 29ರಂದು ಸೃಜನಾ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬೆಳಿಗ್ಗೆ 9ರಿಂದ ಸಂಜೆ 9ರವರೆಗೆ ಸಂಗೀತ ಕಾರ್ಯಕ್ರಮವನ್ನೂ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಹಫೀಸ್ ಬಾಲೇಖಾನ್ ತಿಳಿಸಿದ್ದಾರೆ.

'ನನ್ನ ವಿರುದ್ಧ ಎಲ್ಲ ಅಸ್ತ್ರ ಪ್ರಯೋಗ'

ಬೆಂಗಳೂರು: 'ನಾನು ಪ್ರತಿ ವರ್ಷ ನನ್ನ ಆದಾಯ ತೆರಿಗೆ ವಿವರ ಸಲ್ಲಿಸುತ್ತಿದ್ದೇನೆ. ಈ ಪ್ರಕರಣ ಸಿಬಿಐಗೆ ನೀಡುವ ಪ್ರಕರಣವಲ್ಲ ಎಂದು ಅಡ್ವೊಕೇಟ್ ಜನರಲ್ ಅವರೇ ಹೇಳಿದ್ದರೂ ಬಿಜೆಪಿ ಸರ್ಕಾರ ನನ್ನ ಪ್ರಕರಣವನ್ನು ಸಿಬಿಐಗೆ ನೀಡಿದೆ. ಅವರು ತಮ್ಮ ಬಳಿ ಇರುವ ಎಲ್ಲ ಅಸ್ತ್ರಗಳನ್ನು ಪ್ರಯೋಗ ಮಾಡುತ್ತಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಡಿಕೆಶಿ ವಿರುದ್ಧ ಚಾರ್ಜ್‌ಶೀಟ್

ಒಂದನೇ ಪುಟದಿಂದ

ಅವರ ಪುತ್ರಿಯ ಹೆಸರಿನಲ್ಲೂ ₹ 108 ಕೋಟಿ ಮೊತ್ತದ ಅಕ್ರಮ ವ್ಯವಹಾರ ನಡೆದಿದೆ. ಪುತ್ರಿಗೆ ₹ 48 ಕೋಟಿ ಸಾಲ ಇದೆ ಎಂದು ವಿವರ ನೀಡಿದ್ದರೂ, ಸಾಲದ ಮೂಲವನ್ನು ಬಹಿರಂಗಪಡಿಸಿಲ್ಲ. ನೋಟು ರದ್ದತಿ ಸಂದರ್ಭ ದೆಹಲಿಯ ನಿವಾಸದಲ್ಲಿ ಪತ್ತೆಯಾಗಿದ್ದ ₹ 8.59 ಕೋಟಿ ಹಣಕ್ಕೆ ಲೆಕ್ಕ ನೀಡಿಲ್ಲ ಎಂದೂ ಅವರು ವಿವರಿಸಿದ್ದಾರೆ.

ಶಿವಕುಮಾರ್ ಹೆಸರಲ್ಲಿ 24, ಅವರ ಸೋದರ ಡಿ.ಕೆ.ಸುರೇಶ್ ಹೆಸರಲ್ಲಿ 27, ಅವರ ತಾಯಿಯ ಹೆಸರಲ್ಲಿ 38 ಆಸ್ತಿ ಸೇರಿ, ಹತ್ತಿರ ಸಂಬಂಧಿಗಳ ಬಳಿ ಒಟ್ಟು 300ಕ್ಕೂ ಅಧಿಕ ಸ್ಥಿರಾಸ್ತಿಗಳಿವೆ. ಶಿವಕುಮಾರ್ ಅವರು ಅಕ್ರಮ ಆಸ್ತಿ ಗಳಿಕೆ, ಹಣ ಅಕ್ರಮ ವರ್ಗಾವಣೆ ನಡೆಸಿರುವ ಕುರಿತು ಪುರಾವೆಗಳು ಲಭ್ಯವಾಗಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ತಂದೆ ಕೆಂಪೇಗೌಡ ಅವರಿಗೆ ಕೃಷಿಯಿಂದಲೇ ವಾರ್ಷಿಕ ₹25 ಲಕ್ಷ ಆದಾಯ ಇತ್ತು ಎಂದು ತಿಳಿಸಿದ್ದ ಶಿವಕುಮಾರ್, ಅದನ್ನು ದೃಢಪಡಿಸಲು ತಹಶೀಲ್ದಾರರ ಪ್ರಮಾಣ ಪತ್ರ ಸಲ್ಲಿಸಿದ್ದರು. ಕೃಷಿಯಿಂದಲೇ ಅಷ್ಟೊಂದು ಆದಾಯ ಇತ್ತು ಎಂಬುದನ್ನು ಪ್ರಮಾಣೀಕರಿಸಲು ಅಗತ್ಯವಿರುವ ಜಮೀನಿನ ವಿವರ, ಅಲ್ಲಿ ಯಾವ ಬೆಳೆ ಬೆಳೆದಿದ್ದರು ಎಂಬ ವಿವರಗಳು ತಹಶೀಲ್ದಾರ್ ನೀಡಿರುವ ಪ್ರಮಾಣಪತ್ರದಲ್ಲಿ ಇಲ್ಲ. ಯಾವುದೇ ದಿನಾಂಕ ನಮೂದಿಸದ ಆ ಪ್ರಮಾಣಪತ್ರದ ನೈಜತೆ ಬಹಿರಂಗಗೊಂಡಿಲ್ಲ. ಅಲ್ಲದೆ, ಯಾವ ದಾಖಲೆಗಳನ್ನು ಆಧರಿಸಿ ಈ ಪ್ರಮಾಣಪತ್ರ ನೀಡಲಾಗಿದೆ ಎಂಬ ಅಂಶವೂ ಇಲ್ಲ. ಈ ಸಂಬಂಧ ಸಮರ್ಪಕ ಉತ್ತರವನ್ನೂ ನೀಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಯ ದೆಹಲಿ ನಿವಾಸದಲ್ಲಿ ₹ 8.59 ಕೋಟಿ ಪತ್ತೆ ಆಗಿರುವ ಪ್ರಕರಣದಲ್ಲಿ ದೆಹಲಿ ಕರ್ನಾಟಕ ಭವನದ ನೌಕರ ಆಂಜನೇಯ ಅವರ ಪಾತ್ರವೂ ಪ್ರಮುಖವಾಗಿದೆ. ಶಿವಕುಮಾರ್ ಬಂಧನದ ಮಾರನೇ ದಿನ ಆಂಜನೇಯ ನಿವಾಸದಲ್ಲೂ ತಪಾಸಣೆ ನಡೆಸಿ ಕೆಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದ್ದು, ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಆಕ್ಷೇಪಣೆಗೆ ಅವಕಾಶ

ಒಂದನೇ ಪುಟದಿಂದ

ಈ ಕುರಿತಂತೆ ಡಿ.ಕೆ.ಶಿವಕುಮಾರ್ ಆಪ್ತರಾದ ಸುನಿಲ್ ಕುಮಾರ್ ಶರ್ಮ ಮತ್ತು ಕಂದಸ್ವಾಮಿ ರಾಜೇಂದ್ರನ್ ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾ. ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರದ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ.ನರಗುಂದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು 2 ವಾರಗಳ ಸಮಯ ನೀಡುವಂತೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿದೆ.

ಡಿಕೆಶಿ ಶೀಘ್ರವೇ ಜೈಲಿಗೆ :ಬಿಜೆಪಿ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯ ದೋಷಾರೋಪ ಪಟ್ಟಿ ಸಲ್ಲಿಸಿದ್ದು ಅವರು ಸದ್ಯವೇ ಜೈಲಿಗೆ ಹೋಗಲಿದ್ದಾರೆ ಎಂದು ಬಿಜೆಪಿ ಮುಖ್ಯ ವಕ್ತಾರ ಎಂ.ಜಿ.ಮಹೇಶ್ ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಣ ದುರುಪಯೋಗ, ಅಕ್ರಮವಾಗಿ ಹಣ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಮಾರು 16– 17 ತಿಂಗಳಿಂದ ಜಾಮೀನಿನ ಮೇಲೆ ಇದ್ದರು. ಇನ್ನು ಯಾರೂ ರಕ್ಷಿಸಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ.

ದೋಷಾರೋಪ ಪಟ್ಟಿಯಲ್ಲಿನ ಅಂಶಗಳನ್ನು ಗಮನಿಸಿದರೆ ನ್ಯಾಯಾಲಯ ಅವರಿಗೆ ದೊಡ್ಡ ಮಟ್ಟದ ಶಿಕ್ಷೆ ವಿಧಿಸುವುದು ಸ್ಪಷ್ಟ. ಸದಾ ನೈತಿಕತೆ ಬಗ್ಗೆ ಮಾತನಾಡುವ ಕಾಂಗ್ರೆಸ್‌ನವರು ಈ ದೋಷಾರೋಪದ ಆಧಾರದಲ್ಲಿ ಏನು ಉತ್ತರ ಕೊಡುತ್ತಾರೆ ಎಂದೂ ಅವರು ಪ್ರಶ್ನಿಸಿದರು.

ಮಹಾರಾಷ್ಟ್ರ ಸಚಿವ ಪರಬ್ ಮನೆ ಮೇಲೆ ಇ.ಡಿ ದಾಳಿ

ನವದೆಹಲಿ/ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಸಾರಿಗೆ ಸಚಿವ ಅನಿಲ್ ಪರಬ್ ಮತ್ತು ಇತರರ ಮನೆ ಹಾಗೂ ಕಚೇರಿ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿರುವ ದಾಪೋಲಿಯಲ್ಲಿ ಭೂ ವ್ಯವಹಾರದಲ್ಲಿ ಅಕ್ರಮ ಮತ್ತು ಇತರ ಆರೋಪಗಳಿಗೆ ಸಂಬಂಧಿಸಿ ಹಣ ಅಕ್ರಮ ತಡೆ ಕಾಯ್ದೆ (ಪಿಎಂಎಲ್‌ಎ)ಯ ಕ್ರಿಮಿನಲ್ ಸೆಕ್ಷನ್‌ಗಳ ಅಡಿಯಲ್ಲಿ ಸಚಿವರು ಮತ್ತು ಇತರರ ವಿರುದ್ಧ ಇ.ಡಿ ಹೊಸ ಪ್ರಕರಣವನ್ನು ದಾಖಲಿಸಿದೆ. ಇದಕ್ಕೆ ಸಂಬಂಧಿಸಿ ಈ ದಾಳಿ ನಡೆಸಲಾಗಿದೆ.

ಮುಂಬೈನಲ್ಲಿರುವ ಪರಬ್ ಅಧಿಕೃತ ನಿವಾಸ ಸೇರಿದಂತೆ ದಾಪೋಲಿ, ಪುಣೆಯಲ್ಲಿ ಏಳು ಸ್ಥಳಗಳಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಭದ್ರತೆ ಪಡೆದು ಏಕಕಾಲಕ್ಕೆ ದಾಳಿ ನಡೆಸಲಾಗಿದೆ.

ಪರಬ್ ಅವರು 2017 ರಲ್ಲಿ ₹ 1 ಕೋಟಿ ಮೌಲ್ಯದ ಭೂಮಿಯನ್ನು ದಾಪೋಲಿಯಲ್ಲಿ ಖರೀದಿಸಿ, 2019ರಲ್ಲಿ ಅದನ್ನು ನೋಂದಾಯಿಸಿದ್ದರು. ನಂತರ ಈ ಭೂಮಿಯನ್ನು ಮುಂಬೈ ಮೂಲದ ಕೇಬಲ್ ಆಪರೇಟರ್ ಸದಾನಂದ್ ಕದಮ್ ಅವರಿಗೆ 2020 ರಲ್ಲಿ ₹ 1.10 ಕೋಟಿಗೆ ಮಾರಾಟ ಮಾಡಲಾಗಿದೆ. ಈ ವ್ಯವಹಾರದಲ್ಲಿ ಅಕ್ರಮ ನಡೆದಿದೆ ಎಂದು ಇ.ಡಿ ಆರೋಪಿಸಿದೆ.

ರಾಜಕಾರಣದ ದೊಡ್ಡ ಸಮಸ್ಯೆಯೂ ಹೌದು –ಹೈದರಾಬಾದ್‌ನಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

'ಕುಟುಂಬ ಆಧರಿತ ಪಕ್ಷ ದೇಶದ ದೊಡ್ಡ ಶತ್ರು'

ಹೈದರಾಬಾದ್ (ಪಿಟಿಐ): 'ಕುಟುಂಬಗಳ ಪ್ರಾಬಲ್ಯವುಳ್ಳ ರಾಜಕೀಯ ಪಕ್ಷಗಳು ದೇಶದ ಅತಿದೊಡ್ಡ ಶತ್ರು' ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ. 'ಕುಟುಂಬದ ಏಳಿಗೆಗಷ್ಟೇ ಇಂತಹ ಪಕ್ಷಗಳು ಒತ್ತು ನೀಡಲಿವೆ' ಎಂದೂ ವಾಗ್ದಾಳಿ ನಡೆಸಿದ್ದಾರೆ.

ಇಲ್ಲಿಗೆ ಒಂದು ದಿನದ ಪ್ರವಾಸ ಕೈಗೊಂಡಿದ್ದ ಪ್ರಧಾನಿ ಬೇಗಂಪೇಟ್ ವಿಮಾನನಿಲ್ದಾಣದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ತೆಲಂಗಾಣದಲ್ಲಿ ಬಿಜೆಪಿ ಕಾರ್ಯಕರ್ತರ ವಿರುದ್ಧ ರಾಜಕೀಯ ದ್ವೇಷ ಸಾಧಿಸಲಾಗುತ್ತಿದೆ ಎಂದು ಆರೋಪಿಸಿದರು.

ಪರಿವಾರ ಆಧರಿತ ಪಕ್ಷಗಳ ವಿರುದ್ಧ ನೇರ ದಾಳಿ ನಡೆಸಿದ ಅವರು, 'ಈ ಪಕ್ಷಗಳು ದೇಶದ ರಾಜಕಾರಣದ ದೊಡ್ಡ ಸಮಸ್ಯೆಗಳಷ್ಟೇ ಅಲ್ಲ. ಪ್ರಜಾಪ್ರಭುತ್ವ ಮತ್ತು ದೇಶದ ಯುವಜನರ ಪಾಲಿಗೆ ಅತಿದೊಡ್ಡ ಶತ್ರುವೂ ಹೌದು' ಎಂದು ವ್ಯಾಖ್ಯಾನಿಸಿದರು.

ರಾಜ್ಯದ ಆಡಳಿತರೂಢ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಪರೋಕ್ಷವಾಗಿ ಉಲ್ಲೇಖಿಸಿದ ಅವರು, 'ಕುಟುಂಬ ಆಧರಿತ ಪಕ್ಷಗಳು ಹೇಗೆ ಕುಟುಂಬದ ಏಳಿಗೆಯನ್ನಷ್ಟೇ ಬಯಸಲಿವೆ ಎಂಬುದನ್ನು ರಾಜ್ಯದ ಜನ ಗಮನಿಸುತ್ತಿದ್ದಾರೆ. ಈ ಪಕ್ಷಗಳು ಎಂದಿಗೂ ಬಡವರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ನಿರ್ದಿಷ್ಟ ಕುಟುಂಬಕ್ಕಷ್ಟೇ ಬದ್ಧವಾದ ಪಕ್ಷದಲ್ಲಿ ಭ್ರಷ್ಟಾಚಾರ ಹೇಗೆ ಹಾಸುಹೊಕ್ಕಾಗಿದೆ ಎಂಬುದನ್ನು ದೇಶ ನೋಡಿದೆ' ಎಂದು ಹೇಳಿದರು.

ಮೂಢನಂಬಿಕೆ ಕುರಿತಂತೆಯೂ ಪ್ರಧಾನಿ ಅವರು ಕೆಸಿಆರ್ ವಿರುದ್ಧ ಹರಿಹಾಯ್ದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಅವರಿಗೂ ಹಿಂದೆ ಒಂದು ಸ್ಥಳಕ್ಕೆ ಭೇಟಿ ನೀಡದಂತೆ ಸಲಹೆ ನೀಡಲಾಗಿತ್ತು. ಅದನ್ನು ಮೀರಿ ಯೋಗಿ ಭೇಟಿ ನೀಡಿದ್ದರು ಎಂದು ಸ್ಮರಿಸಿದರು.

ವಾಸ್ತುದೋಷವಿದೆ ಎಂಬ ಹೇಳಿಕೆಯನ್ನು ಆಧರಿಸಿ ಕೆಸಿಆರ್ ಅವರು 2016ರಲ್ಲಿ ಮನೆ ಬದಲಾಯಿಸಿದ್ದರು ಎಂದು ವರದಿಯಾಗಿತ್ತು.

ಆಡಳಿತ ವ್ಯವಸ್ಥೆಯ ಹೊಸ ವ್ಯಾಖ್ಯಾನ'

ಜಿ–20 ಶೃಂಗದ ಸದಸ್ಯ ರಾಷ್ಟ್ರಗಳಲ್ಲಿಯೇ ಆರ್ಥಿಕತೆ ಅತಿ ವೇಗವಾಗಿ ಬೆಳೆಯುತ್ತಿರುವ ದೇಶ ಭಾರತವಾಗಿದೆ ಎಂದು ಪ್ರಧಾನಿ ಮೋದಿ ಗುರುವಾರ ಇಲ್ಲಿ ಹೇಳಿದರು.

ಇಲ್ಲಿನ ಇಂಡಿಯನ್ ಸ್ಕೂಲ್ ಆಫ್ ಬಿಸಿನೆಸ್‌ನ (ಐಎಸ್‌ಬಿ) 20ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು, ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಾಣ ಸೇರಿದಂತೆ ಸರ್ಕಾರದ ವಿವಿಧ ಸಾಧನೆಗಳನ್ನು ಪಟ್ಟಿಮಾಡಿದರು.

'ಸುಧಾರಣೆ, ಸಾಧನೆ ಮತ್ತು ಪರಿವರ್ತನೆ' ಎಂಬುದು ದೇಶದ ಆಡಳಿತ ವ್ಯವಸ್ಥೆಯ ಮಂತ್ರವಾಗಿದೆ ಎಂದು ಪ್ರತಿಪಾದಿಸಿದರು.

ಹೈದರಾಬಾದ್‌ಗೆ ಗುರುವಾರ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತೆಲಂಗಾಣದ ರಾಜ್ಯಪಾಲರಾದ ತಮಿಳ್‌ಸಾಯಿ ಸೌಂದರ್‌ರಾಜನ್ ಅವರು ಸ್ವಾಗತಿಸಿದರು –ಪಿಟಿಐ ಚಿತ್ರ

ಭೇಟಿ ತಪ್ಪಿಸಿಕೊಂಡ ಕೆಸಿಆರ್

ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಗುರುವಾರ ಪ್ರಧಾನಿ ನರೇಂದ್ರ ಮೋದಿ ಭೇಟಿಯಾಗುವುದರಿಂದ ದೂರ ಉಳಿದರು. ನಾಲ್ಕು ತಿಂಗಳ ಹಿಂದೆಯೂ ಅವರು ಭೇಟಿ ಸಾಧ್ಯತೆಯನ್ನು ತಪ್ಪಿಸಿದ್ದರು. ದಿನದ ಭೇಟಿಗೆ ಪ್ರಧಾನಿ ಮೋದಿ ಅವರು ಹೈದರಾಬಾದ್‌ಗೆ ಬರುವ ಕೆಲವೇ ಗಂಟೆ ಮೊದಲು ಕೆಸಿಆರ್ ಅವರು ಬೇಗಂಪೇಟ್ ವಿಮಾನನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಿದರು. ಫೆ. 5ರಂದು ಅವರು ಪ್ರಧಾನಿ ಭೇಟಿ ಆಗಿರಲಿಲ್ಲ.

ಬೆಂಗಳೂರು ಭೇಟಿ ಈ ಮೊದಲೇ ನಿಗದಿಯಾಗಿತ್ತು ಎಂದು ಟಿಆರ್‌ಎಸ್ ಪಕ್ಷ ಕಾರಣ ನೀಡಿದ್ದರೆ, ಪ್ರಧಾನಿಯನ್ನು ಎದುರುಗೊಳ್ಳಲು ಧೈರ್ಯವಿಲ್ಲದೆ ಕೆಸಿಆರ್ ತೆರಳಿದ್ದಾರೆ ಎಂದು ತೆಲಂಗಾಣ ಬಿಜೆಪಿ ಮುಖ್ಯಸ್ಥ ಬಂಡಿ ಸಂಜಯ್ ಕುಮಾರ್ ಆರೋಪಿಸಿದ್ದಾರೆ.

ಹಿಂದಿಗೆ ಸರಿಸಮಾನ 'ಸ್ಥಾನಮಾನ' ತಮಿಳಿಗೆ: ಪ್ರಧಾನಿಗೆ ಮನವಿ

ಚೆನ್ನೈ: ಹಿಂದಿ ಭಾಷೆಗೆ ಸರಿಸಮಾನವಾಗಿ ತಮಿಳಿಗೂ ಅಧಿಕೃತ ಭಾಷಾ ಸ್ಥಾನಮಾನ ನೀಡಬೇಕು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದರು.

ರೈಲ್ವೆ ಯೋಜನೆಗಳಿಗೆ ಚಾಲನೆ ಸೇರಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲು ಪ್ರಧಾನಿ ಇಲ್ಲಿಗೆ ಆಗಮಿಸಿದ್ದಾರೆ. ವೇದಿಕೆಯಲ್ಲಿ ಪ್ರಧಾನಿ ಎದುರೇ ಈ ಬೇಡಿಕೆ ಮಂಡಿಸಿದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಅಲ್ಲದೆ, ಮದ್ರಾಸ್ ಹೈಕೋರ್ಟ್‌ನಲ್ಲೂ ತಮಿಳಿಗೆ ಅಧಿಕೃತ ಭಾಷೆ ಸ್ಥಾನಮಾನ ನೀಡಬೇಕು ಹಾಗೂ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ 'ನೀಟ್' ಪರೀಕ್ಷೆಯಿಂದ ತಮಿಳುನಾಡಿಗೆ ವಿನಾಯಿತಿ ನೀಡಬೇಕು ಎಂದು ಸ್ಟಾಲಿನ್ ಒತ್ತಾಯಿಸಿದರು. ಪ್ರಧಾನಿ ಇದೇ ಸಂದರ್ಭದಲ್ಲಿ ತಮಿಳುನಾಡಿನ ಗುಣಗಾನ ಮಾಡಿದರು. 'ತಮಿಳುನಾಡಿಗೆ ವಿಶೇಷ ಸ್ಥಾನವಿದೆ. ತಮಿಳು ಭಾಷೆ ಜಾಗತಿಕವಾದ ಸಂಸ್ಕೃತಿಯನ್ನು ಹೊಂದಿದೆ' ಎಂದರು. ಕವಿ ಸುಬ್ರಹ್ಮಣ್ಯ ಭಾರತಿ ಅವರ ಸಾಲುಗಳನ್ನು ಉಲ್ಲೇಖಿಸಿದರು.

ಸಂಕ್ಷಿಪ್ತ ಸುದ್ದಿ

ಕಾರ್ತಿಗೆ ಬಂಧನ: ಮಧ್ಯಂತರ ರಕ್ಷಣೆ

ನವದೆಹಲಿ (ಪಿಟಿಐ): ಚೀನಾ ವೀಸಾಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಪ್ರಕರಣದಲ್ಲಿ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರಿಗೆ ಇದೇ 30ರವರೆಗೆ ಬಂಧನದಿಂದ ಮಧ್ಯಂತರ ರಕ್ಷಣೆಯನ್ನು ದೆಹಲಿ ನ್ಯಾಯಾಲಯ ಗುರುವಾರ ನೀಡಿದೆ.

ಕಾರ್ತಿ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ವಿಶೇಷ ನ್ಯಾಯಾಧೀಶ ಎಂ.ಕೆ.ನಾಗ್ಪಾಲ್ ಅವರು ಮಧ್ಯಂತರ ರಕ್ಷಣೆಗೆ ಸೂಚಿಸಿದರು. ಅಲ್ಲದೆ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಇ.ಡಿಗೆ ನೋಟಿಸ್ ಜಾರಿಗೊಳಿಸಿದರು.

ಕಾರ್ತಿ ಅವರು ತಮ್ಮ ತಂದೆ ಪಿ.ಚಿದಂಬರಂ ಗೃಹ ಸಚಿವರಾಗಿದ್ದ ಅವಧಿಯಲ್ಲಿ ಚೀನಾದ 263 ಪ್ರಜೆಗಳಿಗೆ ವೀಸಾ ಕೊಡಿಸಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಾರ್ತಿ ವಿರುದ್ಧ ಇಡಿ ಇತ್ತೀಚೆಗೆ ಹಣ ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿದೆ.

ಜ್ಞಾನವಾಪಿ ಪ್ರಕರಣ: ವಿಚಾರಣೆ 30ಕ್ಕೆ ಮುಂದೂಡಿಕೆ

ವಾರಾಣಸಿ: ಜ್ಞಾನವಾಪಿ- ಶೃಂಗಾರ್ ಗೌರಿ ಸಂಕೀರ್ಣ ಪ್ರಕರಣದ ಕುರಿತು ಗುರುವಾರ ಮುಸ್ಲಿಂ ಪರ ವಾದವನ್ನು ಆಲಿಸಿದ ಇಲ್ಲಿನ ಜಿಲ್ಲಾ ನ್ಯಾಯಾಲಯವು ಪ್ರಕರಣದ ಮುಂದಿನ ವಿಚಾರಣೆಯನ್ನು ಮೇ 30ರಂದು ನಿಗದಿಪಡಿಸಿದೆ.

'ಪ್ರಕರಣದ ನಿರ್ವಹಣೆಯ ಕುರಿತು ಮುಸ್ಲಿಂ ಕಡೆಯ ವಾದಗಳು ಗುರುವಾರ ಅಪೂರ್ಣವಾಗಿವೆ. ಹಾಗಾಗಿ, ಮೇ 30ರಂದು ನಡೆಯುವ ವಿಚಾರಣೆಯಲ್ಲಿ ವಾದ ಮುಂದುವರಿಯಲಿದೆ' ಎಂದು ಜಿಲ್ಲಾ ಸರ್ಕಾರಿ ವಕೀಲ ರಾಣಾ ಸಂಜೀವ್ ಸಿಂಗ್ ಮಾಹಿತಿ ನೀಡಿದ್ದಾರೆ.

ಜ್ಞಾನವಾಪಿ- ಶೃಂಗಾರ್ ಗೌರಿ ಸಂಕೀರ್ಣ ಪ್ರಕರಣದ ನಿರ್ವಹಣೆಯ ಕುರಿತು ವಿಚಾರಣೆಯನ್ನು ಮೇ 26ರಂದು ಕೈಗೆತ್ತಿಕೊಳ್ಳಲಾಗುವುದು ಎಂದು ಈ ಹಿಂದೆ ನ್ಯಾಯಾಲಯವು ತಿಳಿಸಿತ್ತು.

ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಹೇಳಿಕೆಗೆ ತೀವ್ರ ಟೀಕೆ

'ಸುಪ್ರಿಯಾ ಅಡುಗೆ ಮಾಡಿಕೊಂಡಿರಲಿ'

ಪ್ರಜಾವಾಣಿ ವಾರ್ತೆ

ಮುಂಬೈ: 'ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಅವರು ರಾಜಕಾರಣದಲ್ಲಿರುವುದಕ್ಕಿಂತ ಮನೆಗೆ ಹೋಗಿ ಅಡುಗೆ ಮಾಡಿಕೊಂಡಿರಲಿ' ಎಂದಿರುವ ಮಹಾರಾಷ್ಟ್ರದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಅವರ ಹೇಳಿಕೆಯು ವಿವಾದ ಹುಟ್ಟುಹಾಕಿದ್ದು, ವಿವಿಧೆಡೆಗಳಿಂದ ತೀವ್ರ ಟೀಕೆ ವ್ಯಕ್ತವಾಗಿದೆ.

ಪಾಟೀಲ್ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಸುಪ್ರಿಯಾ ಅವರ ಪತಿ ಸದಾನಂದ ಸುಳೆ, 'ನನ್ನ ಹೆಂಡತಿ ಗೃಹಿಣಿ, ತಾಯಿ ಮತ್ತು ಯಶಸ್ವಿ ರಾಜಕಾರಣಿ. ಭಾರತದ ಇತರ ಅನೇಕರಂತೆ ಕಠಿಣ ಶ್ರಮಜೀವಿ ಮತ್ತು ಪ್ರತಿಭಾವಂತ ಮಹಿಳೆಯರಲ್ಲಿ ಒಬ್ಬರಾದ ನನ್ನ ಹೆಂಡತಿಯ ಬಗ್ಗೆ ನನಗೆ ಹೆಮ್ಮೆ ಇದೆ. ಪಾಟೀಲ್ ಹೇಳಿಕೆಯು ಎಲ್ಲ ಮಹಿಳೆಯರಿಗೆ ಮಾಡಿದ ಅವಮಾನ. ಅವರು (ಬಿಜೆಪಿ) ಯಾವಾಗಲೂ ಸ್ತ್ರೀ-ದ್ವೇಷಿಗಳು. ಸಾಧ್ಯವಾದ ಕಡೆಗಳಲ್ಲೆಲ್ಲಾ ಮಹಿಳೆಯರನ್ನು ಕೀಳಾಗಿ ಕಾಣುತ್ತಾರೆ. ಇದನ್ನು ನಾನು ಸದಾ ಗಮನಿಸುತ್ತಾ ಬಂದಿದ್ದೇನೆ' ಎಂದು ಟ್ವೀಟ್ ಮಾಡಿದ್ದಾರೆ.

ಏನಿದು ವಿವಾದ?: ಇತ್ತೀಚೆಗಷ್ಟೇ ಮಧ್ಯಪ್ರದೇಶದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಬಿಸಿಗೆ ಮೀಸಲಾತಿ ನೀಡುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಇದಕ್ಕೆ ಸಂಬಂಧಿಸಿದಂತೆ ಎನ್‌ಸಿಪಿಯ ಸಭೆಯಲ್ಲಿ ಸುಪ್ರಿಯಾ ಅವರು, 'ಮಧ್ಯಪ್ರದೇಶದ ಮುಖ್ಯಮಂತ್ರಿ ದೆಹಲಿಗೆ ಬಂದು 'ಯಾರನ್ನೋ' ಭೇಟಿಯಾದರು. ಮುಂದಿನ ಎರಡು ದಿನಗಳಲ್ಲಿ ಇದ್ದಕ್ಕಿದ್ದಂತೆ ಏನಾಯಿತೋ ಗೊತ್ತಿಲ್ಲ. ಅವರು ಒಬಿಸಿಗೆ ಮೀಸಲಾತಿ ನೀಡಲು ಮುಂದಾದರು' ಎಂದರು.

ಒಬಿಸಿ ಮೀಸಲಾತಿಗೆ ಒತ್ತಾಯಿಸಿ ಬುಧವಾರ ಮುಂಬೈನಲ್ಲಿ ಬಿಜೆಪಿ ರಾಜ್ಯ ಘಟಕ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ್ದ ಪಾಟೀಲ್, 'ನೀವು (ಸುಪ್ರಿಯಾ) ರಾಜಕಾರಣದಲ್ಲಿರುವುದೇಕೆ? ಮನೆಗೆ ಹೋಗಿ ಅಡುಗೆ ಮಾಡಿ. ದೆಹಲಿಗಾದರೂ ಹೋಗಿ ಅಥವಾ ಸ್ಮಶಾನಕ್ಕಾದರೂ ಹೋಗಿ. ಆದರೆ, ನಮಗೆ ಒಬಿಸಿ ಮೀಸಲಾತಿ ದೊರೆಯುವಂತೆ ಮಾಡಿ. ಸಂಸದೆಯಾಗಿರುವ ನಿಮಗೆ ಮುಖ್ಯಮಂತ್ರಿ ಅವರ ಅಪಾಯಿಂಟ್‌ಮೆಂಟ್ ಪಡೆಯುವುದು ಹೇಗೆಂದು ತಿಳಿದಿಲ್ಲದಿದ್ದರೆ ಹೇಗೆ?' ಎಂದಿದ್ದರು.

ಟೀಕೆಗಳ ಸುರಿಮಳೆ: ಪಾಟೀಲ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಶರದ್ ಪವಾರ್ ಅವರ ಸೋದರಳಿಯ, ಉಪಮುಖ್ಯಮಂತ್ರಿ ಅಜಿತ್ ಪವಾರ್, 'ಅವರಿಗೆ ಸುಪ್ರಿಯಾ ಬಗ್ಗೆ ಈ ರೀತಿ ಮಾತನಾಡುವ ಹಕ್ಕಿಲ್ಲ. ಸಂವಿಧಾನ ಆಕೆಗೆ ಹಕ್ಕು ನೀಡಿದೆ. ಪಾಟೀಲರನ್ನು ಕೊಲ್ಹಾಪುರಕ್ಕೆ ಹೋಗಿ ಕುಳಿತುಕೊಳ್ಳಿ ಎಂದು ನಾನು ಹೇಳಲಾರೆ. ಪ್ರಜಾಪ್ರಭುತ್ವದಲ್ಲಿ ಜನರೇ ನಿರ್ಧರಿಸುತ್ತಾರೆ' ಎಂದಿದ್ದಾರೆ.

ಹೇಳಿಕೆ ಸಮರ್ಥಿಸಿಕೊಂಡ ಪಾಟೀಲ್

'ನನ್ನ ಮಾತು ಮಹಾರಾಷ್ಟ್ರದ ಗ್ರಾಮೀಣ ಶೈಲಿಯಲ್ಲಿದೆ. ಗ್ರಾಮೀಣ ಮಹಿಳೆಯರು ತಮ್ಮ ಮಕ್ಕಳು ಕೆಲಸ ಮಾಡದಿದ್ದರೆ, ಸ್ಮಶಾನಕ್ಕೆ ಹೋಗುವಂತೆ ಹೇಳುತ್ತಾರೆ' ಎಂದು ಚಂದ್ರಕಾಂತ್ ಪಾಟೀಲ್ ಗುರುವಾರ ತಮ್ಮ ಹೇಳಿಕೆ ಸಮರ್ಥಿಸಿಕೊಂಡಿದ್ದಾರೆ.

'ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ಪುತ್ರಿ ಸುಪ್ರಿಯಾ ಸುಳೆ ಅವರನ್ನಾಗಲೀ, ಇತರ ಮಹಿಳೆಯರನ್ನಾಗಲೀ ಅಗೌರವಿಸುವ ಉದ್ದೇಶವನ್ನು ಹೊಂದಿಲ್ಲ. ನಾವು ಭೇಟಿಯಾದಾಗಲೆಲ್ಲಾ ಪರಸ್ಪರ ಗೌರವದಿಂದ ನಡೆದುಕೊಳ್ಳುತ್ತೇವೆ. ಅಡುಗೆ ವಿಷಯ ಬಿಟ್ಟರೆ ಇತರ ಟೀಕೆಗಳಲ್ಲಿ ಮಹಿಳೆಯರನ್ನು ಅಗೌರವಿಸುವಂಥದ್ದು ಏನೂ ಇಲ್ಲ. ಇಂಥ ಪದಗಳನ್ನು ಅನೇಕರು ಬಳಸುತ್ತಾರೆ. ಟೀಕೆ ಮಾಡಲು ನನಗೆ ಹಕ್ಕಿದೆ' ಎಂದೂ ಅವರು ಹೇಳಿದ್ದಾರೆ.

'ನೇಮಕಾತಿ ಪ್ರಕ್ರಿಯೆ– ತಾರ್ಕಿಕ ಅಂತ್ಯಕ್ಕೆ ಒತ್ತಾಯಿಸಲು ಅಭ್ಯರ್ಥಿಗೆ ಹಕ್ಕಿಲ್ಲ'

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಯು ನೇಮಕಾತಿ ಪ್ರಕ್ರಿಯೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು ಎಂದು ಒತ್ತಾಯಿಸುವ ಕಾನೂನುಬದ್ಧ ಹಕ್ಕನ್ನು ಹೊಂದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಹೃಷಿಕೇಶ್ ರಾಯ್ ಅವರನ್ನೊಳಗೊಂಡ ನ್ಯಾಯಪೀಠವು, ಆಯ್ಕೆ ಪಟ್ಟಿಗೆ ತಮ್ಮನ್ನೇ ಸೇರಿಸಬೇಕು ಎಂಬುದರ ಬಗ್ಗೆಯೂ ಅಭ್ಯರ್ಥಿಗೆ ಯಾವುದೇ ಹಕ್ಕು ಇಲ್ಲ ಎಂದು ಹೇಳಿದೆ.

ರಾಜ್ಯ ಕಾರ್ಮಿಕರ ವಿಮಾ ನಿಗಮದಿಂದ ನಡೆಸಲ್ಪಡುವ ಕಾಲೇಜುಗಳಿಗೆ ಸಹ ಪ್ರಾಧ್ಯಾಪಕರ ಹುದ್ದೆಗಳ ಜೊತೆಗೆ ಇತರ ಹುದ್ದೆಗಳನ್ನು ಭರ್ತಿ ಮಾಡಲು 2018ರ ಮಾರ್ಚ್ 1 ರಂದು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ ಜಾಹೀರಾತುಗಳನ್ನು ಹೊರಡಿಸಲಾಗಿತ್ತು. 2018ರ ಮಾರ್ಚ್ 21 ರಂದು ಆಡಳಿತಾತ್ಮಕ ಕಾರಣಗಳಿಗಾಗಿ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕರ ಹುದ್ದೆಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಸೂಚನೆ ನೀಡಲಾಗಿತ್ತು. ಜಾಹೀರಾತಿನ ಪ್ರಕಾರ ಸಹ ಪ್ರಾಧ್ಯಾಪಕರ ಹುದ್ದೆಯನ್ನು ಭರ್ತಿ ಮಾಡಲು ನಿರ್ದೇಶನಗಳನ್ನು ಕೋರಿ ಅರ್ಜಿದಾರರಲ್ಲಿ ಒಬ್ಬರು ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿಯ ಮೊರೆ ಹೋಗಿದ್ದರು. ನ್ಯಾಯಮಂಡಳಿಯು ಅವರ ಪರವಾಗಿ ಆದೇಶವನ್ನು ಜಾರಿಗೊಳಿಸಿತ್ತು.

ಈ ಆದೇಶವನ್ನು ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದ್ದು, ರಿಟ್ ಅರ್ಜಿಯನ್ನು ವಜಾಗೊಳಿಸಿತ್ತು. 45 ದಿನಗಳಲ್ಲಿ ನೇಮಕಾತಿಯನ್ನು ಮುಕ್ತಾಯಗೊಳಿಸುವಂತೆ ಹೈಕೋರ್ಟ್ ನೀಡಿರುವ ನಿರ್ದೇಶನವು ಸಮರ್ಥನೀಯವಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

'ಜಾಹೀರಾತನ್ನು ತಡೆಹಿಡಿಯಲಾಗಿರುವುದರಿಂದ ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿರುವ ಸಾಧ್ಯತೆಯಿದೆ. ಆದ್ದರಿಂದ ಎಲ್ಲಾ ಸಂಬಂಧಿತ ಅಂಶಗಳನ್ನು ಪರಿಗಣಿಸಿ ಎರಡು ತಿಂಗಳ ಅವಧಿಯೊಳಗೆ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ನ್ಯಾಯಪೀಠವು ನಿರ್ದೇಶಿಸಿದೆ.

'777 ಚಾರ್ಲಿ'ಯಲ್ಲಿ ಹುಬ್ಬಳ್ಳಿಯ ಬಾಲ ಕಲಾವಿದೆ ಶಾರ್ವರಿ ಕೂಡ ಮುಖ್ಯ ಭೂಮಿಕೆಯಲ್ಲಿದ್ದಾಳೆ. ಅವಳು ಮೇಕಿಂಗ್ ಆಫ್ '777 ಚಾರ್ಲಿ'ಯ ಒಂದಷ್ಟು ಘಟನೆಗಳನ್ನು ಸ್ವಾರಸ್ಯಕರವಾಗಿ ಹಂಚಿಕೊಂಡಿದ್ದಾಳೆ. ಶಾರ್ವರಿ ಏನೇನು ಹೇಳಿದಳು... ಅವಳ ಮಾತುಗಳಲ್ಲೇ ಓದಲು ನೋಡಿ www.prajavani.net

ಪ್ಯಾನ್ ಇಂಡಿಯಾ ಸ್ಟಾರ್ ಪಟ್ಟ ಬೇಡ!

ಬಹುನಿರೀಕ್ಷಿತ '777 ಚಾರ್ಲಿ' ಸಿನಿಮಾ ಜೂನ್ 10ಕ್ಕೆ ದೇಶದ ಸಾವಿರಕ್ಕೂ ಅಧಿಕ ಪರದೆಗಳಲ್ಲಿ ಬಿಡುಗಡೆಯಾಗುತ್ತಿದೆ. ನಾಲ್ಕೈದು ವರ್ಷದ ಈ ಪಯಣ, ನಿರ್ದೇಶಕ ಕಿರಣ್‌ರಾಜ್ ಜೊತೆಗಿನ ಒಡನಾಟ, ಮುಂದಿನ ಯೋಜನೆಗಳ ಬಗ್ಗೆ ನಟ ರಕ್ಷಿತ್ ಶೆಟ್ಟಿ ಸಿನಿಮಾ ಪುರವಣಿ ಜೊತೆ ಮಾತಿಗಿಳಿದು ಹೀಗೆಂದರು...

[777 ಚಾರ್ಲಿ | ರಕ್ಷಿತ್ ಶೆಟ್ಟಿ]

ಅಭಿಲಾಷ್ ಪಿ.ಎಸ್.

● '777 ಚಾರ್ಲಿ'ಯ ರಕ್ಷಿತ್ ಉಳಿದ ಚಿತ್ರಗಳಿಗಿಂತ ಹೇಗೆ ಭಿನ್ನ?

ಐ ಲವ್ ಫಿಲ್ಮ್ ಮೇಕಿಂಗ್... ಹೀಗಾಗಿ ಸಾಮಾನ್ಯವಾಗಿ ನಾನು ಒಂದು ಸಿನಿಮಾ ಮಾಡಬೇಕಾದರೆ ಎಲ್ಲ ವಿಭಾಗಗಳಲ್ಲೂ ಬಹಳಷ್ಟು ತೊಡಗಿಸಿಕೊಳ್ಳುತ್ತೇನೆ. 'ಗೋಧಿ ಬಣ್ಣ', 'ವಾಸ್ತು ಪ್ರಕಾರ' ಬಿಟ್ಟು ಉಳಿದೆಲ್ಲವೂ ನಾನು ಬರೆದ ಕಥೆಯೇ ಆಗಿದ್ದವು. ಹೀಗಾಗಿ ತಂಡದಲ್ಲಿ ನನ್ನ ಪಾತ್ರವೂ ಅಷ್ಟೇ ಮುಖ್ಯವಾಗಿತ್ತು. ಆದರೆ ಕೆಲ ವರ್ಷದ ಹಿಂದೆ ನನ್ನೊಳಗಿನ ನನ್ನನ್ನು ಹುಡುಕಲು ಸಿನಿಮಾದಿಂದ ಒಂದು ಬ್ರೇಕ್ ಅಗತ್ಯವಿತ್ತು. ಇದಕ್ಕೆ ಕಾರಣ ವೈಯಕ್ತಿಕ. ಈ ಸಂದರ್ಭದಲ್ಲಿ 777 ಚಾರ್ಲಿ ಸಿನಿಮಾ ಸಿಕ್ಕಿತು. ಈ ಸಿನಿಮಾದಲ್ಲಿ ನಾನು ಕಿರಣ್‌ರಾಜ್ ಹೇಳಿಕೊಟ್ಟ ನಟನೆಯನ್ನಷ್ಟೇ ಮಾಡಿದ್ದೇನೆ.

● ಈ ಚಾರ್ಲಿ ಪಯಣವನ್ನು ಒಮ್ಮೆ ಮೆಲುಕು ಹಾಕಿದರೆ...

'ಉಳಿದವರು ಕಂಡಂತೆ' ಸಿನಿಮಾ ನನ್ನ ಸಿನಿ ಪಯಣದ ಆರಂಭದ ಹೆಜ್ಜೆ, 'ಕಿರಿಕ್ ಪಾರ್ಟಿ' ಗೆಲುವು ನನಗೆ ಅಗತ್ಯವಾಗಿತ್ತು, 'ಅವನೇ ಶ್ರೀಮನ್ನಾರಾಯಣ' ನನ್ನ ಕಲಿಕೆ, '777 ಚಾರ್ಲಿ' ಸಿನಿಮಾದಲ್ಲಿ ಭಾವನಾತ್ಮಕವಾಗಿ ನಾನು ಬಹಳಷ್ಟು ಕಲಿತಿದ್ದೇನೆ. ಒಂದು ರೀತಿ ಜೀವನ ವೃತ್ತ ಪೂರ್ಣಗೊಳಿಸಿದಂತೆ. ಚಾರ್ಲಿ ಪಯಣ ವಿಭಿನ್ನ. ಈ ಚಿತ್ರದ ಮೊದಲಾರ್ಧ ಚಿತ್ರೀಕರಿಸುವಾಗ ಜೊತೆಯಾಗಿ 'ಅವನೇ ಶ್ರೀಮನ್ನಾರಾಯಣ' ಶೂಟಿಂಗ್‌ನಲ್ಲೂ ತೊಡಗಿದ್ದೆ. ಈ ಎರಡೂ ಸಿನಿಮಾದಲ್ಲಿರುವ 'ರಕ್ಷಿತ್' ಪಾತ್ರ ತದ್ವಿರುದ್ಧ. ಚಾರ್ಲಿಯ ದ್ವಿತೀಯಾರ್ಧದ ಚಿತ್ರೀಕರಣದ ವೇಳೆ ಕೋವಿಡ್ ಕಾಡಿತು. ಪರಿಸ್ಥಿತಿ ತಿಳಿಯಾದ ಬಳಿಕ ಮತ್ತೆ ಚಿತ್ರೀಕರಣಕ್ಕೆ ಹೋದಾಗ 'ಧರ್ಮ'ನ ಪಾತ್ರದೊಳಗೆ ಮತ್ತಷ್ಟು ಇಳಿದಿದ್ದೆ. ಇಲ್ಲಿಂದ ಗೋವಾ, ಪಂಜಾಬ್, ರಾಜಸ್ಥಾನ ಹಾಗೂ ಕಾಶ್ಮೀರದವರೆಗಿನ ಪಯಣ ಅದ್ಭುತ.

● ನಿರ್ದೇಶಕ ಕಿರಣ್‌ರಾಜ್ ನಿಮ್ಮನ್ನು ದುಡಿಸಿಕೊಂಡ ಬಗೆ..

ಹತ್ತನೇ ತರಗತಿ ಮುಗಿಸಿ, ಫಿಲ್ಮ್ ಮೇಕರ್ ಆಗುವ ಕನಸು ಕಂಡಾತ ಕಿರಣ್‌ರಾಜ್. ಈ ಕನಸಿಗಾಗಿ ಮನೆ ಬಿಟ್ಟು ಬಂದು ಮಂಗಳೂರಿನ ಬಾರ್ ಒಂದರಲ್ಲಿ ವೇಟರ್ ಆಗಿ, ಆಸ್ಪತ್ರೆಯಲ್ಲಿ ವಾಚ್‌ಮನ್ ಆಗಿ, ಸೇಲ್ಸ್‌ಮನ್ ಆಗಿ ಕೊನೆಗೆ ಬೆಂಗಳೂರಿಗೆ ಬಂದು ಸಹಾಯಕ ನಿರ್ದೇಶಕನಾಗಿ ಬೆಳೆದವನು. ಇಂಥ ಜೀವನ ಅನುಭವಿಸಿದವನಿಗಷ್ಟೇ ಈ ಭಾವನೆಗಳನ್ನು ಕಟ್ಟಲು ಸಾಧ್ಯ. 'ನಿನ್ನ ಬಳಿ ಕೆಲಸ ಮಾಡಿದ ಅತ್ಯುತ್ತಮ ಸಹಾಯಕ ನಿರ್ದೇಶಕ ಯಾರು?' ಎಂದು ರಿಷಬ್ ಶೆಟ್ಟಿ ಬಳಿ ಕೇಳಿದರೆ ಆತ ಹೇಳುವ ಉತ್ತರ ಕಿರಣ್‌ರಾಜ್.

ಈತ ಪೂರ್ಣ ಬದ್ಧತೆಯಿಂದ ಸಿನಿಮಾ ಮಾಡುತ್ತಾನೆ. ಇದು ಕಿರಣ್‌ರಾಜ್ ನನ್ನ ಬಳಿ ಬಂದು ಈ ಕಥೆ ಹೇಳಿದಾಗಲೇ ನನಗೆ ತಿಳಿದಿತ್ತು. ಆತನ ಈ ಬದ್ಧತೆ 'ಹುಚ್ಚು' ಎನ್ನುವಷ್ಟೇ ಇದೆ. ಆತನ ತಲೆಯಲ್ಲಿ ಏನಿದೆಯೋ ಅದೇ ದೃಶ್ಯ ಸೆರೆಯಾಗಬೇಕು. ಇಲ್ಲವಾದರೆ ರಿಟೇಕ್...ರಿಟೇಕ್.. ಚಾರ್ಲಿ ಸಿನಿಮಾದಲ್ಲಿ ಕೆಲಸ ಮಾಡಿದ ಯಾರನ್ನೇ ಕೇಳಿ, 'ಕಿರಣ್‌ರಾಜ್‌ನಷ್ಟು ದೊಡ್ಡ ಟಾರ್ಚರ್ ಬೇರೆ ಯಾರೂ ಇಲ್ಲ' ಎಂದು ಖಂಡಿತಾ ಹೇಳುತ್ತಾರೆ. (ನಗುತ್ತಾ) ನಾನೂ ಆ ಟಾರ್ಚರ್ ಅನುಭವಿಸಿದ್ದೇನೆ. ಆದರೆ, ನನಗೆ ಆತನಿಗೆ ಸಿನಿಮಾ ಮೇಲಿದ್ದ ಪ್ರೀತಿ ಹಾಗೂ ಬದ್ಧತೆಯಷ್ಟೇ ಕಂಡಿತು. ನನ್ನ ಬಳಿಯೇ ಸಹಾಯಕ ನಿರ್ದೇಶಕನಾಗಿದ್ದ ಕಿರಣ್‌ರಾಜ್ ಅವರಿಂದ ಬಹಳಷ್ಟು ಕಲಿತಿದ್ದೇನೆ. ಇದು ಸಂಪೂರ್ಣವಾಗಿ ಕಿರಣ್‌ರಾಜ್ ಸಿನಿಮಾ.

● ರಿಷಬ್ ಶೆಟ್ಟಿ ಸಾಲು ಸಾಲು ಸಿನಿಮಾ ಮಾಡುತ್ತಿದ್ದಾರೆ... ನೀವು ನಿಧಾನವೇ ಪ್ರಧಾನ ಎನ್ನುವಂತಿದೆ...

ರಿಷಬ್ ಯಾವತ್ತೂ ಕುದುರೆಯ ಮೇಲೆ ಕುಳಿತಿರುತ್ತಾರೆ. ಅದು ಅವರ ಕಾರ್ಯವೈಖರಿ. 'ಕಿರಿಕ್ ಪಾರ್ಟಿ' ನಂತರ ಸಿನಿಮಾದ ಬಗ್ಗೆ ಮತ್ತಷ್ಟು ಕಲಿಯಬೇಕು ಎಂಬ ಹುಚ್ಚುತನವಿತ್ತು. ಹೀರೊ ಆಗಬೇಕು ಎಂದು ನಾನು ಚಿತ್ರರಂಗಕ್ಕೆ ಬಂದಿದ್ದು. ನಾನು ಮಾಡಬೇಕಾಗಿದ್ದ ಪಾತ್ರಗಳನ್ನು ಯಾರೂ ಬರೆಯುತ್ತಿಲ್ಲವಲ್ಲ ಎಂಬ ಕಾರಣಕ್ಕೆ ನಾನು ಕಥೆ ಬರೆದೆ, ನಿರ್ದೇಶಕನಾದೆ. ಇಂಥ ಒಂದು ಅದ್ಭುತವಾದ ಮಾಧ್ಯಮದ ಮುಖಾಂತರ ಕಥೆಗಳನ್ನು ಹೇಳಬಹುದಲ್ಲವೇ ಎಂದು ನಿರ್ದೇಶನದತ್ತ ಮತ್ತಷ್ಟು ಆಕರ್ಷಿತನಾದೆ.

ಆರು ವರ್ಷಗಳಲ್ಲಿ ಎರಡೇ ಸಿನಿಮಾ ಮಾಡಿದ್ದೇನೆ. 'ಅವನೇ ಶ್ರೀಮನ್ನಾರಾಯಣ' ಸಿನಿಮಾ ಬಳಿಕ ತಮಿಳು, ತೆಲುಗು ಚಿತ್ರರಂಗದಿಂದಲೂ ನನಗೆ ಆಫರ್‌ಗಳು ಬಂದಿವೆ. ಆದರೆ ಯಾವ ಸಿನಿಮಾಗಳನ್ನು ಮಾಡಬೇಕು ಎನ್ನುವ ಲೈನ್‌ಅಪ್ ನನಗೆ ಗೊತ್ತು. 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರೀಕರಣ ನಡೆಯುತ್ತಿದೆ. ಇದಾದ ಬಳಿಕ ಕ್ರಮವಾಗಿ, 'ರಿಚರ್ಡ್ ಆ್ಯಂಟನಿ', 'ಕಿರಿಕ್ ಪಾರ್ಟಿ–2', 'ಮಿಡ್ ವೇ ಟು ಮೋಕ್ಷ' ಹಾಗೂ 'ಪುಣ್ಯಕೋಟಿ' ಸಿನಿಮಾ ಕೈಗೆತ್ತಿಕೊಳ್ಳಲಿದ್ದೇನೆ. ಇದನ್ನು ಬಿಟ್ಟರೆ ಬೇರೆ ಯಾವ ಸಿನಿಮಾಗಳನ್ನೂ ಮಾಡುವುದಿಲ್ಲ. ಈ ಸಿನಿಮಾ ಮುಗಿಸಿದ ಬಳಿಕವಷ್ಟೇ ಮುಂದಿನದನ್ನು ಯೋಚಿಸುತ್ತೇನೆ. ನಟನೆಯಿಂದ ಸಂಪೂರ್ಣ ನಿವೃತ್ತಿಯಂತೂ ತೆಗೆದುಕೊಳ್ಳುವುದಿಲ್ಲ. ❖

● ಚಾರ್ಲಿ ಮೂಲಕ ರಕ್ಷಿತ್ ಶೆಟ್ಟಿ ಅಧಿಕೃತವಾಗಿ ಪ್ಯಾನ್ ಇಂಡಿಯಾ ಸ್ಟಾರ್ ಆಗುತ್ತಿದ್ದಾರೆ...

ಇದ್ಯಾವುದೂ ನನ್ನ ಗಮನದಲ್ಲಿ ಇಲ್ಲ. ಚಾರ್ಲಿ ಸಿನಿಮಾದ ಕಥೆಗೆ ಮಾರುಕಟ್ಟೆ ಇರುವ ಕಾರಣ ಈ ಸಿನಿಮಾವನ್ನು ಪ್ಯಾನ್ ಇಂಡಿಯಾ ಬಿಡುಗಡೆ ಮಾಡುತ್ತಿದ್ದೇವೆ. ಇನ್ನು ಹತ್ತು ಹದಿನೈದು ವರ್ಷ ಚಾರ್ಲಿ ರೀತಿಯ ಇನ್ನೊಂದು ಸಿನಿಮಾ ಮಾಡಲು ಸಾಧ್ಯವಿಲ್ಲ. 167 ದಿನ ಒಂದು ನಾಯಿಯ ಜೊತೆ ಇದ್ದುಕೊಂಡು ಚಿತ್ರೀಕರಣ ನಡೆಸುವುದು ಸುಲಭವಲ್ಲ. ನಾನು ಎಲ್ಲ ಸಿನಿಮಾವನ್ನೂ ಪ್ಯಾನ್ ಇಂಡಿಯಾ ಮಾಡಬೇಕು ಎಂದು ಹೊರಡುವುದಿಲ್ಲ. 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಪ್ಯಾನ್ ಇಂಡಿಯಾ ಬಿಡುಗಡೆ ಮಾಡುವ ಯೋಚನೆಯೇ ಇಲ್ಲ. ಆದರೆ ಬಿಡುಗಡೆ ಸಂದರ್ಭದಲ್ಲಿ ಸಿನಿಮಾವನ್ನು ವಿತರಕರಿಗೆ ತೋರಿಸುತ್ತೇವೆ. ಅವರ ಮಾರುಕಟ್ಟೆಯಲ್ಲಿ ಈ ಸಿನಿಮಾ ಓಡುತ್ತದೆ ಎನ್ನುವ ನಂಬಿಕೆ ಅವರಿಗಿದ್ದರೆ ಕೊಡುತ್ತೇವೆ. ಪ್ಯಾನ್ ಇಂಡಿಯಾ ಸ್ಟಾರ್ ಎನ್ನುವ ಪಟ್ಟ ನನಗೆ ಬೇಕಾಗಿಲ್ಲ.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

'ವಿಜಯದಶಮಿ' ರಾಘು ಹೊಸ ಪ್ರಯೋಗ

ಕಿರುತೆರೆ

ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ ಹೊಸ ಧಾರಾವಾಹಿ ನಿರ್ಮಾಣಕ್ಕೆ ಮುಂದಾಗಿದ್ದಾರೆ. 'ವಿಜಯದಶಮಿ' ಧಾರಾವಾಹಿಯ ಚಿತ್ರೀಕರಣಕ್ಕೆ ಬೆಂಗಳೂರಿನ ಸ್ಯಾಂಕಿ ಆಂಜನೇಯ ದೇವಸ್ಥಾನದಲ್ಲಿ ಇತ್ತೀಚೆಗೆ ಮುಹೂರ್ತ ನೆರವೇರಿತು.

ಧಾರಾವಾಹಿಯನ್ನು ಶಶಿಧರ ಎಸ್. ಕುಂದಾಪುರ ನಿರ್ದೇಶಿಸುತ್ತಿದ್ದಾರೆ.

ವಿಜಯದಶಮಿಯಲ್ಲಿ ಏನಿದೆ?

'ವಿಜಯ– ದಶಮಿ ಎರಡು ಪಾತ್ರಗಳ ಹೆಸರು. ವಿಹಾನ್ ನಾಯಕ. ವೈಭವಿ ಈಶ್ವರ್ ನಾಯಕಿ. ಧಾರಾವಾಹಿಯ ಕಥೆ ವಾರಾಣಸಿಯಿಂದ ಆರಂಭವಾಗುತ್ತದೆ. ಬಳಿಕ ಬೆಂಗಳೂರು, ತೀರ್ಥಹಳ್ಳಿ, ಶಿವಮೊಗ್ಗ ಮುಂತಾದ ಕಡೆ ಚಿತ್ರೀಕರಣ ನಡೆಯಲಿದೆ. ಸಾಕಷ್ಟು ಸಾಹಸ ದೃಶ್ಯಗಳು ಈ ಧಾರಾವಾಹಿಯಲ್ಲಿ ಇರಲಿವೆ. ಇಲ್ಲಿ ನಾಯಕಿಯೂ ಹೊಡೆದಾಡುವ ದೃಶ್ಯವಿದೆ. ನೀರಿನೊಳಗೆ ಹೊಡೆದಾಡುವ ದೃಶ್ಯದೊಂದಿಗೆ ನಾಯಕಿಯ ಪ್ರವೇಶವಾಗುತ್ತದೆ' ಎಂದರು ನಿರ್ದೇಶಕ ಶಶಿಧರ.

'ಧಾರಾವಾಹಿಯಲ್ಲಿ ಅದ್ದೂರಿತನವಿದೆ. ಪಾತ್ರದಿಂದ ಪಾತ್ರಕ್ಕೆ ವೇಷಭೂಷಣಗಳಲ್ಲಿ ಸಾಕಷ್ಟು ವ್ಯತ್ಯಾಸ ಕಾಣಬಹುದು. ಒಳ್ಳೆಯ ಕಂಟೆಂಟ್ ಇದೆ. ವೀಕ್ಷಕರು ಈ ಧಾರಾವಾಹಿಯನ್ನು ಸ್ವೀಕರಿಸುವ ಭರವಸೆ ಇದೆ' ಎಂದು ಅವರು ಆಶಯ ವ್ಯಕ್ತಪಡಿಸಿದರು.

ರಾಘವೇಂದ್ರ ರಾಜ್‌ಕುಮಾರ್ ಮಾತನಾಡಿ, 'ಧಾರಾವಾಹಿ ನಿರ್ಮಾಣ ಬರೀ ವ್ಯಾಪಾರ ಅಲ್ಲ. ಇದು ಒಂದು ವಿಚಾರ ಅಷ್ಟೇ. ಮೊದಲಿನಿಂದಲೂ ನಾವು ಒಂದು ಪರಂಪರೆಯನ್ನು ಹೊಂದಿದ್ದೇವೆ. ನಾವು ಅಭಿನಯಿಸುವುದಷ್ಟೇ ಅಲ್ಲ. ಇನ್ನೂ ನೂರಾರು ಜನರಿಗೆ ಕೆಲಸ ಕೊಡುವ ಅವಕಾಶಗಳನ್ನು ಸೃಷ್ಟಿಸಬೇಕು. ಆ ಆಶಯವನ್ನು ಮುಂದುವರಿಸಿದ್ದೇವೆ. ಇಲ್ಲಿಯೂ ನೂರಾರು ಜನ ಕೆಲಸ ಮಾಡುತ್ತಾರೆ. ಎಲ್ಲರಿಗೂ ಒಂದು ಅವಕಾಶ ಸಿಗುತ್ತದೆ. ಮುಂದೆ ಇದೇ ನಮ್ಮನ್ನು ಕರೆದುಕೊಂಡು ಹೋಗುತ್ತದೆ' ಎಂದು ಹೇಳಿದರು.

'ಜೂನ್ ಕೊನೆಯ ವಾರದಲ್ಲಿ ಈ ಧಾರಾವಾಹಿ ಸಿರಿ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ' ಎಂದು ನಿರ್ದೇಶಕ ಶಶಿಧರ ಹೇಳಿದರು. ❖

ವೈಭವಿ, ವಿಹಾನ್

ತೆರೆ ಮೇಲೆ ಕಂಬಳ ವೀರರ ಓಟ

ಸಿನಿ ಸಂಕ್ಷಿಪ್ತ

ಕರಾವಳಿಯ ಜನಪದ ಕ್ರೀಡೆ ಕಂಬಳದ ಕುರಿತ ಚಿತ್ರ ಕನ್ನಡ, ತುಳು ಭಾಷೆಗಳಲ್ಲಿ ಮೂಡಿಬರಲಿದೆ. 'ವೀರ ಕಂಬಳ' ಈ ಚಿತ್ರದ ಹೆಸರು. ಎಸ್.ವಿ.ರಾಜೇಂದ್ರಸಿಂಗ್ ಬಾಬು ಈ ಚಿತ್ರದ ನಿರ್ದೇಶಕರು. ಅರುಣ್ ರೈ ತೋಡಾರ್ ನಿರ್ಮಾಣ ಮಾಡುತ್ತಿದ್ದಾರೆ.

'ವೀರ ಕಂಬಳ' ರಾಜೇಂದ್ರ ಸಿಂಗ್ ಬಾಬು ತಲೆಗೆ ಹೊಳೆದದ್ದು ಹೇಗೆ ಅನ್ನುವುದನ್ನು ಅವರದೇ ಮಾತಿನಲ್ಲಿ ಕೇಳಿ.

'ನಾನು ವಾರಪತ್ರಿಕೆಯೊಂದರಲ್ಲಿ ಕಂಬಳದ ಕುರಿತ ಬರಹಗಳನ್ನು ಓದುತ್ತಿದ್ದೆ. ಆ ಪತ್ರಿಕೆಯ ಮುಖ್ಯಸ್ಥರು ನನಗೆ ಪರಿಚಯ. ಅವರಿಂದ ಕಂಬಳದ ಬಗೆಗಿನ ಲೇಖನಗಳನ್ನು ತರಿಸಿಕೊಂಡು ಓದಿ, ಇದರ ಬಗ್ಗೆ ಸಿನಿಮಾ ಮಾಡಬೇಕೆಂದು ನಿರ್ಧರಿಸಿದೆ. ನಂತರ ತುಳು ನಟ, ನಿರ್ದೇಶಕ ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ಅವರಿಂದಲೂ ಕಂಬಳದ ಬಗ್ಗೆ ಸಾಕಷ್ಟು ಮಾಹಿತಿ ದೊರಕಿತು. ಮೂಡುಬಿದಿರೆ ಬಳಿ ಇದಕ್ಕಾಗಿ ದೊಡ್ಡ ಕಂಬಳದ ಮೈದಾನ ಸಿದ್ಧವಾಯಿತು. ಇಪ್ಪತ್ತು ಜೊತೆ ಕೋಣ. ಒಂದು ಕೋಣ ನೋಡಿಕೊಳ್ಳಲು ನಾಲ್ಕು ಜನ. ಸಹ ಕಲಾವಿದರು ಸೇರಿದಂತೆ ಸುಮಾರು 500ಕ್ಕೂ ಹೆಚ್ಚು ಜನ ಒಂದು ದಿನದ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದರು. ಕೋಣಗಳ ಮೂಡ್ ನೋಡಿಕೊಂಡು ಚಿತ್ರೀಕರಿಸಬೇಕಿತ್ತು. ಒಂದು ಸಲ ಓಟದ ಶಾಟ್ ತೆಗೆದರೆ, ಸುಮಾರು ಒಂದು ಗಂಟೆ ವಿಶ್ರಾಂತಿ. ನಂತರ ಚಿತ್ರೀಕರಣ. ಈ ಚಿತ್ರಕ್ಕೆ ಕಥೆಯೇ ಹೀರೊ' ಎಂದರು.

'ಕೋಣಗಳನ್ನು ಓಡಿಸುವುದರಲ್ಲಿ ಪ್ರಸಿದ್ಧರಾಗಿರುವ ಶ್ರೀನಿವಾಸ ಗೌಡ ಹಾಗೂ ನಾಟಕ ಕಲಾವಿದ ಸ್ವರಾಜ್ ಶೆಟ್ಟಿ ಕೋಣ ಓಡಿಸುವವರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿಶೇಷ ಪಾತ್ರದಲ್ಲಿ ಆದಿತ್ಯ ಅಭಿನಯಿಸಿದ್ದಾರೆ. ರಾಧಿಕಾ ಚೇತನ್ ಪೊಲೀಸ್ ಕಮಿಷನರ್ ಆಗಿ ಕಾಣಿಸಿಕೊಂಡಿದ್ದಾರೆ. ನವೀನ್ ಡಿ. ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಂಜೂರು ಸೇರಿದಂತೆ ಪ್ರಸಿದ್ಧ ತುಳು ನಟರು ಈ ಚಿತ್ರದಲ್ಲಿದ್ದಾರೆ' ಎಂದರು ರಾಜೇಂದ್ರ ಸಿಂಗ್ ಬಾಬು.

'ಸ್ವಲ್ಪ ಭಾಗ ಚಿತ್ರೀಕರಣ ಮಾತ್ರ ಬಾಕಿಯಿದೆ. ಖ್ಯಾತ ನಟ ಪ್ರಕಾಶ್ ರಾಜ್ ಅಭಿನಯಿಸಲಿದ್ದಾರೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ 'ವೀರ ಕಂಬಳ' ನಿಮ್ಮ ಮುಂದೆ ಬರಲಿದೆ. ಈ ಚಿತ್ರಕ್ಕೆ ಮಣಿಕಾಂತ್ ಕದ್ರಿ ಸಂಗೀತ ನೀಡಿದ್ದಾರೆ. ಗಿರಿ ಈ ಚಿತ್ರದ ಛಾಯಾಗ್ರಾಹಕರು. ಈ ಚಿತ್ರ ತೆಲುಗು, ತಮಿಳು, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಿಗೆ ಡಬ್ ಆಗಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಡುಗಡೆಗೆ ಸಿದ್ಧತೆ ನಡೆಯುತ್ತಿದೆ. ವಿದೇಶಗಳಲ್ಲಿ ಪ್ರೀಮಿಯರ್ ಷೋ ನಡೆಸುವ ಯೋಜನೆಯಿದೆ' ಎಂದೂ ಹೇಳಿದರು.

'ನನಗೆ ತುಳು ಚಿತ್ರದಲ್ಲಿ ಅಭಿನಯಿಸುವ ಆಸೆ ಮೊದಲಿನಿಂದಲೂ ಇತ್ತು. ಏಕೆಂದರೆ ನನ್ನ ಅಜ್ಜಿ ಹಾಗೂ ಅಮ್ಮ ಇಬ್ಬರೂ ದಕ್ಷಿಣ ಕನ್ನಡದವರು. ನಾನು ಚಿತ್ರದಲ್ಲಿ ಅಭಿನಯಿಸುವ ವಿಷಯ ನನಗೆ ಗೊತ್ತಿರಲಿಲ್ಲ. ನಿರ್ಮಾಪಕರ ಕೋರಿಕೆಯಂತೆ ವಿಭಿನ್ನ ಪಾತ್ರದಲ್ಲಿ ಅಭಿನಯಿಸಿದ್ದೇನೆ' ಎಂದರು ನಟ ಆದಿತ್ಯ.

ವಿಜಯಕುಮಾರ್ ಕೊಡಿಯಾಲ್‌ಬೈಲ್ ಅವರು ಮೊದಲ ಬಾರಿ ಕನ್ನಡದಲ್ಲಿ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಚಿತ್ರಕ್ಕೆ ಆರ್. ಗಿರಿ ಛಾಯಾಗ್ರಹಣವಿದೆ. ಶ್ರೀನಿವಾಸ್ ಆರ್. ಬಾಬು ಸಂಕಲನವಿದೆ. ❖

ಆದಿತ್ಯ, ರಾಧಿಕಾ ಚೇತನ್



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನೀವು ಪವಿತ್ರವಾದ ಪದಗಳನ್ನು ಎಷ್ಟೊಂದು ಓದಿದರೂ ಮಾತನಾಡಿದರೂ ಅವುಗಳನ್ನು ಅನುಸರಿಸದೇ ಹೋದರೆ ಪ್ರಯೋಜನವೇನು?

–ಗೌತಮ ಬುದ್ಧ

ವಿಭಜನೆಯ ಯತ್ನ ನಿಲ್ಲಿಸಿ ಸಾಮರಸ್ಯಕ್ಕೆ ಒತ್ತು ನೀಡಿ

ದೇಶದ ವಿವಿಧ ಕಡೆಗಳಲ್ಲಿ ಪ್ರಾರ್ಥನಾ ಸ್ಥಳಗಳ ವಿಚಾರದಲ್ಲಿ ವಿವಾದಗಳನ್ನು ಸೃಷ್ಟಿಸಲು ನಡೆಯುತ್ತಿರುವ ಪ್ರಯತ್ನಗಳು ಸಾಮಾಜಿಕ ಹಾಗೂ ರಾಜಕೀಯ ವಿಭಜನೆಯ ಉದ್ದೇಶ ಹೊಂದಿವೆ. ಸಮಾಜದಲ್ಲಿ ಗೊಂದಲ ನಿರ್ಮಾಣ ಮಾಡುವ ಉದ್ದೇಶವೂ ಇಂತಹ ಯತ್ನಗಳ ಹಿಂದೆ ಇದೆ. ದೇಶದ ಧರ್ಮನಿರಪೇಕ್ಷ ವ್ಯವಸ್ಥೆಗೆ ಧಕ್ಕೆ ಉಂಟುಮಾಡುವ ಉದ್ದೇಶವೂ ಇದೆ. ಧರ್ಮನಿರಪೇಕ್ಷ ತತ್ವವು ನಮ್ಮ ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದು ಎಂಬುದನ್ನು ಮರೆಯಬಾರದು. ಈ ಎಲ್ಲ ಯತ್ನಗಳು 1991ರ ಪೂಜಾ ಸ್ಥಳಗಳ ಕಾಯ್ದೆಯ ಉಲ್ಲಂಘನೆಯೂ ಹೌದು. ಯಾವುದೇ ಪೂಜಾ ಸ್ಥಳದ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಹೇಗಿತ್ತೋ ಆ ರೀತಿಯಲ್ಲಿಯೇ ಅದನ್ನು ಕಾಯ್ದುಕೊಂಡು ಹೋಗುವ ಉದ್ದೇಶವನ್ನು ಈ ಕಾಯ್ದೆ ಹೊಂದಿದೆ. ಆ ಧಾರ್ಮಿಕ ಸ್ವರೂಪವನ್ನು ಬದಲಾಯಿಸುವುದನ್ನು ಈ ಕಾಯ್ದೆಯು ನಿಷೇಧಿಸಿದೆ. ವಾರಾಣಸಿಯ ಜ್ಞಾನವಾಪಿ ಮಸೀದಿ, ಮಥುರಾದ ಶಾಹಿ ಈದ್ಗಾ ಮಸೀದಿ ಮತ್ತು ಇತರ ಕೆಲವು ಪ್ರದೇಶಗಳಲ್ಲಿನ ಶ್ರದ್ಧಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಈಗ ಅಭಿಯಾನ ನಡೆದಿದೆ. ತಕರಾರು ಅರ್ಜಿಗಳನ್ನು ಸಲ್ಲಿಸಲಾಗಿದೆ. ಕೋಮು ವಿಷದಿಂದ, ಇತಿಹಾಸದ ತಿರುಚುವಿಕೆಯಿಂದ ಮತ್ತು ಕಾನೂನನ್ನು ತಪ್ಪಾಗಿ ಅರ್ಥೈಸುವುದರಿಂದ ವಾತಾವರಣ ಕಲುಷಿತವಾಗಿರುವ ಹೊತ್ತಿನಲ್ಲಿ ಕೆಲವು ಬೇಡಿಕೆಗಳ ವಿಚಾರವಾಗಿ ನ್ಯಾಯ ನಿರ್ಣಯ ಪ್ರಕ್ರಿಯೆಯೂ ಶುರುವಾಗಿದೆ.

ಪೂಜಾ ಸ್ಥಳದ ಧಾರ್ಮಿಕ ಸ್ವರೂಪ ಕಾಯ್ದುಕೊಳ್ಳುವ ವಿಷಯದಲ್ಲಿ ಈಗಿರುವ ಕಾನೂನನ್ನು ಎತ್ತಿಹಿಡಿಯಬೇಕಾದ ಹೊಣೆಗಾರಿಕೆ ಸರ್ಕಾರದ ಮೇಲಿದೆ

ಬಾಬರಿ ಮಸೀದಿ ಹೊರತುಪಡಿಸಿ ಇತರ ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಯಾವ ಬಗೆಯಲ್ಲಿ ಇತ್ತೋ, ಅದನ್ನೇ ಮುಂದುವರಿಸಲು ತೀರ್ಮಾನಿಸುವ ಮೂಲಕ 'ಪೂಜಾ ಸ್ಥಳಗಳ ಕಾಯ್ದೆ'ಯು ಇಂತಹ ವಿಭಜನಕಾರಿ ವಿವಾದಗಳನ್ನು ಕೊನೆಗೊಳಿಸಲು ಬಯಸಿತ್ತು. ಈ ಕಾಯ್ದೆಯು ಈ ನೆಲದ ಕಾನೂನು. ಈಗ ವಿವಾದದ ಕೇಂದ್ರ ಆಗಿರುವ ಸ್ಥಳಗಳೂ ಸೇರಿದಂತೆ ಹಿಂದುತ್ವವಾದಿ ಸಂಘಟನೆಗಳು ಈಗ ತಮ್ಮದು ಎಂದು ಹೇಳಿಕೊಳ್ಳುತ್ತಿರುವ ಎಲ್ಲ ಸ್ಥಳಗಳಿಗೂ ಇದು ಅನ್ವಯವಾಗುತ್ತದೆ. ಬಾಬರಿ ಮಸೀದಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2019ರ ತೀರ್ಪಿನಲ್ಲಿ ಈ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿದಿದೆ. ಮಸೀದಿಯನ್ನು ಧ್ವಂಸಗೊಳಿಸಿದ್ದನ್ನು ನ್ಯಾಯಾಲಯವು ಕ್ರಿಮಿನಲ್ ಅಪರಾಧ ಎಂದು ಕರೆದಿದೆ. 'ಈ ಕಾಯ್ದೆಯನ್ನು ರೂಪಿಸುವ ಮೂಲಕ ಸರ್ಕಾರವು ದೇಶದ ಸಂವಿಧಾನದ ಮೂಲ ಸ್ವರೂಪಗಳಲ್ಲಿ ಒಂದಾಗಿರುವ ಧರ್ಮನಿರಪೇಕ್ಷತೆ, ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುವುದನ್ನು ಎತ್ತಿಹಿಡಿಯುವ ತನ್ನ ಸಾಂವಿಧಾನಿಕ ಕರ್ತವ್ಯವನ್ನು ಕ್ರಿಯಾರೂಪಕ್ಕೆ ತಂದಿದೆ, ಸಾಂವಿಧಾನಿಕ ಬದ್ಧತೆಯೊಂದನ್ನು ಜಾರಿಗೊಳಿಸಿದೆ' ಎಂದು ಆ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ.

ಈಗ ನಡೆದಿರುವ ಪ್ರಯತ್ನಗಳು ಕೋಮು ದ್ವೇಷದಿಂದ ಪ್ರೇರಿತವಾಗಿವೆ. ದೇಶದ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ತೊಂದರೆ ಕೊಡಬೇಕು, ಅವರನ್ನು ಅವಮಾನಿಸಬೇಕು ಎಂಬ ಬಯಕೆಯನ್ನು ಹೊಂದಿವೆ. ಅಲ್ಪಸಂಖ್ಯಾತ ಸಮುದಾಯವನ್ನು ಅಂಕೆಯಲ್ಲಿ ಇಟ್ಟುಕೊಳ್ಳಬೇಕು ಹಾಗೂ ಆ ಸಮುದಾಯವನ್ನು ಮುಖ್ಯವಾಹಿನಿಯಿಂದ ಹೊರಗೆ ಇರಿಸಬೇಕು ಎನ್ನುವ ಉದ್ದೇಶ ಹೊಂದಿವೆ. ವರ್ತಮಾನದಲ್ಲಿ ನಿಂತು ಇತಿಹಾಸವನ್ನು ಬದಲಾಯಿಸಲು ಹೊರಡುವುದು ತಪ್ಪು. ಹಿಂದೆ ನಡೆದ ಅತಿರೇಕದ ವರ್ತನೆಗಳನ್ನು ಈಗ ಮತ್ತೆ ಅದೇ ಬಗೆಯ ಅತಿರೇಕಗಳ ಮೂಲಕ ಸರಿಪಡಿಸಲು ಆಗದು. ಇತಿಹಾಸದಲ್ಲಿ ಹತ್ತು ಹಲವು ತಪ್ಪುಗಳು ಆಗಿರಬಹುದು. ಅವುಗಳನ್ನು ವರ್ತಮಾನದಲ್ಲಿ ಸರಿಪಡಿಸಲು ಆಗುವುದಿಲ್ಲ. ಇತಿಹಾಸದ ತಪ್ಪುಗಳನ್ನು ಕಂಡು ಪಾಠ ಕಲಿಯಬೇಕು, ಅವುಗಳು ಮರುಕಳಿಸದಂತೆ ನೋಡಿಕೊಳ್ಳಬೇಕು. ಈಗ ನಡೆದಿರುವ ವಿಷಕಾರಿ ಅಭಿಯಾನದ ಬಗ್ಗೆ ಸರ್ಕಾರವು ಏನನ್ನೂ ಹೇಳಿಲ್ಲ. ಆದರೆ ಈ ಅಭಿಯಾನಕ್ಕೆ ಬಿಜೆಪಿಯ ಕೆಲವು ಮುಖಂಡರು ನೀಡಿರುವ ಬೆಂಬಲವನ್ನು ಗಮನಿಸಿ ಸರ್ಕಾರದ ನಿಲುವು ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ, ಈಗಿನ ಕಾನೂನನ್ನು ಎತ್ತಿಹಿಡಿಯಬೇಕಾದ ಹೊಣೆಗಾರಿಕೆಯು ಸರ್ಕಾರದ ಮೇಲೆ ಇದೆ. ಆ ಹೊಣೆಯಿಂದ ತಪ್ಪಿಸಿಕೊಳ್ಳಲು ಅವಕಾಶ ಇಲ್ಲ. ಒಂದು ವೇಳೆ ಕಾನೂನಿಗೆ ತಿದ್ದುಪಡಿ ತರಲು ಮುಂದಾದರೆ ಅಂತಹ ನಡೆಯು ದೇಶದ ಸಂವಿಧಾನದ ಅತಿಮುಖ್ಯ ಭಾಗವೊಂದನ್ನು ದುರ್ಬಲಗೊಳಿಸಿದಂತೆ ಆಗುತ್ತದೆ ಎಂಬ ಎಚ್ಚರ ಸರ್ಕಾರಕ್ಕೆ ಇರಲಿ.

ದಿನದ ಟ್ವೀಟ್

ನಮ್ಮ ದೇಶ, ನಮ್ಮ ಹೆಮ್ಮೆ

ಯಾವುದೇ ಆಲೋಚನೆಯನ್ನೇ ಮಾಡದೆ ಹೋಲಿಕೆ ಮಾಡುವ ಜನರು, ಅಮೆರಿಕದ ಎಲ್ಲವನ್ನೂ ಹೊಗಳುತ್ತಾರೆ ಮತ್ತು ಭಾರತವನ್ನು ಅವಮಾನಿಸುತ್ತಾರೆ. ಒಂದು ವಿಷಯವನ್ನು ಹೇಳಬಯಸುತ್ತೇನೆ. ನಾನೊಬ್ಬ ಸರ್ಕಾರಿ ಶಸ್ತ್ರಚಿಕಿತ್ಸಕನಾಗಿದ್ದು, ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳನ್ನು ನೋಡುತ್ತಿರುತ್ತೇನೆ. ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ವೈದ್ಯನಾಗಿರುವ ನಾನು, ಈ ಅವಧಿಯಲ್ಲಿ ಇಲ್ಲಿ ಕಂಡ ಗುಂಡೇಟಿನ ಪ್ರಕರಣ ಒಂದೇ ಒಂದು. ಒಬ್ಬ ಹೆಮ್ಮೆಯ ಭಾರತೀಯನಾಗಿ ಇದನ್ನು ನಾನು ಹೇಳುತ್ತೇನೆ.

ಡಾ. ಜೈಸನ್ ಫಿಲಿಪ್, ಮೂತ್ರಶಾಸ್ತ್ರಜ್ಞ

ಕಿಡಿನುಡಿ

ತಮಿಳುನಾಡಿನಲ್ಲಿ ಕೆಲವರು ನಡೆಸಿದ ಗೋ ಬ್ಯಾಕ್ ಮೋದಿ ಅಭಿಯಾನವನ್ನು ನಾನು ಬೆಂಬಲಿಸುವುದಿಲ್ಲ. ಇದು ವಿವೇಚನಾರಹಿತ ನಡೆ. ವೈಯಕ್ತಿಕ ಅಸ್ಮಿತೆಗಿಂತ ಹೆಚ್ಚಾಗಿ ಅವರು ದೇಶದ ಪ್ರಧಾನಿ ಎಂಬುದನ್ನು ಅರ್ಥಮಾಡಿಕೊಳ್ಳಿ. ದೇಶದ ಯಾವ ಮೂಲೆಗೆ ಬೇಕಾದರೂ ಯಾವುದೇ ಹಿಂಜರಿಕೆಯಿಲ್ಲದೆ ವೈಯಕ್ತಿಕವಾಗಿ ಅಥವಾ ಅಧಿಕೃತವಾಗಿ ಭೇಟಿ ನೀಡಲು ಅವರು ಸ್ವತಂತ್ರರು. #WelcomeModi

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 27-5-1997

- **3.75 ಕೋಟಿ ವಿದೇಶಿ ದೇಣಿಗೆ: ಕಾಂಗ್ರೆಸ್‌ಗೆ ಕೋರ್ಟ್ ನೋಟಿಸ್**

ನವದೆಹಲಿ, ಮೇ 26 (ಪಿಟಿಐ)– ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆ ಉಲ್ಲಂಘಿಸಿ 1993–1995ರ ಅವಧಿಯಲ್ಲಿ 3.75 ಕೋಟಿ ರೂಪಾಯಿ ದೇಣಿಗೆ ಸ್ವೀಕರಿಸಿದ ಆರೋಪ ಕುರಿತು ವಿಚಾರಣೆ ನಡೆಸುತ್ತಿರುವ ದೆಹಲಿಯ ಹೈಕೋರ್ಟ್, ಕಾಂಗ್ರೆಸ್ ಪಕ್ಷಕ್ಕೆ ಷೋಕಾಸ್ ನೋಟಿಸ್ ಜಾರಿ ಮಾಡಿದೆ.

ಹೈಕೋರ್ಟಿನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮಹೇಂದ್ರ ನಾರಾಯಣ್ ಮತ್ತು ನ್ಯಾಯಮೂರ್ತಿ ಎಸ್.ಕೆ. ಮಹಾಜನ್ ಅವರನ್ನು ಒಳಗೊಂಡ ಪೀಠ ಜುಲೈ 15ರ ಒಳಗೆ ಉತ್ತರಿಸಲು ಆದೇಶಿಸಿದೆ.

- **'ಕೆಇಬಿ ಕಾರ್ಯನಿರ್ವಹಣೆ ಸುಧಾರಣೆಗೆ ಶೀಘ್ರ ಕ್ರಮ'**

ಮೈಸೂರು, ಮೇ 26– ವಿದ್ಯುತ್ ಮಂಡಳಿಯ ಕಾರ್ಯನಿರ್ವಹಣೆ ಸುಧಾರಿಸುವುದರ ಕಡೆಗೆ ಅಗತ್ಯ ಗಮನ ನೀಡುವ ಮೂಲಕ ರಾಜ್ಯವನ್ನು ಕಾಡುತ್ತಿರುವ ವಿದ್ಯುತ್ ಅಭಾವವನ್ನು ಇದ್ದುದರಲ್ಲಿ ಸುಧಾರಿಸಲು ಸರ್ಕಾರ ನಿರ್ಧರಿಸಿದ್ದು, ಮಂಡಳಿಯ ಕಾರ್ಯನಿರ್ವಹಣೆಯನ್ನು ಒಂದು ವರ್ಷದ ಒಳಗಾಗಿ ಸುಧಾರಿಸದೇ ಗತ್ಯಂತರವಿಲ್ಲವೆಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

'ಎಲ್ಲಿ ಹೋದರಲ್ಲಿ ಜನ ವಿದ್ಯುತ್ ಅಭಾವದ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳು ಅದಕ್ಕೆ ಉತ್ತರ ನೀಡಬೇಕಾಗುತ್ತದೆ' ಎಂದರು.

50 ವರ್ಷಗಳ ಹಿಂದೆ

ಶನಿವಾರ, 27-5-1972

- **ಅಣ್ವಸ್ತ್ರ ಪೈಪೋಟಿ ತಡೆ: ಐತಿಹಾಸಿಕ ಒಪ್ಪಂದಕ್ಕೆ ರಷ್ಯಾ- ಅಮೆರಿಕ ಸಹಿ**

ಮಾಸ್ಕೊ, ಮೇ 26– ಅಗ್ರ ರಾಷ್ಟ್ರಗಳು ಅಣ್ವಸ್ತ್ರ ಪೈಪೋಟಿ ನಡೆಸುವುದನ್ನು ತಡೆಗಟ್ಟಲು ಶಸ್ತ್ರಾಸ್ತ್ರ ಮಿತಿ ಕುರಿತ ಒಪ್ಪಂದಕ್ಕೆ ಅಮೆರಿಕದ ಅಧ್ಯಕ್ಷ ನಿಕ್ಸನ್ ಮತ್ತು ರಷ್ಯಾ ಕಮ್ಯುನಿಸ್ಟ್ ಪಕ್ಷದ ನಾಯಕ ಬ್ರೆಜ್ನೇವ್ ಅವರು ಈ ರಾತ್ರಿ ಸಹಿ ಹಾಕಿದರು.

- **ಕಾಂಗ್ರೆಸ್ ಕಾರ್ಯಕ್ರಮ ಒಪ್ಪದಿದ್ದರೆ ಪಕ್ಷ ತ್ಯಜಿಸಿ: ಇಂದಿರಾ ಛೀಮಾರಿ**

ನವದೆಹಲಿ, ಮೇ 26– ಸರ್ಕಾರದ ಟೀಕೆಗಾರರನ್ನು ಇಂದು ಇಲ್ಲಿ ತರಾಟೆಗೆ ತೆಗೆದುಕೊಂಡ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಪಕ್ಷದ ಕಾರ್ಯಕ್ರಮ ಒಪ್ಪದೇ ಇರುವವರಿಗೆ ಕಾಂಗ್ರೆಸ್ ಬಿಟ್ಟು ಹೋಗಲು ಕರೆ ಕೊಟ್ಟರು.

ಸಂಸತ್ ಕಾಂಗ್ರೆಸ್ ಪಕ್ಷದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಪಕ್ಷದಲ್ಲಿನ ತೀವ್ರ ಸುಧಾರಣಾವಾದಿಗಳಿಗೂ ಛೀಮಾರಿ ಹಾಕದೇ ಬಿಡಲಿಲ್ಲ. ಪಕ್ಷ ನೀಡಿರುವ ಭರವಸೆಗಳು ಹಾಗೂ ಸರ್ಕಾರದ ಸಾಧನೆಗಳ ನಡುವೆ ವ್ಯಾಪಕ ಅಂತರವಿದೆಯೆಂದು ಪದೇ ಪದೇ ಕೇಳಿಬರುತ್ತಿರುವ ದೂರನ್ನು ಪ್ರಸ್ತಾಪಿಸಿ, ಪಕ್ಷದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ವಿಚಾರವನ್ನು ಚರ್ಚಿಸಬೇಕು- ಚರ್ಚಿಸಬಹುದು ಎಂದು ಹೇಳಿ. ಆದರೆ, 'ಒತ್ತಡ ಹೇರುವ ಗುಂಪುಗಳನ್ನು ತಾವು ಸಹಿಸುವುದಿಲ್ಲವೆಂದು ತಿಳಿಸಿದರೆಂದು ಗೊತ್ತಾಗಿದೆ' ಎಂದರು.

ಕೆಲಸ ಪಡೆಯಲು ಪದವಿ ಅಗತ್ಯವಾದರೂ ಇಂದಿನ ಪರಿಸ್ಥಿತಿಯಲ್ಲಿ ಅಷ್ಟುಮಾತ್ರ ಸಾಲದು

ಕೌಶಲದ ಕೊರತೆ: ನಿವಾರಣೆಯ ತುರ್ತು

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ಮೂಲಗಳಂತೆ, ದೇಶದಲ್ಲಿ 6,214 ಎಂಜಿನಿಯರಿಂಗ್ ಕಾಲೇಜುಗಳಿದ್ದು, ಪ್ರತಿವರ್ಷ 29 ಲಕ್ಷ ವಿದ್ಯಾರ್ಥಿಗಳು ಎಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಪ್ರವೇಶ ಪಡೆದು, 15 ಲಕ್ಷ ಪದವೀಧರರು ಹೊರಬರುತ್ತಾರೆ. ಆದರೆ ಈ ವಿದ್ಯಾರ್ಥಿಗಳಲ್ಲಿ ಬಹುಮಂದಿಗೆ ಮಾರುಕಟ್ಟೆಯಲ್ಲಿರುವ ವಿವಿಧ ಉದ್ಯೋಗಗಳಿಗೆ ಅಗತ್ಯವಾದ ಕೌಶಲ, ಸಾಮರ್ಥ್ಯಗಳು ಇರುವುದಿಲ್ಲ ಎಂಬುದು ಬಹಳಷ್ಟು ಹಳೆಯ ದೂರು.

2005ರ ಸುಮಾರಿಗೆ, ಪ್ರತಿಷ್ಠಿತ ಮ್ಯಾನೇಜ್‌ಮೆಂಟ್ ಸಮಾಲೋಚನಾ ಸಂಸ್ಥೆ 'ಮೆಕಿನ್ಸಿ' ನಡೆಸಿದ ಸಮೀಕ್ಷೆಯಲ್ಲಿ ಶೇ 25ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಉದ್ಯೋಗಕ್ಕೆ ಅಗತ್ಯವಾದ ಕೌಶಲಗಳು ಇರುವುದು ತಿಳಿದುಬಂದಿತ್ತು. ಯಾವುದೇ ಉದ್ಯೋಗದಲ್ಲಿ ಕೆಲಸವೊಂದನ್ನು ಸಮರ್ಪಕವಾಗಿ, ಅಚ್ಚುಕಟ್ಟಾಗಿ ಮಾಡಿ ಮುಗಿಸಲು ಬೇಕಾದ ಜ್ಞಾನ, ತಂತ್ರ, ನೈಪುಣ್ಯದ ಗುಚ್ಛವೇ ಕೌಶಲ. ಅದು, ವ್ಯವಸ್ಥಿತವಾಗಿ ಕಲಿತು, ಬಳಕೆಯಿಂದ ರೂಢಿಸಿಕೊಂಡು, ಅಗತ್ಯಕ್ಕೆ ತಕ್ಕಂತೆ, ಕಾಲದಿಂದ ಕಾಲಕ್ಕೆ ಉನ್ನತೀಕರಣ ಮಾಡಿಕೊಳ್ಳಬೇಕಾದ ಸಾಮರ್ಥ್ಯ.

ದೆಹಲಿ ಮೂಲದ 'ಆಸ್ಪೈರಿಂಗ್ ಮೈಂಡ್ಸ್' ಸಂಸ್ಥೆ 2019ರಲ್ಲಿ ಹೊರತಂದ 'ನ್ಯಾಷನಲ್ ಎಂಪ್ಲಾಯಬಿಲಿಟಿ ರಿಪೋರ್ಟ್' ಈ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತಷ್ಟು ವಿವರವಾದ ಮಾಹಿತಿಗಳನ್ನು ನೀಡುತ್ತದೆ. ಎಂಜಿನಿಯರಿಂಗ್ ಪದವಿ ಪಡೆದು ಕಾಲೇಜಿನಿಂದ ಹೊರಬರುವವರು ತೆಗೆದುಕೊಳ್ಳುವ ಪರೀಕ್ಷೆಯ ಆಧಾರದ ಮೇಲೆ ಸಿದ್ಧವಾಗಿರುವ ಈ ವರದಿಯಲ್ಲಿ, ನಮ್ಮ ವಿದ್ಯಾರ್ಥಿಗಳ ಕೌಶಲದ ಮಟ್ಟದ ಬಗ್ಗೆ ಅನೇಕ ಮಾಹಿತಿಗಳಿವೆ. ಉದಾಹರಣೆಗೆ, ಸಾಫ್ಟ್‌ವೇರ್ ಕ್ಷೇತ್ರದ ಸ್ಟಾರ್ಟ್‌ಅಪ್ ಕಂಪನಿಗಳಲ್ಲಿ ಕೆಲಸ ಮಾಡಲು ಬೇಕಾದ ಕೌಶಲವಿರುವುದು ಶೇ 3.8ರಷ್ಟು ವಿದ್ಯಾರ್ಥಿಗಳಲ್ಲಿ ಮಾತ್ರ.

ಇತ್ತೀಚಿನ ಪ್ರಮುಖ ಕ್ಷೇತ್ರಗಳಾದ ಕೃತಕ ಬುದ್ಧಿಮತ್ತೆ, ಮಶೀನ್‌ಲರ್ನಿಂಗ್, ಡೇಟಾಎಂಜಿನಿಯರಿಂಗ್, ಮೊಬೈಲ್ ತಂತ್ರಜ್ಞಾನ ಮುಂತಾದವುಗಳಲ್ಲಿನ ಉದ್ಯೋಗಕ್ಕೆ ಅಗತ್ಯವಾದ ಸಾಮರ್ಥ್ಯವಿರುವುದು ಶೇ 3ರಷ್ಟು ವಿದ್ಯಾರ್ಥಿಗಳಲ್ಲಿ. ಶೇ 60ರಷ್ಟು ವಿದ್ಯಾರ್ಥಿಗಳು ಕೆಲಸ ಕಲಿಸುವ ಯಾವುದೇ ರೀತಿಯ ಇಂಟರ್ನ್‌ಶಿಪ್ ಮಾಡುವುದಿಲ್ಲ. ಈ ಕೌಶಲದ ಕೊರತೆಯು ಮಾಹಿತಿ ತಂತ್ರಜ್ಞಾನ ಮತ್ತು ಅದನ್ನು ಆಧರಿಸಿದ ಸೇವಾ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಕೈಗಾರಿಕೋತ್ಪಾದನೆ, ಮೂಲಸೌಕರ್ಯ ಅಭಿವೃದ್ಧಿ, ಆರೋಗ್ಯ ಸಂರಕ್ಷಣೆ, ಔಷಧೋತ್ಪಾದನೆ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಇದೆ. ಈ ಪರಿಸ್ಥಿತಿ ಸುಧಾರಿಸದಿದ್ದರೆ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಸುಮಾರು ₹ 150 ಲಕ್ಷ ಕೋಟಿ ನಷ್ಟ ಸಂಭವಿಸುವುದಾಗಿ ಆ್ಯಕ್ಸೆಂಚರ್ ಸಂಸ್ಥೆಯ ವರದಿ ತಿಳಿಸುತ್ತದೆ.

'ಕ್ವಕ್‌ಕ್ವಾರೆಲಿ ಸೈಮಂಡ್ಸ್' (ಕ್ಯು.ಎಸ್) ಜಾಗತಿಕ ಮಟ್ಟದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿರುವ ವಿಶ್ವವಿದ್ಯಾಲಯಗಳ ಮೌಲ್ಯಮಾಪನ ನಡೆಸಿ, ಗುಣಮಟ್ಟವನ್ನು ಶ್ರೇಣೀಕರಿಸುವ ಸ್ವತಂತ್ರ, ಪ್ರತಿಷ್ಠಿತ ಸಂಸ್ಥೆ. ಪ್ರಪಂಚದ ವಿವಿಧ ದೇಶಗಳ 550 ವಿಶ್ವವಿದ್ಯಾಲಯಗಳ ಸಮೀಕ್ಷೆ ನಡೆಸಿದ ನಂತರ, 'ಕ್ಯು.ಎಸ್ ಗ್ರ್ಯಾಜುಯೇಟ್ ಎಂಪ್ಲಾಯಬಿಲಿಟಿ-2022' ಎಂಬ ವರದಿಯನ್ನು ಈ ಸಂಸ್ಥೆ ಪ್ರಕಟಿಸಿದೆ. ಶಿಕ್ಷಣ ಮುಗಿಸಿ, ಉದ್ಯೋಗ ಕ್ಷೇತ್ರವನ್ನು ಪ್ರವೇಶಿಸುವವರ ಉದ್ಯೋಗಾರ್ಹತೆಯನ್ನು ಮಾಪನ ಮಾಡಿರುವ ಈ ವರದಿಯಲ್ಲಿ, ಮೊದಲ ಮೂರು ಸ್ಥಾನಗಳಲ್ಲಿ ಅಮೆರಿಕದ ಮಸ್ಯಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಟಾನ್‌ಫರ್ಡ್ ಮತ್ತು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಗಳಿವೆ. ಮೊದಲ 10 ಸ್ಥಾನಗಳಲ್ಲಿ ಚೀನಾದ ಎರಡು ವಿಶ್ವವಿದ್ಯಾಲಯಗಳಿವೆ. ಮೊದಲ 100 ಸ್ಥಾನಗಳಲ್ಲಿ ಭಾರತದ ಯಾವ ಒಂದು ಉನ್ನತ ಶಿಕ್ಷಣ ಸಂಸ್ಥೆಯೂ ಇಲ್ಲ. 101- 200ರ ನಡುವೆ ಮುಂಬೈ, ದೆಹಲಿ, ಚೆನ್ನೈ ಐಐಟಿಗಳು, 201- 300ರ ನಡುವೆ ಖರಗಪುರ ಐಐಟಿ, ದೆಹಲಿ ವಿಶ್ವವಿದ್ಯಾಲಯ, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಂಡುಬರುತ್ತವೆ. ಒಟ್ಟಾರೆಯಾಗಿ ಜಾಗತಿಕ ಮಟ್ಟದ ಈ ಪಟ್ಟಿಯಲ್ಲಿರುವುದು ಭಾರತದ 12 ಉನ್ನತ ಶಿಕ್ಷಣ ಸಂಸ್ಥೆಗಳು ಮಾತ್ರ.

ಹಾಗೆಂದ ಮಾತ್ರಕ್ಕೆ ಉಳಿದ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಉದ್ಯೋಗ ದೊರೆಯುವುದಿಲ್ಲವೆಂದಲ್ಲ. ಪ್ರತಿವರ್ಷ ಪದವಿ ಪಡೆದು ಹೊರಬರುವ ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ, ಅವರ ಆಯ್ಕೆಯ ಕ್ಷೇತ್ರದಲ್ಲಿ ಉದ್ಯೋಗ ದೊರೆಯುವುದು ಸುಮಾರು 3 ಲಕ್ಷ ಮಂದಿಗೆ ಮಾತ್ರ. ಉಳಿದ 12 ಲಕ್ಷ ಮಂದಿ ಅಗತ್ಯ ಕೌಶಲಗಳ ತೀವ್ರ ಕೊರತೆಯಿಂದ, ಅವರ ಶಿಕ್ಷಣಕ್ಕೆ ಸಂಬಂಧಿಸಿರದ ಯಾವುದೋ ಒಂದು ಉದ್ಯೋಗವನ್ನು ಅರಸುವ ಅನಿವಾರ್ಯ ಒದಗುತ್ತದೆ. ಆರ್ಥಿಕತೆ ಮತ್ತು ಮಾನವ ಸಂಪನ್ಮೂಲಗಳ ದೃಷ್ಟಿಯಿಂದ ಇದು ಬಹು ದೊಡ್ಡ ನಷ್ಟ ಎಂಬುದು ಪರಿಣತರ ಅಭಿಪ್ರಾಯ.

ಕೆಲಸವೊಂದನ್ನು ಪಡೆಯಲು ವಿಶ್ವವಿದ್ಯಾಲಯದ ಪದವಿಯು ಅಗತ್ಯವಾದರೂ ಇಂದಿನ ಪರಿಸ್ಥಿತಿಯಲ್ಲಿ ಅಷ್ಟುಮಾತ್ರ ಸಾಲದು. ಶಿಕ್ಷಣ ನೀಡುವ ಜ್ಞಾನವನ್ನು ಅನ್ವಯಿಸಬಲ್ಲ, ವಿಶ್ಲೇಷಣಾತ್ಮಕವಾಗಿ ಚಿಂತಿಸಬಲ್ಲ, ಸವಾಲುಗಳನ್ನು ಸ್ವೀಕರಿಸಿ ಸಮಸ್ಯೆಗಳನ್ನು ಬಿಡಿಸಬಲ್ಲ, ಹೊಸ ಪರಿಸ್ಥಿತಿಗೆ ಹೊಂದಿಕೊಂಡು ತಂಡದಲ್ಲಿ ಕೆಲಸ ಮಾಡಬಲ್ಲ ಸಾಮರ್ಥ್ಯಗಳು ಬಹು ಮುಖ್ಯ. ಇವುಗಳೊಡನೆ ಸಂವಹನ, ಸಹಯೋಗ, ನಾಯಕತ್ವ, ತಂತ್ರಜ್ಞಾನ ಪ್ರೀತಿ, ವಿವಿಧ ಕಾರ್ಯನಿರ್ವಹಣಾ ಸಾಮರ್ಥ್ಯ, ಸಮಯ ನಿರ್ವಹಣೆ ಮುಂತಾದವು ವಿದ್ಯಾರ್ಥಿಗಳ ಉದ್ಯೋಗಾರ್ಹತೆಯನ್ನು ನಿರ್ಧರಿಸುತ್ತವೆ. ಆದರೆ ಅವರಲ್ಲಿ ಇಂತಹ ಕೌಶಲಗಳನ್ನು ಬೆಳೆಸುವ ದಿಕ್ಕಿನಲ್ಲಿ ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಆಸಕ್ತಿ ತೋರಿರಲಿಲ್ಲ. ಆದರೆ ಇದೀಗ ಅನಿವಾರ್ಯವಾಗಿ ಈ ಕೊರತೆ ನಿವಾರಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಬಂದಿದೆ.

2020ರಲ್ಲಿ ಕೇಂದ್ರ ಮಂತ್ರಿಮಂಡಲದ ಅನುಮೋದನೆ ಪಡೆದು, ನಿಧಾನವಾಗಿ ಅನುಷ್ಠಾನಗೊಳ್ಳುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವೃತ್ತಿಪರ, ಉದ್ಯೋಗಾರ್ಹ, ಉದ್ಯಮಶೀಲ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ, ಪೋಷಿಸಿ, ಸಂವರ್ಧಿಸುವ ಸವಾಲಿಗೆ ಅತಿ ಹೆಚ್ಚಿನ ಮಹತ್ವ ನೀಡಲಾಗಿದೆ. ಪದವಿ ಪಡೆಯುವ ಮುನ್ನವೇ, ವಿವಿಧ ಅವಧಿಗಳಲ್ಲಿ ಪ್ರಮಾಣೀಕೃತ ಕೌಶಲಗಳೊಂದಿಗೆ ಹೊರಬರುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿದೆ. ನಿರ್ಗಮಿಸಿದ ಹಂತದಿಂದಲೇ ಮುಂದೆ ಶಿಕ್ಷಣವನ್ನು ಮುಂದುವರಿಸುವ ಅವಕಾಶವನ್ನು ನೀಡಲಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಕೈಗಾರಿಕೆಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ 'ಇಂಟರ್ನ್‌ಶಿಪ್'ಗೆ ಅವಕಾಶವನ್ನು ಸೃಷ್ಟಿಸಲಾಗುತ್ತದೆ.

ಕೈಗಾರಿಕಾ ಪರಿಣತರು, ಉದ್ಯಮದ ನಾಯಕರನ್ನು, 'ಪ್ರೊಫೆಸರ್ಸ್ ಆಫ್ ಪ್ರ್ಯಾಕ್ಟೀಸ್' ಹೆಸರಿನಲ್ಲಿ ವಿಶ್ವವಿದ್ಯಾಲಯಗಳಿಗೆ ಆಹ್ವಾನಿಸಿ ಬೋಧನೆಗೆ ಅವಕಾಶ ನೀಡಿ ಅವರ ಅನುಭವ, ಪರಿಣತಿಗಳನ್ನು ವಿದ್ಯಾರ್ಥಿಗಳ ಕೌಶಲ ವೃದ್ಧಿಗೆ ಬಳಸಿಕೊಳ್ಳಲಾಗುತ್ತದೆ. ವೃತ್ತಿಶಿಕ್ಷಣವನ್ನು ಶಾಲಾ ಕಾಲೇಜುಗಳ ಪಠ್ಯ ವಿಷಯಗಳ ಭಾಗವನ್ನಾಗಿ ಮಾಡುವುದು ಮತ್ತೊಂದು ಮಹತ್ವದ ಹೆಜ್ಜೆ ಎನ್ನಲಾಗಿದೆ. ಇದರ ಫಲವಾಗಿ 2025ರ ಅಂತ್ಯದೊಳಗಾಗಿ 2.80 ಲಕ್ಷ ಶಾಲೆಗಳು ಮತ್ತು 40 ಸಾವಿರ ಕಾಲೇಜುಗಳಲ್ಲಿ ಮಾರುಕಟ್ಟೆಯಲ್ಲಿನ ಉದ್ಯೋಗಗಳಿಗೆ ಅಗತ್ಯವಾದ ಕೌಶಲಗಳು ಮತ್ತು ತರಬೇತಿ ದೊರೆಯುವ ಪ್ರತೀಕ್ಷೆಯಿದೆ. ಒಟ್ಟಾರೆಯಾಗಿ ಡಿಜಿಟಲ್ ಸಾಮರ್ಥ್ಯ, ಉದ್ಯೋಗಾಧಾರಿತ ಕೌಶಲಗಳು ಮತ್ತು ವಿದ್ಯಾರ್ಥಿಗಳಿಗೆ ಉದ್ಯಮ ನಾಯಕರ ಮಾರ್ಗದರ್ಶನವು ಭವಿಷ್ಯದ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಲಿವೆ ಎಂಬುದು ಪರಿಣತರ ನಿರೀಕ್ಷೆ.

ಈ ನಡುವೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿರುವ ಹಲವಾರು ಖಾಸಗಿ, ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು, ಕೌಶಲ ಸಂವರ್ಧನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಸ್ತಾಪಿಸಿರುವ ಬದಲಾವಣೆಗಳನ್ನು ತರಲು ಪ್ರಾರಂಭಿಸಿವೆ. ಪ್ರವೇಶಾತಿಗೆ ಸಂಬಂಧಿಸಿದಂತೆ ಅವು ನೀಡುತ್ತಿರುವ ಜಾಹೀರಾತುಗಳಲ್ಲಿ ಈ ಬದಲಾವಣೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಇವು ಕೇವಲ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಾಧನಗಳಾಗದೆ ಪ್ರಾಮಾಣಿಕವಾಗಿ ಅನುಷ್ಠಾನಗೊಳ್ಳಬೇಕು ಮತ್ತು ಅವು ತರುವ ಸಕಾರಾತ್ಮಕ ಬದಲಾವಣೆಗಳ ಫಲ ದೇಶದ ಎಲ್ಲ ವಿದ್ಯಾರ್ಥಿಗಳಿಗೆ ದೊರೆಯುವಂತೆ ಆಗಬೇಕು.

ಕೌಶಲದ ಕೊರತೆಯ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಿರುವ ಎರಡು ದೇಶಗಳ ಮಾದರಿಗಳು ನಮ್ಮ ಮುಂದಿವೆ. ಜರ್ಮನಿಯ ಅಸಾಧಾರಣ ಕೈಗಾರಿಕಾ ಉತ್ಪಾದನಾ ಸಾಮರ್ಥ್ಯದ ಬೆನ್ನೆಲುಬಾಗಿರುವುದು ಆ ದೇಶದ ಅಪ್ರೆಂಟಿಸ್‌ಶಿಪ್ ಯೋಜನೆ. ವಿದ್ಯಾರ್ಥಿ ದೆಸೆಯಲ್ಲಿಯೇ ಕೈಗಾರಿಕೆಗಳಲ್ಲಿ ಕಸುಬು ಕಲಿಯುವ ವಿಶಿಷ್ಟ ವ್ಯವಸ್ಥೆ. ಕೈಗಾರಿಕೆಯ ಅಗತ್ಯಗಳು ಮತ್ತು ವಿದ್ಯಾರ್ಥಿಗಳ ಕೌಶಲಗಳ ನಡುವೆ ಅತ್ಯುತ್ತಮ ಸಮನ್ವಯವನ್ನು ಸಾಧಿಸಿರುವ ಜಪಾನ್ ದೇಶದ ಶೈಕ್ಷಣಿಕ ವ್ಯವಸ್ಥೆ ಎರಡನೆಯ ಮಾದರಿ. ಈ ಎರಡನ್ನೂ ಭಾರತ ಸರ್ಕಾರ ಗಮನಿಸಬೇಕೆಂಬುದು ತಜ್ಞರ ಅಭಿಮತ.

ಚುರುಮುರಿ



ಎಡ ಮತ್ತು ಬಲ

• ಬಿ.ಎನ್.ಮಲ್ಲೇಶ್

'ಲೇ ತೆಪರ, ನೀನು ಎಡನೋ ಬಲನೋ' ಗುಡ್ಡೆ ಕೇಳಿದ.

'ಅಂದ್ರೆ? ಅರ್ಥ ಆಗ್ಲಿಲ್ಲಪ್ಪ...' ತೆಪರೇಸಿ ಮೂತಿ ಸೊಟ್ಟ ಮಾಡಿದ.

'ಅಂದ್ರೇ ನೀನು ಎಡಪಂಥೀಯನೋ ಬಲಪಂಥೀಯನೋ ಅಂತ'.

'ಲೇ ಗುಡ್ಡೆ, ಅವನು ಎಡನೂ ಅಲ್ಲ, ಬಲನೂ ಅಲ್ಲ... ಅವನು 'ನಡು' ಪಂಥೀಯ ಕಣಲೆ' ದುಬ್ಬೀರ ನಕ್ಕ.

'ಅಂದ್ರೆ ಎಡಬಿಡಂಗಿ ಪಂಥ ಅನ್ನು... ಅಂದರಿಕಿ ಮಂಚಿವಾಳ್ಳು...'

'ಗುಡ್ಡೆ ಮಾತಿಗೆ ಸಿಟ್ಟಾದ ತೆಪರೇಸಿ 'ಲೇಯ್, ನಂದು ಯಾವ ಪಂಥನೂ ಇಲ್ಲ, ನಂದು ಹೊಟ್ಟೆ ಪಂಥ. ಈಗ್ಯಾಕೆ ಅದೆಲ್ಲ?' ಎಂದ.

'ಯಾಕೆ ಅಂದ್ರೆ ಈಗ ಎಸ್ಸೆಲ್ಸಿ ಕನ್ನಡ ಪುಸ್ತಕದಲ್ಲಿ ಕವಿಗಳು, ಲೇಖಕರನ್ನ ಅವರು ಎಡ, ಇವರು ಬಲ ಅಂತ ಕಿತ್ತಾಟ ಶುರು ಆಗೇತಲ್ಲ, ಅದ್ಕೆ ಕೇಳಿದೆ'.

'ಅಲ್ಲ, ಈಗ ಬದುಕಿರೋರ್‍ನ ಬೇಕಾದ್ರೆ ನೀವು ಯಾವ ಪಂಥ ಅಂತ ಡೈರೆಕ್ಟಾಗಿ ಕೇಳಬೋದಪ್ಪ, ಸತ್ತು ಸ್ವರ್ಗ ಸೇರಿರೋ ಕವಿಗಳನ್ನ ಹೆಂಗೆ ಕೇಳೋದು?' ಕೊಟ್ರೇಶಿ ಕೊಕ್ಕೆ.

'ಹ್ಞಾಂ... ಈಗ ಹೇಳಲೆ ಗುಡ್ಡೆ, ಸ್ವರ್ಗ ಎಡನೋ ಬಲನೋ?' ತೆಪರೇಸಿ ಸವಾಲು ಹಾಕಿದ.

ಗುಡ್ಡೆ ತಡವರಿಸಿದ 'ಸ್ವರ್ಗನಾ? ಅದ್ರಾಗೇನು ಎಡ ಬಲ? ದೇವ್ರಾಣೆ ಗೊತ್ತಿಲ್ಲಪ್ಪ'.

'ಹ್ಞಾಂ... ದೇವ್ರಾಣೆ ಅಂದ್ಯಲ್ಲ, ಈಗೇಳು ದೇವರು ಎಡನೋ ಬಲನೋ?' ತೆಪರೇಸಿ ಚಪ್ಪಾಳೆ ತಟ್ಟಿ ನಕ್ಕ.

ದುಬ್ಬೀರನಿಗೆ ಸಿಟ್ಟು ಬಂತು. 'ಲೇ ತೆಪರ, ಅತಿಯಾತು ನಿಂದು. ಏನ್ ಗಾಂಚಾಲಿ ಮಾಡ್ತೀಯ? ನಿನ್ನೆಂಡ್ತಿಗೆ ಫೋನ್ ಮಾಡ್ಲಾ?' ಎಂದ. ತೆಪರೇಸಿ ತೆಪ್ಪಗಾದ.

'ನೋಡ್ರಲೆ ಯಾರು ಏನರೆ ಇರ್ಲಿ, ನಂಗಂತು ಈ ತೆಪರ ಎಡ ಅಂತ ಗೊತ್ತಾತು' ಎಂದ ಗುಡ್ಡೆ.

'ಎಡನಾ? ಅದೆಂಗೆ?'

'ವೆರಿ ಸಿಂಪಲ್, ತೆಪರನ ಹೆಂಡ್ತಿ 'ಬಲ' ಆದ್ಮೇಲೆ ಇವ್ನು ಎಡ ಆಗ್ಲೇಬೇಕಲ್ಲ?' ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಭಾರತೀಯ ಚಿಂತನೆಗಳ ಸಮರ್ಥನೆ

'ಭಾಷೆಯನ್ನು ಕುರಿತ ಆಕ್ಷೇಪಗಳು ತೀರ ಸಾಪೇಕ್ಷ...'

• ಶತಾವಧಾನಿ ಡಾ. ಆರ್.ಗಣೇಶ್

'ಶ್ರೇಷ್ಠ ಭಾರತೀಯ ಚಿಂತನೆಗಳು' ಎಂಬ ನನ್ನ ಬರೆಹಕ್ಕೆ ಪ್ರಕಟವಾದ ಆಕ್ಷೇಪಗಳಿಗೆ (ಪ್ರ.ವಾ., ಮೇ 20, 21) ಸಂಕ್ಷಿಪ್ತವಾಗಿ ಉತ್ತರಿಸುತ್ತೇನೆ. ಸ್ಥಳಾಭಾವದ ಕಾರಣ ವಿಸ್ತರಿಸಲು ಸಾಧ್ಯವಿಲ್ಲ. ಮುಕ್ತ ಸಂವಾದವನ್ನು ಏರ್ಪಡಿಸಿದರೆ ವಿಸ್ತೃತ ಸಮರ್ಥನೆ ನೀಡಬಲ್ಲೆ. ಲೇಖನವನ್ನು ಕುರಿತ ನಿರಾಧಾರ ಆಕ್ಷೇಪಗಳನ್ನಷ್ಟೇ ಪ್ರಸ್ತಾವಿಸಲಿದ್ದೇನೆ. ಪಠ್ಯಪುಸ್ತಕದ ವಿವಾದವನ್ನಲ್ಲ. ಅದು ಸದ್ಯದ ವ್ಯಾಪ್ತಿಗೆ ಬರುವಂಥದ್ದಲ್ಲ. ನನ್ನ ಬರೆಹದ ಅಧಿಕೃತತೆಯನ್ನು ನಿರೂಪಿಸುವುದಷ್ಟೇ ಇಲ್ಲಿಯ ಉದ್ದೇಶ.

ವಿ.ಎಲ್.ನರಸಿಂಹಮೂರ್ತಿ, ಡಾ. ಪಿ.ಭಾರತಿ ದೇವಿ ಮತ್ತು ರವಿಕುಮಾರ್ ಬಾಗಿ ಅವರ ಅಭಿಪ್ರಾಯಗಳಲ್ಲಿರುವುದು ಈಚಿನ ದಶಕಗಳಲ್ಲಿ ಮರುಮರಳಿ ಬರುತ್ತಿರುವ 'ರೆಟರಿಕ್' ಅಲ್ಲದೆ ಮೂಲಗ್ರಂಥಗಳ ಅಧ್ಯಯನದಿಂದ ಮೂಡಿದ ಚಿಂತನೆಯಲ್ಲ. ಇವರ ಪ್ರಕಾರ ಸಾರ್ವಜನೀನವಾದ ಭಾರತೀಯತೆ ಎಂಬ ಚಿಂತನೆಯೇ ಇರಲಿಲ್ಲ. ಇದು ಸತ್ಯದೂರ. ನಿರ್ವಿಶೇಷ ಸಾರ್ವತ್ರಿಕಾನುಭವದ ಬೆಳಕಿನಲ್ಲಿ ವೇದಾಂತವು ರೂಪಿಸಿದ ತತ್ತ್ವಗಳು ಭಾರತೀಯರಿಗೆ ಮಾತ್ರವಲ್ಲದೆ ಜಗತ್ತಿನವರಿಗೆಲ್ಲ ಅನ್ವಯಿಸುತ್ತವೆ. ಇಲ್ಲಿ ದೇಶ-ಕಾಲಗಳ ಹಂಗಿಲ್ಲ. ಈ ಕಾಣ್ಕೆ ಬರಿಯ ನಂಬಿಕೆಗಳ ಮೇಲೆ ನಿಂತಿಲ್ಲ; ಜೀವ-ಜಗತ್ತುಗಳಿಗೆ ಹೊರತಾದ ಮತ್ತಾವ ಶಕ್ತಿಯನ್ನೂ ಅವಲಂಬಿಸಿಲ್ಲ.

ಸನಾತನಧರ್ಮವು ವ್ಯಾವಹಾರಿಕ ಜಗತ್ತಿನ ಬಹುತ್ವವನ್ನೆಂದೂ ನಿರಾಕರಿಸುವುದಿಲ್ಲ. ಇದು ಪರಮಾರ್ಥವಲ್ಲ ಎಂದಷ್ಟೇ ಹೇಳುತ್ತದೆ. ಸರ, ಬಳೆ, ಉಂಗುರಗಳ ನಾಮ-ರೂಪಾತ್ಮಕವಾದ ಅಸ್ತಿತ್ವವನ್ನು ಪ್ರಶ್ನಿಸುವ ಅವಿವೇಕವಿಲ್ಲಿಲ್ಲ. ಇವುಗಳಲ್ಲಿರುವುದು ಒಂದೇ ಹೊನ್ನು; ಅದಕ್ಕೇ ನಿಜವಾದ ಬೆಲೆ ಎಂಬ ಆತ್ಯಂತಿಕ ಸತ್ಯದ ತಿಳಿವಿದೆ. ಪಾರಮಾರ್ಥಿಕವಾದ ಅಭೇದವನ್ನು ಒಪ್ಪದ ಬಹುತ್ವ ತನ್ನ ನಾನಾತ್ವಗಳ ಪರಸ್ಪರ ವೈಷಮ್ಯಗಳ ಮೂಲಕ ದ್ವೇಷವನ್ನು ಹರಡಿ ಪ್ರತಿಯೊಂದು ಪಂಗಡವೂ ಮತ್ತೊಂದರೊಡನೆ ಸೆಣಸಿ ಎಲ್ಲವನ್ನೂ ಅಳಿಸದಿರದು. ಬಹುತ್ವದ ಹೆಸರಿನಲ್ಲಿ ಆಗುತ್ತಿರುವುದಾದರೂ ಇಂಥ ವೈರವಲ್ಲದೆ ಶಾಂತಿ-ಸಹಜೀವನಗಳಲ್ಲ. ಭಾರತೀಯತೆ ಕ್ರಿಯಾದ್ವೈತವನ್ನು ಬೆಂಬಲಿಸದು. ಅಲ್ಲಿ ಭಾವಾದ್ವೈತಕ್ಕೆ ಬೆಲೆ. ಇಲ್ಲಿರುವುದು ಒಂದೇ ತತ್ತ್ವವಲ್ಲ; ಎರಡಲ್ಲದ ತತ್ತ್ವ. ಇದನ್ನು ಬಲ್ಲವರಿಗೆ ಹೆಚ್ಚಿನ ವಿವರಣೆ ಬೇಕಿಲ್ಲ. ಈ ಸತ್ಯವನ್ನು ವೈದಿಕ-ಅವೈದಿಕ ದರ್ಶನಗಳಲ್ಲೆಲ್ಲ ಕಾಣಬಹುದು. ನಮ್ಮ ಜಾನಪದ ಜೀವನದಲ್ಲಿ, ಅನುಭಾವಿಗಳಲ್ಲಿ ಹಾಸು-ಹೊಕ್ಕಾಗಿರುವುದು ಇದೇ. ಈ ನೆಲದ ಜೀವನಪದ್ಧತಿಗಳು ಭಗವಂತನನ್ನು ಆರಾಧಿಸುವಾಗ ಅವನ ಸೃಷ್ಟಿಯನ್ನೂ ಭಗವಂತನೆಂದೇ ಬಗೆದು ಅರ್ಚಿಸುತ್ತವೆ. ಇಲ್ಲಿ ಭಗವಂತನು ಗಂಡೆಂಬ ಆಗ್ರಹವಿಲ್ಲ. ಭಗವಂತ ಲಿಂಗಾತೀತ. 'ಏಬ್ರಹಾಮಿಕ್' ಮತಗಳಲ್ಲಿ ಮಾತ್ರ ಇದಕ್ಕೆ ವಿರುದ್ಧವಾದ ನಿಲವುಗಳು ಪ್ರತಿಪಾದಿತವಾಗುತ್ತವೆ. ಅವುಗಳಂತೆಯೇ ಭಾರತೀಯ ದರ್ಶನಗಳೂ ಇವೆಯೆಂದು ಭ್ರಮಿಸಬಾರದು. ಸ್ವಾಮಿ ವಿವೇಕಾನಂದ, ನಾರಾಯಣಗುರು, ರಮಣ ಮಹರ್ಷಿಗಳಂಥ ಜ್ಞಾನಿಗಳ ಕಾಣ್ಕೆಯೂ ಇದೇ.

ದೇಶ-ಕಾಲಗಳಿಗೆ ಅತೀತವಾದ ಸನಾತನ ಧರ್ಮದ ಮೂಲತತ್ತ್ವಗಳನ್ನು ಉಪೇಕ್ಷಿಸಿ ಕೆಲವೊಂದು ದೇಶ-ಕಾಲಗಳಲ್ಲಿ ತಲೆದೋರಿದ ಸಾಮಾಜಿಕ ವಿಕೃತಿಗಳನ್ನಷ್ಟೇ ಎತ್ತಿ ತಿವಿಯುವುದು ಅನ್ಯಾಯ. ಇದು ತಂತ್ರಜ್ಞಾನದ ಅವಿವೇಕಗಳಿಗೆ ವಿಜ್ಞಾನವನ್ನು ನಿಂದಿಸಿದಂತೆ; ಬಡಿಸುವವರ ತಪ್ಪಿಗೆ ಅಡುಗೆಯನ್ನು ಹಳಿದಂತೆ. ಇಂಥ ಆಕ್ಷೇಪಗಳಿಗೆಲ್ಲ ಪಿ.ವಿ.ಕಾಣೆ ಅವರಂಥ ಎಷ್ಟೋ ಮಂದಿ ವಿದ್ವಾಂಸರು ಸಮರ್ಥವಾಗಿ ಉತ್ತರಿಸಿದ್ದಾರೆ.

ಪ್ರೊ. ಸಿ.ಎನ್.ರಾಮಚಂದ್ರನ್ ಅವರು ಅಮೂರ್ತ ಪರಿಕಲ್ಪನೆಗಳಿಗೆ ನಾನು 'ನಿಜವಾದ' ಅರ್ಥವನ್ನು ಕೊಟ್ಟಿರುವೆನೆಂದಿದ್ದಾರೆ. ಹೌದು, ನಾನು ನಿಜವಾದ ಅರ್ಥವನ್ನೇ ಹೇಳಿರುವುದು; 'ನಿಜವಾದ' ಅರ್ಥವನ್ನಲ್ಲ. ನನ್ನ ವಿವರಣೆಗಳಿಗೆ ಮೂಲಗ್ರಂಥಗಳ ಆಧಾರವಿದೆ. ಋಕ್ಸಂಹಿತೆ-ಅಥರ್ವಸಂಹಿತೆಗಳಲ್ಲಿ ಋತದ ವಿವರಣೆ ಇದೆ. ಯಾಸ್ಕರಿಂದ ಮೊದಲ್ಗೊಂಡು ಸಾಯಣರಂಥ ಪ್ರಾಚೀನರು ಹಾಗೂ ದಯಾನಂದ, ಅರವಿಂದ ಮುಂತಾದ ಆಧುನಿಕರು ಇಲ್ಲಿ ಸಂವಾದಿಯಾಗಿದ್ದಾರೆ. ಮಹಾಕವಿ ಕುವೆಂಪು ಋತತತ್ತ್ವವನ್ನು ಇದೇ ಅರ್ಥದಲ್ಲಿ ನೂರಾರು ಬಾರಿ ಬಳಸಿದ್ದಾರೆ. ಪತ್ರಿಕೆಯಲ್ಲಿ ಪ್ರಕಟಿಸದ- ಆದರೆ ಪಠ್ಯಪುಸ್ತಕದಲ್ಲಿ ಸೇರಿದ- ಒಂದು ಭಾಗದಲ್ಲಿ 'ಇಷ್ಟ' ಮತ್ತು 'ಪೂರ್ತ' ಎಂಬ ತತ್ತ್ವಗಳನ್ನು ವಿವರಿಸಿದ್ದೇನೆ. ಅಲ್ಲಿ ಇಂದು 'ಸೆಕ್ಯುಲರ್' ಎಂದು ಭಾವಿಸಲ್ಪಡುವ ಎಲ್ಲ ಬಗೆಯ ಸಮಾಜಹಿತ ಕಾರ್ಯಗಳೂ ತತ್ತ್ವತಃ ಯಜ್ಞವೆಂದು ನಿರೂಪಿಸಲಾಗಿದೆ. ಇಡಿಯ ವಿಶ್ವಜೀವನವೇ ಯಜ್ಞವೆಂಬ ದಿವ್ಯಭಾವನೆ ಕೌಷೀತಕೀಬ್ರಾಹ್ಮಣ ಮತ್ತು ತೈತ್ತಿರೀಯ ಆರಣ್ಯಕಗಳಲ್ಲಿ ವಿಶದವಾಗಿದೆ. ಇದನ್ನೇ ಎಷ್ಟೋ ಶತಮಾನಗಳ ಬಳಿಕ ಬುದ್ಧ ಭಗವಂತ ಕುಟದಂತಸುತ್ತದಲ್ಲಿ ಸಾರಿದ್ದಾನೆ.

ಸಿ.ಎನ್.ಆರ್. ಅವರು ಯಜ್ಞದಲ್ಲಿ ಬರುವ ಪ್ರಾಣಿವಧೆಯನ್ನು ಪ್ರಸ್ತಾವಿಸಿದ್ದಾರೆ. ಸನಾತನಧರ್ಮ ಆಹಾರ ಸಂಸ್ಕೃತಿಯನ್ನು ಆದರಿಸಿದೆ. ಯಜ್ಞವೆಂದರೆ ಅಕ್ಕರೆಯಿಂದ ಹಂಚಿಕೊಂಡು ಬಾಳುವ ಪ್ರಕ್ರಿಯೆ. ಅವರವರಿಗೆ ಒಗ್ಗಿದ ಆಹಾರವನ್ನು ಹಂಚಿಕೊಳ್ಳುವುದೂ ಇಲ್ಲಿದೆ. ಬೃಹದಾರಣ್ಯಕೋಪನಿಷತ್ತು, ವಾಲ್ಮೀಕಿ ರಾಮಾಯಣ, ಭಗವದ್ಗೀತೆ ಮುಂತಾದ ಕೃತಿಗಳಲ್ಲಿ ಇಂಥ ಉದಾರದೃಷ್ಟಿಯನ್ನು ಕಾಣಬಹುದು. ದ್ರವ್ಯಯಜ್ಞದಿಂದ ಜ್ಞಾನಯಜ್ಞದವರೆಗೆ ಎಲ್ಲ ಬಗೆಯ ಸಂವಿಭಾಗ ಅಲ್ಲಿ ಕಾಣಸಿಗುತ್ತದೆ. ಅವರೆಂದಂತೆ ಧರ್ಮಕ್ಕೆ 'ರಿಲಿಜನ್' ಎಂಬ ಅರ್ಥವಿಲ್ಲ. ಮಹಾಭಾರತ, ಮನುಸ್ಮೃತಿ, ಜೈಮಿನಿಸೂತ್ರಗಳಂಥ ಪ್ರಮಾಣಗ್ರಂಥಗಳನ್ನು ಅವರು ಪರಿಶೀಲಿಸಲಿ. ಧರ್ಮದಲ್ಲಿ ಯಾವುದೇ ನಂಬಿಕೆ, ಪ್ರವಾದಿ, ಪರಲೋಕಗಳ ಪ್ರಸ್ತಾವವಿಲ್ಲ. ಅಲ್ಲಿರುವುದು ತಾಳಿಸಿ ಬಾಳಿಸುವ ವೈಶ್ವಿಕಸಾಮರಸ್ಯ. ಇದರ ಯಥಾರ್ಥಜ್ಞಾನ ಪ್ರಾಮಾಣಿಕ ವಿದ್ವಾಂಸರಿಗೆಲ್ಲ ಇದೆ.

ಸಿ.ಎನ್.ಆರ್. ಅವರು ಸ್ವಧರ್ಮದ ಅರ್ಥವನ್ನು ತಿರುಚಲು ನೋಡಿದ್ದಾರೆ. ನನ್ನ ಲೇಖನದ ಕಡೆಯಲ್ಲಿ 'ಯಾವುದೇ ವ್ಯಕ್ತಿಯು ತನ್ನ ಸ್ವಭಾವಕ್ಕೆ ಅನುಸಾರವಾಗಿ ತನ್ನದಾದ ಬದುಕನ್ನು ರೂಪಿಸಿಕೊಳ್ಳುವ ಮೂಲಕ ತಾನೂ ತನ್ನ ಸುತ್ತಮುತ್ತಲ ಜಗತ್ತೂ ಹೆಚ್ಚಿನ ನೆಮ್ಮದಿಯನ್ನು ಗಳಿಸುವ ಪರಿಯೇ ಸ್ವಧರ್ಮ' ಎಂದಿರುವುದನ್ನು ಅವರು ಮರೆತಂತಿದೆ.

ಭಾಷೆಯನ್ನು ಕುರಿತ ಆಕ್ಷೇಪಗಳು ತೀರ ಸಾಪೇಕ್ಷ. ಪಂಪ, ಕುಮಾರವ್ಯಾಸ, ಕುವೆಂಪು ಅಂಥವರ ಭಾಷೆ ಕಠಿಣವಾದರೆ ನನ್ನದೂ ಆಗಲಿ. ಈ ಗಂಗಾನದಿಯಲ್ಲಿ ನಾನೂ ಒಂದು ಹನಿಯೆಂಬ ನಮ್ರವಾದ ಹೆಮ್ಮೆ ನನ್ನದು.

ವಾಚಕರ ವಾಣಿ

ಸಾರ್ವತ್ರಿಕವಾಗಿ ಮೂಡಿದ ಆಶಾಕಿರಣ

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದ ವಿಜಯ್ ಸಿಂಗ್ಲಾ ಅವರನ್ನು ಭ್ರಷ್ಟಾಚಾರದ ಆರೋಪದ ಮೇಲೆ ಸಂಪುಟದಿಂದ ವಜಾಗೊಳಿಸಿ ಬಂಧಿಸಲಾಗಿದೆ. ಇದು ಎಎಪಿಯು ಭ್ರಷ್ಟಾಚಾರದ ವಿರುದ್ಧ ಸಾರ್ವತ್ರಿಕವಾಗಿ ಮೂಡಿಸಿದ ಹೊಸ ಆಶಾಕಿರಣ.

ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ, ಶಿಸ್ತು, ಸ್ವಚ್ಛ ಎಂದು ಹೇಳಿಕೊಳ್ಳುವ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಶೇ 40ರ ಕಮಿಷನ್ ಆರೋಪ ಕೇಳಿಬಂದರೂ ಇಲ್ಲಿ ಇದು ಸಹಜ ಎಂಬಂತೆ ಅಧಿಕಾರಸ್ಥರು ನಡೆದುಕೊಂಡಿದ್ದಾರೆ. ಸಂಬಂಧಿಸಿದ ಸಚಿವರನ್ನು ಆಡಳಿತ ಪಕ್ಷದ ಮುಖಂಡರು ಸಮರ್ಥಿಸಿಕೊಳ್ಳಲು ಸಹ ಹಿಂದೇಟು ಹಾಕುವುದಿಲ್ಲ. ರಾಜಕಾರಣದ ಎಲ್ಲ ಮಗ್ಗುಲಿನಲ್ಲಿ ತುಂಬಿಕೊಂಡಿರುವ ಭ್ರಷ್ಟಾಚಾರಕ್ಕೆ ಹೀಗಾದರೆ ಕೊನೆ ಎಂದು? ಪಂಜಾಬ್ ಮಾದರಿ ಅನುಕರಣೀಯವಲ್ಲವೇ?

ಗಣಪತಿ ಶಿರಳಗಿ, ಸಾಗರ

ಪಕ್ಷ ತ್ಯಜಿಸಿದವರನ್ನು ತೆಗಳುವುದು ಜಾಡ್ಯ

ಕಪಿಲ್ ಸಿಬಲ್ ಅವರು '2014 ಮತ್ತು 2019ರಲ್ಲಿ ಚಾಂದಿನಿ ಚೌಕ್ ಕ್ಷೇತ್ರದಿಂದ ಲೋಕಸಭಾ ಚುನಾವಣೆಯಲ್ಲಿ ಸೋತವರು, ಅವರು ನಿವೃತ್ತಿಗೆ ಅರ್ಹರು' ಎಂದು ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಟ್ವೀಟ್ ಮಾಡಿದ್ದಾರೆ (ಪ್ರ.ವಾ., ಮೇ 26). ವಯಸ್ಸಿನಲ್ಲಿ ಹಿರಿಯರಾದ ದಿಗ್ವಿಜಯ ಸಿಂಗ್, ಪಿ.ಚಿದಂಬರಂ, ಮಲ್ಲಿಕಾರ್ಜುನ ಖರ್ಗೆ ಅವರು ಕೂಡ ಮತ್ತೊಬ್ಬ ಹಿರಿಯ ಮುಖಂಡ ಮಣಿಶಂಕರ್ ಅಯ್ಯರ್ ಅವರಂತೆಯೇ ಲೋಕಸಭಾ ಚುನಾವಣೆಯಲ್ಲಿ ಸೋತು ರಾಜ್ಯಸಭೆ ಪ್ರವೇಶಿಸಿದವರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಚಾಯ್‌ವಾಲಾ' ಎಂದಿದ್ದಕ್ಕೆ ಕಾಂಗ್ರೆಸ್ ಪಕ್ಷವೇ ಅಯ್ಯರ್ ಅವರನ್ನು ನೇಪಥ್ಯಕ್ಕೆ ಸರಿಸಿದರೆ, 'ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಗಾಂಧಿ ಕುಟುಂಬದವರು ಇರಬಾರದು' ಎಂದು ಕಪಿಲ್ ಸಿಬಲ್ ಅವರು ಹೇಳುತ್ತಲೇ ಬಂದರೂ ಪಕ್ಷ ಕ್ರಮ ತೆಗೆದುಕೊಳ್ಳಲಿಲ್ಲ. ಸಿಬಲ್ ಅವರು ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಿದೆ ಎಂಬ ಕಾರಣಕ್ಕೆ ಪಕ್ಷವನ್ನು ತೊರೆದು, ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಪಕ್ಷೇತರರಾಗಿ ರಾಜ್ಯಸಭೆಗೆ ಸ್ಪರ್ಧಿಸಿದ್ದಾರೆ. ಹೀಗಿರುವಾಗ, ಪಕ್ಷವು ತಮ್ಮನ್ನು ನೇಪಥ್ಯಕ್ಕೆ ಸರಿಸಿದರೂ ಅಯ್ಯರ್ ಅವರು ಸಿಬಲ್ ನಿವೃತ್ತರಾಗಬೇಕು ಎಂದು ಹೇಳುವುದು ಸ್ವಾಭಿಮಾನದ ಕೊರತೆಯಲ್ಲವೇ?

ಪಿ.ಸಿ.ಕೇಶವ, ಬೆಂಗಳೂರು

ಮಕ್ಕಳಲ್ಲಿ ದುರ್ಗುಣ: ನಡೆಯಲಿ ಆತ್ಮಾವಲೋಕನ

ಅಮೆರಿಕದ ಟೆಕ್ಸಾಸ್‌ನಲ್ಲಿ ಬಂದೂಕುಧಾರಿ ಯುವಕನೊಬ್ಬ 19 ಮಕ್ಕಳನ್ನು ಗುಂಡಿಟ್ಟು ಕೊಂದಿರುವುದು ಹಾಗೂ ಪುತ್ರನ ಪಬ್‌ಜಿ ಗೀಳಿಗೆ ಬಲಿಯಾದ ತಾಯಿಯ ಸುದ್ದಿಗಳನ್ನು (ಪ್ರ.ವಾ., ಮೇ 26) ಓದಿ ಆಘಾತವಾಯಿತು. ಈ ಎರಡು ಪ್ರಕರಣಗಳಿಗೂ ಮಕ್ಕಳೇ ನೇರ ಕಾರಣ. ಇದು ಮಕ್ಕಳಲ್ಲಿನ ಬುದ್ಧಿಗೇಡಿತನವನ್ನು, ಕ್ರೌರ್ಯವನ್ನು ಅನಾವರಣಗೊಳಿಸುತ್ತದೆ. ಇಂದು ಹೆಚ್ಚಿನ ಮಕ್ಕಳು ಹಿಂಸೆ, ಕ್ರೌರ್ಯದ ಕಡೆ ನಡೆಯುತ್ತಿದ್ದಾರೆ. ಪ್ರೀತಿ, ಕರುಣೆ, ಅಹಿಂಸೆ ಇವೇ ಮೊದಲಾದ ಸದ್ಗುಣಗಳು ಅವರಿಗೆ ಮೈಗೂಡುತ್ತಿಲ್ಲ. ಇದಕ್ಕೆ, ಮಕ್ಕಳನ್ನು ಜವಾಬ್ದಾರಿಯುತ ನಾಗರಿಕರನ್ನಾಗಿಸಿ ಸಾಮಾಜೀಕರಣಗೊಳಿಸುವಲ್ಲಿ ಪ್ರಾಥಮಿಕ ನಿಯೋಗಿಗಳಾದ ಪೋಷಕರು, ಶಿಕ್ಷಕರು ಮತ್ತು ಮಾಧ್ಯಮಗಳು ಲೋಪ ಎಸಗಿರುವುದು ಮುಖ್ಯ ಕಾರಣವಾಗಿದೆ. ಆದ್ದರಿಂದ, ಕುಟುಂಬ ಮತ್ತು ಶಿಕ್ಷಣ ಸಂಸ್ಥೆಗಳು ಈ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ತಾವು ಮಕ್ಕಳನ್ನು ಜವಾಬ್ದಾರಿಯಿಂದ ಬೆಳೆಸುವಲ್ಲಿ, ಕಲಿಸುವಲ್ಲಿ ಎಲ್ಲಿ ವಿಫಲರಾಗಿದ್ದೇವೆ ಎಂಬುದನ್ನು ಗುರುತಿಸಿ, ಸರಿಪಡಿಸುವೆಡೆ ಕಾರ್ಯೋನ್ಮುಖವಾಗುವುದು ಸುಸ್ಥಿರ ಪರಿಹಾರವೇ ವಿನಾ ಇತರ ಅಲ್ಪಾವಧಿ ಕ್ರಮಗಳಿಂದ ಇಂತಹ ಘಟನೆಗಳನ್ನು ತಪ್ಪಿಸಲು ಸಾಧ್ಯವಿಲ್ಲ.

ಡಾ. ಆನಂದ್ ಎಸ್.ಎಲ್., ಅಜ್ಜಂಪುರ

ಸಂವಿಧಾನದ ಜರಡಿಯಲ್ಲಿ ಸೋಸಬೇಕಿದೆ

ಪಠ್ಯಪುಸ್ತಕಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸದ್ಯಕ್ಕೆ ನಡೆಯುತ್ತಿರುವ ಚರ್ಚೆಯಲ್ಲಿ ಎಡ-ಬಲಪಂಥೀಯ ಜಗಳದ ಮಧ್ಯೆ ನಿಜಕ್ಕೂ ಬಡವಾದದ್ದು ಈ ದೇಶದ ಸಂವಿಧಾನ. ಸಂವಿಧಾನದ ಪ್ರಸ್ತಾವನೆಯ ಆಶಯವನ್ನು ಗಟ್ಟಿಗೊಳಿಸುವ ಮತ್ತು ಈ ಆಶಯಗಳನ್ನು ವಿಸ್ತರಿಸುವ ಪಾಠಗಳನ್ನು ಈ ದೇಶದ ಮಕ್ಕಳು ಓದಬೇಕು. ನಿಜವಾದ ಯಾವ ಭಾರತೀಯರೂ ಇದನ್ನು ವಿರೋಧಿಸಲಾರರು. ಅಂತೆಯೇ ಸಂವಿಧಾನದ ಆಶಯಕ್ಕೆ ವಿರುದ್ಧವಾದ ಯಾವುದೇ ಪಾಠವು ಪಠ್ಯವಾಗಬಾರದು. ಇದನ್ನು ಭಾರತೀಯರಾದ ಎಲ್ಲರೂ ಒಪ್ಪುತ್ತಾರೆ. ಒಪ್ಪಬೇಕು ಕೂಡ.

ಪ್ರೊ. ಬರಗೂರು ರಾಮಚಂದ್ರಪ್ಪ ಮತ್ತು ರೋಹಿತ್ ಚಕ್ರತೀರ್ಥ ಅವರ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಯಾದ ಹಳೆ- ಹೊಸ ಪಠ್ಯಗಳನ್ನು ಸಂವಿಧಾನದ ಜರಡಿಯಲ್ಲಿ ಸೋಸಿ, ಅದರಲ್ಲಿ ಉಳಿಯುವುದೆಷ್ಟು ಎನ್ನುವುದು ಚರ್ಚೆಯ ಸಂಗತಿಯಾಗಬೇಕು.

ಅರುಣ್ ಜೋಳದಕೂಡ್ಲಿಗಿ, ಬೆಂಗಳೂರು

ಐಪಿಎಲ್: ಕನ್ನಡಿಗರ ವಿಪರ್ಯಾಸ

ಟಾಟಾ ಐಪಿಎಲ್ ಈ ವರ್ಷದ ಕ್ರಿಕೆಟ್ ಟೂರ್ನಿಯ ಎಲಿಮಿನೇಟರ್ ಮ್ಯಾಚಿನಲ್ಲಿ ಆರ್‌ಸಿಬಿ ಮತ್ತು ಲಖನೌ ಸೂಪರ್ ಜೈಂಟ್ಸ್ (ಎಲ್‌ಎಸ್‌ಜಿ) ತಂಡಗಳು ಆಡಿದವು. ಕನ್ನಡಿಗ ಕೆ.ಎಲ್.ರಾಹುಲ್ ನಾಯಕತ್ವದ ಎಲ್‌ಎಸ್‌ಜಿ ತಂಡ ಹೋರಾಡಿ ಸೋತಿತು. ಆರ್‌ಸಿಬಿ ತಂಡ ಜಯ ಗಳಿಸಿ ಮುಂದಿನ ಹಂತಕ್ಕೆ ನಡೆಯಿತು. ಕನ್ನಡಿಗರ ವಿಪರ್ಯಾಸದ ಸ್ಥಿತಿಯೇ ಇದು. ಒಬ್ಬನೇ ಒಬ್ಬ ಕನ್ನಡಿಗ ಆಟಗಾರ ಇಲ್ಲದಿದ್ದರೂ ಕೇವಲ ಬೆಂಗಳೂರು ಎಂಬ ಹೆಸರಿರುವ ಆರ್‌ಸಿಬಿ ತಂಡ ಗೆದ್ದುದಕ್ಕೆ ಸಂಭ್ರಮಿಸಬೇಕೋ ಅಥವಾ ಕನ್ನಡಿಗ ರಾಹುಲ್ ನಾಯಕತ್ವದ ತಂಡ ಎಲ್‌ಎಸ್‌ಜಿ ಸೋತಿದ್ದಕ್ಕೆ ಬೇಸರಗೊಳ್ಳಬೇಕೋ ಎಂಬುದು. ಮನಸ್ಸಿಗೆ ಹಿಂಸೆ ನೀಡುವ ವಿಚಾರ ಇದು. ಆರ್‌ಸಿಬಿ ನಮ್ಮ ತಂಡ ಎಂಬುದನ್ನು ಒಪ್ಪಲು ಮನಸ್ಸು ಒಪ್ಪದು. ಹಾಗಾಗಿ, ಮುಂದಿನ ವರ್ಷಗಳಲ್ಲಿ ಆಯಾ ರಾಜ್ಯದ ಕನಿಷ್ಠ ನಾಲ್ವರು ಆಟಗಾರರು ತಂಡದಲ್ಲಿರಬೇಕು ಎಂಬ ನಿಯಮ ತರಲಿ. ಇಲ್ಲವಾದಲ್ಲಿ ತಂಡದ ಹೆಸರಲ್ಲಿ ಮಾತ್ರ ಬೆಂಗಳೂರು ಎಂದು ಇದ್ದರೆ ಅದು ಅನರ್ಥವಷ್ಟೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಷ್ಟ್ರೀಯ ಸಾಧನೆ ಸಮೀಕ್ಷೆ

ಕಲಿಕೆ ಕಳವಳ

3, 5, 8 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಧನೆ ಯಾವ ಮಟ್ಟದಲ್ಲಿದೆ ಎಂಬುದನ್ನು ತಿಳಿಯುವುದಕ್ಕಾಗಿ ರಾಷ್ಟ್ರ ಮಟ್ಟದಲ್ಲಿ 'ರಾಷ್ಟ್ರೀಯ ಸಾಧನೆ ಸಮೀಕ್ಷೆ' ನಡೆಸಲಾಗಿದೆ. ಸರ್ಕಾರಿ ಶಾಲೆ, ಅನುದಾನಿತ ಶಾಲೆ, ಖಾಸಗಿ ಶಾಲೆ ಮತ್ತು ಕೇಂದ್ರೀಯ ಶಾಲೆಯ ವಿದ್ಯಾರ್ಥಿಗಳ ಕಲಿಕಾ ಮಟ್ಟದ ಸಮೀಕ್ಷೆ ನಡೆದಿದೆ. ಇದು ದೊಡ್ಡ ಮಟ್ಟದ ಸಮೀಕ್ಷೆಯಾಗಿದೆ. 2021ರ ಸಮೀಕ್ಷೆಯ ವರದಿಯು ಈಗ ಪ್ರಕಟವಾಗಿದೆ. ಭಾಷೆ, ವಿಜ್ಞಾನ, ಸಮಾಜ ವಿಜ್ಞಾನ, ಇಂಗ್ಲಿಷ್ ಮುಂತಾದ ವಿಷಯಗಳಲ್ಲಿನ ಕಲಿಕಾ ಮಟ್ಟವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. 2017ರ ಸಮೀಕ್ಷೆಗೆ ಹೋಲಿಸಿದರೆ 2021ರಲ್ಲಿ ಕಲಿಕಾ ಮಟ್ಟವು ಕುಸಿತ ಕಂಡಿದೆ. ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳ ವಿವಿಧ ವಿಷಯಗಳ ಕಲಿಕಾ ಮಟ್ಟವು ಕಳವಳಕಾರಿಯಾಗಿದೆ ಎಂಬುದರತ್ತ ಸಮೀಕ್ಷಾ ವರದಿಯು ಬೆಳಕು ಚೆಲ್ಲಿದೆ

ಕಲಿಕಾ ಸಾಧನೆ ಕುಸಿತ

ಭಾಷೆ, ಗಣಿತ, ವಿಜ್ಞಾನ, ಪರಿಸರ ಅಧ್ಯಯನ, ಇಂಗ್ಲಿಷ್ ಹಾಗೂ ಆಧುನಿಕ ಭಾರತೀಯ ಭಾಷೆಗಳ ಅಧ್ಯಯನದಲ್ಲಿ 3, 5, 8 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಧನೆಯ ಅಂಕಗಳನ್ನು ವರದಿ ಬಹಿರಂಗಪಡಿಸಿದೆ. ಗರಿಷ್ಠ 500 ಅಂಕಗಳನ್ನು ನಿಗದಿಪಡಿಸಲಾಗಿದ್ದು, ಪ್ರತೀ ವಿಷಯದಲ್ಲಿ ಯಾವ ತರಗತಿಯ ಮಕ್ಕಳು ಎಷ್ಟು ಅಂಕಗಳನ್ನು ಪಡೆದಿದ್ದಾರೆ ಎಂದು ಹೇಳುವ ಯತ್ನ ಮಾಡಲಾಗಿದೆ. ಬಹುತೇಕ ಈ ಎಲ್ಲ ಹಂತಗಳಲ್ಲೂ ಅಂಕಗಳು ಕಡಿಮೆಯಾಗಿವೆ.

3, 5 ಹಾಗೂ 8ನೇ ತರಗತಿ ಮಕ್ಕಳ ಭಾಷೆ ಕಲಿಕೆ ಸಾಮರ್ಥ್ಯದಲ್ಲಿ ವ್ಯತ್ಯಾಸವಿದೆ. 2017ಕ್ಕೆ ಹೋಲಿಸಿದರೆ 2021ರಲ್ಲಿ ಈ ಮೂರೂ ತರಗತಿಗಳ ವಿದ್ಯಾರ್ಥಿಗಳ ಅಂಕಗಳು ಕುಸಿತ ಕಂಡಿವೆ. ಗಣಿತ ವಿಷಯದಲ್ಲೂ ಇದೇ ರೀತಿ ಆಗಿದೆ. ಆದರೆ 10ನೇ ತರಗತಿಯ ಇಂಗ್ಲಿಷ್‌ನಲ್ಲಿ ಮಾತ್ರ 2017ಕ್ಕೆ ಹೋಲಿಸಿದರೆ (269), 2021ರಲ್ಲಿ (283) ಅಂಕಗಳು ಸ್ವಲ್ಪ ಏರಿಕೆಯಾಗಿವೆ. ಪ್ರೌಢಶಾಲಾ ಹಂತದಲ್ಲಿ, ಆಧುನಿಕ ಭಾರತೀಯ ಭಾಷಾ ವಿಷಯದಲ್ಲಿ ಉಲ್ಲೇಖವಾಗಿರುವ ಕವಿತೆ, ಕಥೆ, ನಾಟಕ ವಸ್ತುವಿಷಯವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ವಿಭಾಗದಲ್ಲಿ ವಿದ್ಯಾರ್ಥಿಗಳು 2017ರಲ್ಲಿ 500ಕ್ಕೆ 252 ಅಂಕ ಪಡೆದಿದ್ದರು. ಆದರೆ 2021ರಲ್ಲಿ ಈ ಸಾಮರ್ಥ್ಯವು 242 ಅಂಕಗಳಿಗೆ ಕುಸಿದಿದೆ.





ಬೋಧನೆ, ಮೂಲಸೌಕರ್ಯ ಸ್ಥಿತಿಗತಿ

3ನೇ ತರಗತಿ | 5ನೇ ತರಗತಿ | 8ನೇ ತರಗತಿ | 10ನೇ ತರಗತಿ



ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲಾ ಶಿಕ್ಷಕರು ಅಧಿಕ ಕಾರ್ಯಭಾರ ಹೊಂದಿದ್ದಾರೆ. ಪೂರ್ವ ಪ್ರಾಥಮಿಕ ಶಾಲೆಯ ಶೇ 37ರಷ್ಟು ಶಿಕ್ಷಕರು ತಾವು ಹೆಚ್ಚು ಕಾರ್ಯಭಾರ ಹೊಂದಿರುವುದಾಗಿ ಪ್ರತಿಕ್ರಿಯಿಸಿದ್ದಾರೆ. ಈ ಕಾರ್ಯಭಾರವು ಪ್ರೌಢಶಾಲೆಯ ಶಿಕ್ಷಕರಲ್ಲಿ ಶೇ 43ಕ್ಕೆ ಏರಿಕೆಯಾಗಿರುವುದು ಕಂಡುಬಂದಿದೆ. ಶೈಕ್ಷಣಿಕ ಹಂತದ ಪ್ರಮುಖ ಘಟ್ಟವಾದ ಎಸ್‌ಎಸ್‌ಎಲ್‌ಸಿಯಲ್ಲಿ ಬೋಧನೆಯ ಜೊತೆಗೆ ಇತರೆ ಕಾರ್ಯಗಳ ಒತ್ತಡವನ್ನು ಶಿಕ್ಷಕರು ಎದುರಿಸುತ್ತಿದ್ದಾರೆ ಎಂದು ಸಮೀಕ್ಷೆ ಹೇಳಿದೆ

ತರಗತಿ ಬೋಧನೆಯಲ್ಲಿ ವಿದ್ಯಾರ್ಥಿಗಳನ್ನು ಸೆಳೆಯಲು ಅತಿಮುಖ್ಯ ಎಂದು ಪರಿಗಣಿತವಾಗಿರುವ ಬೋಧನೋಪಕರಣಗಳು ಹಾಗೂ ಪೂರಕ ಸಲಕರಣೆಗಳ ಪೂರೈಕೆಯಲ್ಲಿ ಕೊರತೆಯಿದೆ ಎಂಬುದರತ್ತ ವರದಿ ಬೊಟ್ಟು ಮಾಡಿದೆ. 3 ಹಾಗೂ 8ನೇ ತರಗತಿಯಲ್ಲಿ ಶೇ 63ರಷ್ಟು ಕೊರತೆಯಿದ್ದರೆ, 5 ಹಾಗೂ 10ನೇ ತರಗತಿಯಲ್ಲಿ ಶೇ 62ರಷ್ಟು ಕೊರತೆ ಕಂಡು ಬಂದಿದೆ

ಶಿಕ್ಷಕರು ತಮ್ಮ ಬೋಧನಾ ವೃತ್ತಿಯನ್ನು ಸುಧಾರಿಸಿಕೊಳ್ಳಲು ನೆರವಾಗುವ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯಲ್ಲಿ ಹಿನ್ನಡೆಯಿದೆ. ಸರಿಸುಮಾರು ಶೇ 50ರಷ್ಟು ಶಿಕ್ಷಕರು ವೃತ್ತಿಯಲ್ಲಿ ಗುಣಮಟ್ಟ ತಂದುಕೊಳ್ಳುವ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿಲ್ಲ ಎಂದು ವರದಿ ಹೇಳಿದೆ

ಅಂಗವಿಕಲರು ಹಾಗೂ ಇತರೆ ದೈಹಿಕ, ಮಾನಸಿಕ ನ್ಯೂನತೆ ಎದುರಿಸುತ್ತಿರುವ ಮಕ್ಕಳಿಗೆ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳ ಪ್ರಮಾಣವೂ ಸುಧಾರಿಸಬೇಕಿದೆ ಎಂದು ವರದಿಯ ಅಂಕಿಅಂಶಗಳು ಹೇಳುತ್ತವೆ. ಪ್ರಾಥಮಿಕ ಹಾಗೂ ಪ್ರೌಢ ಹಂತದಲ್ಲಿ ಸುಮಾರು ಶೇ 25ರಷ್ಟು ಅಂಗವಿಕಲ ವಿದ್ಯಾರ್ಥಿಗಳು ಅಗತ್ಯ ಸೌಲಭ್ಯಗಳಿಂದ ದೂರ ಉಳಿದಿದ್ದಾರೆ

ಶಾಲಾ ಕಟ್ಟಡಗಳ ಗುಣಮಟ್ಟವೂ ಶೈಕ್ಷಣಿಕ ಚಟುವಟಿಕೆಯಲ್ಲಿ ಅತಿಮುಖ್ಯ. ಆದರೆ ರಾಜ್ಯದ 3ನೇ ತರಗತಿ ಹಂತದ ಶಾಲಾ ಕಟ್ಟಡಗಳನ್ನು ಸಂಪೂರ್ಣವಾಗಿ ದುರಸ್ತಿ ಮಾಡಬೇಕಿದೆ ಎಂದು ಶೇ 23ರಷ್ಟು ಶಿಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಪ್ರೌಢಶಾಲಾ ಹಂತದಲ್ಲಿ ಕಟ್ಟಡಗಳ ದುರಸ್ತಿ ಬೇಡಿಕೆ ಸ್ವಲ್ಪ ಕಡಿಮೆಯಿದೆ.

ಆಧಾರ: ರಾಷ್ಟ್ರೀಯ ಸಾಧನೆ ಸಮೀಕ್ಷೆಯ ವರದಿ 2021

ಓದಲು, ಬರೆಯಲು ತೊಡಕು

ದೇಶದ ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ 10ನೇ ತರಗತಿ ಮಕ್ಕಳಿಗೆ ಆಧುನಿಕ ಭಾರತೀಯ ಭಾಷೆಯೊಂದನ್ನು (ಎಂಐಎಲ್) ಬೋಧಿಸಲಾಗುತ್ತದೆ. ಸಂಸ್ಕೃತ, ಹಿಂದಿ, ಬಂಗಾಳಿ, ಕನ್ನಡ, ತಮಿಳು ಸೇರಿ ಒಟ್ಟು 21 ಭಾಷೆಗಳನ್ನು ಆಧುನಿಕ ಭಾರತೀಯ ಭಾಷೆ ಎಂದು ವರ್ಗೀಕರಿಸಲಾಗಿದೆ. ಆದರೆ ದೇಶದಾದ್ಯಂತ ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳಲ್ಲಿ ಅರ್ಧಕ್ಕೂ ಹೆಚ್ಚಿನವರು, ಎಂಐಎಲ್‌ನಲ್ಲಿ ಇರುವ ಪಠ್ಯವನ್ನು ಓದಲು, ಬರೆಯಲು ಮತ್ತು ಅರ್ಥಮಾಡಿಕೊಳ್ಳಲು ಬರುವುದಿಲ್ಲ ಎಂದು ಹೇಳಿದ್ದಾರೆ.

ಹಿಂದಿ ಭಾಷಿಕ ರಾಜ್ಯಗಳಲ್ಲಿ ಹಿಂದಿಯೇತರ ಭಾಷೆಯನ್ನು ಎಂಐಎಲ್ ಆಗಿ ಬೋಧಿಸಲಾಗುತ್ತದೆ. ಹಿಂದಿಯೇತರ ಭಾಷಿಕ ರಾಜ್ಯಗಳಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಹೊರತುಪಡಿಸಿದ ಭಾಷೆಗಳನ್ನು ಎಂಐಎಲ್ ಆಗಿ ಬೋಧಿಸಲಾಗುತ್ತದೆ. ಈ ಸಮೀಕ್ಷೆಯಲ್ಲಿ ಭಾಗಿಯಾದ ಎಲ್ಲಾ ರಾಜ್ಯಗಳ ವಿದ್ಯಾರ್ಥಿಗಳಲ್ಲಿ, ಶೇ 59ರಷ್ಟು ಜನರು ಎಂಐಎಲ್‌ನಲ್ಲಿ ಇರುವ ಕವನ, ಗದ್ಯ ಮತ್ತು ನಾಟಕಗಳನ್ನು ಓದಲು–ಬರೆಯಲು ಮತ್ತು ಅರ್ಥಮಾಡಿಕೊಳ್ಳಲು ಬರುವುದಿಲ್ಲ ಎಂದು ಹೇಳಿದ್ದಾರೆ.

ಕರ್ನಾಟಕದಲ್ಲೂ ಶೇ 65ರಷ್ಟು ವಿದ್ಯಾರ್ಥಿಗಳು ಎಂಐಎಲ್‌ನಲ್ಲಿ ಇರುವ ಕವನ, ಗದ್ಯ ಮತ್ತು ನಾಟಕಗಳನ್ನು ಓದಲು–ಬರೆಯಲು ಮತ್ತು ಅರ್ಥಮಾಡಿಕೊಳ್ಳಲು ಬರುವುದಿಲ್ಲ ಎಂದು ಹೇಳಿದ್ದಾರೆ.

ಗ್ರಹಿಕೆ ಸಾಧಾರಣ

ರಾಜ್ಯದಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು, ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಲ್ಲಿ ಆಧುನಿಕ ಭಾರತದ ಭಾಷೆಯ ಗ್ರಹಿಕೆಯ ಮಟ್ಟ ಒಂದೇ ತೆರನಾಗಿದೆ. ಈ ಎಲ್ಲಾ ವರ್ಗದ ವಿದ್ಯಾರ್ಥಿಗಳಲ್ಲಿ ಶೇ 99ರಷ್ಟು ವಿದ್ಯಾರ್ಥಿಗಳಿಗೆ ಆಧುನಿಕ ಭಾರತೀಯ ಭಾಷೆಯ ಗ್ರಹಿಕೆ ಮತ್ತು ಕಲಿಕೆಯ ಮಟ್ಟ ಸಾಧಾರಣ ಮತ್ತು ಸಾಧಾರಣ ಮಟ್ಟಕ್ಕಿಂತಲೂ ಕಡಿಮೆ ಇದೆ ಎಂದು ಸಮೀಕ್ಷೆ ಹೇಳಿದೆ.



ಇಂಗ್ಲಿಷ್‌ನಲ್ಲೂ ತೊಡಕು

ಸಮೀಕ್ಷೆಯಲ್ಲಿ ಭಾಗಿಯಾದ ರಾಜ್ಯದ 10ನೇ ತರಗತಿಯ ಶೇ 54ರಷ್ಟು ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿನ ಸಂಕೀರ್ಣ ಪಠ್ಯಗಳನ್ನು ಸ್ವತಂತ್ರವಾಗಿ ಓದಲು, ಗ್ರಹಿಸಲು ಬರುವುದಿಲ್ಲ ಎಂದು ಹೇಳಿಕೊಂಡಿದ್ದಾರೆ



ಶಾಲೆಗೆ ಕಾಲ್ನಡಿಗೆ ಯಾತ್ರೆ

ಈ ಸಮೀಕ್ಷೆಯಲ್ಲಿ ಭಾಗಿಯಾದ ದೇಶದ ಎಲ್ಲಾ ವಿದ್ಯಾರ್ಥಿಗಳಲ್ಲಿ ಶೇ 48ರಷ್ಟು ವಿದ್ಯಾರ್ಥಿಗಳು ಕಾಲ್ನಡಿಗೆ ಮೂಲಕ ಶಾಲೆಗೆ ಹೋಗುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಸೈಕಲ್‌ನಲ್ಲಿ ಶಾಲೆ ತಲುಪುವ ವಿದ್ಯಾರ್ಥಿಗಳ ಪ್ರಮಾಣ ಶೇ 18ರಷ್ಟು





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 131

ಸಂಧ್ಯೆ ತಪಸ್ಸು ಮೆಚ್ಚಿದ ಶಿವ

ಸಂಧ್ಯಾದೇವಿ ಹೇಗೆ ತಪಸ್ಸನ್ನಾಚರಿಸಿದಳು ಎಂಬುದನ್ನು ಸತೀಖಂಡದ ಐದನೇ ಅಧ್ಯಾಯದಲ್ಲಿ ಬ್ರಹ್ಮ ನಾರದನಿಗೆ ತಿಳಿಸುತ್ತಾನೆ.

ವಸಿಷ್ಠಮುನಿಯು ತಪಸ್ಸಿನ ಸ್ವರೂಪವನ್ನು ಸಂಧ್ಯೆಗೆ ಉಪದೇಶಿಸಿ ಹೋದಮೇಲೆ, ಅವಳು ತಪಸ್ಸಿಗೆ ಯೋಗ್ಯವಾದ ವೇಷವನ್ನು ಧರಿಸಿದಳು. ಬೃಹಲ್ಲೋಹಿತ ಸರಸ್ಸಿನ ತೀರದಲ್ಲಿ ಕುಳಿತು ತಪಸ್ಸನ್ನು ಪ್ರಾರಂಭಿಸಿದಳು. ತಪಸ್ಸಿಗೆ ಸಾಧನವಾದ ಶಿವಪಂಚಾಕ್ಷರೀ ಮಂತ್ರದಿಂದ ಭಕ್ತಿಪೂರ್ವಕವಾಗಿ ಶಂಕರನನ್ನು ಪೂಜಿಸಿದಳು. ಸ್ಥಿರವಾದ ಮನಸ್ಸಿನಿಂದ ಶಂಕರನಲ್ಲಿಯೇ ಬುದ್ಧಿಯನ್ನಿರಿಸಿ, ನಾಲ್ಕು ಯುಗಗಳ ಕಾಲ ಮಹತ್ತಾದ ತಪವನ್ನಾಚರಿಸತೊಡಗಿದಳು.

ಆಗ ಶಂಕರನು ಸಂಧ್ಯೆಯ ತಪಸ್ಸಿಗೆ ಮೆಚ್ಚಿ ಪ್ರಸನ್ನನಾದ. ಅವಳು ಧ್ಯಾನಿಸುತ್ತಿರುವಂತಹ ಸ್ವರೂಪದಿಂದಲೇ ಆಕಾಶದ ಒಳಗೂ ಹೊರಗೂ ಗೋಚರಿಸಿ, ಅವಳೆದುರಿಗೆ ಪ್ರತ್ಯಕ್ಷನಾದ. ಶಿವನನ್ನು ಕಂಡು ಸಂಧ್ಯೆ ತುಂಬಾ ಹರ್ಷಗೊಂಡಳು. ಹಾಗೇ, ಗಾಬರಿಗೊಂಡು ಏನು ಹೇಳಲಿ? ಶಿವನನ್ನು ಹೇಗೆ ಸ್ತುತಿಸಲಿ ಎಂದು ತಿಳಿಯದೆ ಚಿಂತಿಸುತ್ತಾ ಕಣ್ಣುಗಳನ್ನು ಮುಚ್ಚಿಕೊಂಡಳು. ಸಂಧ್ಯೆಯು ಗಾಬರಿಯಿಂದ ಕಣ್ಣುಗಳನ್ನು ಮುಚ್ಚಿದಾಗ ಶಿವ ಅವಳ ಹೃದಯವನ್ನು ಪ್ರವೇಶಿಸಿ ದಿವ್ಯಜ್ಞಾನವನ್ನೂ ದಿವ್ಯವಾಕ್ಕನ್ನೂ ದಿವ್ಯವಾದ ದೃಷ್ಟಿಯನ್ನೂ ಅನುಗ್ರಹಿಸಿದ. ಕಣ್ತೆರೆದು ತನ್ನೆದುರು ಪ್ರತ್ಯಕ್ಷನಾದಂತಹ ಜಗದೊಡೆಯನಾದ ಉಮಾಪತಿಯನ್ನು ನೋಡಿ ಸಂತೋಷದಿಂದ ಸ್ತುತಿಸತೊಡಗಿದಳು.

'ಆಕಾರವಿಲ್ಲದ, ಜ್ಞಾನದಿಂದ ಪಡೆಯಲ್ಪಡುವ. ಉತ್ಕೃಷ್ಟವಾದ, ಸ್ಥೂಲತ್ವ, ದೀರ್ಘತ್ವ ಮುಂತಾದ ವಿಕಾರವಿಲ್ಲದ, ಯೋಗಿಗಳಿಂದ ಹೃದಯದಲ್ಲಿ ಧ್ಯಾನಿಸಲ್ಪಡುವ ಯಾವ ಪರಬ್ರಹ್ಮಸ್ವರೂಪವುಂಟೋ, ಅಂತಹ ಬ್ರಹ್ಮಸ್ವರೂಪನಾದ ನಿನಗೆ ನಮಸ್ಕಾರ. ಜಗತ್ತನ್ನು ಸೃಷ್ಟಿಸುವ ಬ್ರಹ್ಮನೂ ನೀನೆ, ಪಾಲಿಸುವ ವಿಷ್ಣುವೂ ನೀನೆ, ಸಂಹರಿಸುವ ರುದ್ರನೂ ನೀನೆ. ಬ್ರಹ್ಮನೇ ಮೊದಲಾದವರಿಗೆ ಕಾರಣನೂ, ಅಮೃತ ಜ್ಞಾನ ಐಶ್ವರ್ಯಗಳನ್ನು ಕೊಡುವವನು. ಪ್ರಕಾಶಸ್ವರೂಪನೂ, ಅತ್ಯಂತ ಉತ್ಕೃಷ್ಟನೂ ಆದ ನಿನಗೆ ನಮಸ್ಕಾರ. ಭೂಮಿ, ದಿಕ್ಕುಗಳು, ಸೂರ್ಯ, ಚಂದ್ರ, ಮನಸ್ಸು, ಬ್ರಹ್ಮ, ದೇವತೆಗಳು ಮುಂತಾದ ಈ ಜಗತ್ತು ಯಾವ ಈಶ್ವರನಿಗಿಂತಲೂ ಭಿನ್ನವಾಗಿಲ್ಲವೆಂದು 'ಸರ್ವಂ ಖಲ್ವಿದಂ ಬ್ರಹ್ಮ' ಮುಂತಾದ ಶ್ರುತಿಗಳು ಹೇಳುವವೋ, ಯಾರ ನಾಭಿಯಿಂದ ಆಕಾಶವೂ ಜನಿಸಿರುವುದೋ, ಅಂತಹ ಶಂಕರನಿಗೆ ನಮಸ್ಕಾರ. ನಿರ್ಗುಣನಾದ ನಿನ್ನ ಮಾಯಾಮಯವಾದ ಗುಣಗಳನ್ನು ಇಂದ್ರ ಮೊದಲಾದ ದೇವದಾನವರೂ ತಿಳಿಯಲಾರರು. ಅಂದಮೇಲೆ ಸ್ತ್ರೀಮಾತ್ರಳಾದ ನಾನು ಹೇಗೆ ತಿಳಿಯಬಲ್ಲೆ?' ಎಂದು ಸಂಧ್ಯೆ ಸ್ತೋತ್ರ ಮಾಡಿದಳು.

ಇದನ್ನು ಕೇಳಿದ ಭಕ್ತವತ್ಸಲನಾದ ಪರಮೇಶ್ವರ ತುಂಬಾ ಪ್ರಸನ್ನನಾದ. ಬಳಿಕ ಶಿವನು ಸಂಧ್ಯೆ ಉಟ್ಟಿರುವ ನಾರುಬಟ್ಟೆ ಮತ್ತು ಕೃಷ್ಣಾಜಿನಗಳನ್ನೂ, ಶಿರಸ್ಸಿನಲ್ಲಿ ಧರಿಸಿರುವ ಜಟೆಗಳನ್ನೂ, ಹಿಮದ ತುಂತುರುಗಳಿಂದ ಮಲಿನವಾದ ಶರೀರವನ್ನೂ, ಕಮಲದಂತಿರುವ ಮುಖವನ್ನೂ ನೋಡಿ ದಯೆಯುಳ್ಳವನಾಗಿ ಸಂಧ್ಯೆಯನ್ನು ಕುರಿತು ಹೀಗೆ ಹೇಳಿದ:

'ಎಲೈ, ಮಂಗಳರೂಪಿಯಾದ ಸಂಧ್ಯೆಯೇ! ನಿನ್ನ ಮಹತ್ತಾದ ತಪಸ್ಸಿನಿಂದ, ಸ್ತೋತ್ರದಿಂದ ಪ್ರಸನ್ನನಾಗಿರುವೆ. ನಿನಗೆ ಬೇಕಾದ ವರವನ್ನು ಕೇಳು. ನಿನ್ನ ಮನಸ್ಸಿನಲ್ಲಿ ಯಾವ ಕಾರ್ಯವು ಆಗಬೇಕೆಂದಿರುವುದೋ ಅದನ್ನು ಹೇಳು, ನಡೆಸಿ ಕೊಡುವೆ' ಎಂದ. ಮಹೇಶ್ವರನು ಹೇಳಿದ ಮಾತುಗಳನ್ನು ಕೇಳಿ ಸಂಧ್ಯೆಯು ತುಂಬಾ ಹರ್ಷಗೊಂಡು ಶಿವನನ್ನು ಪುನಃ ಪುನಃ ನಮಸ್ಕರಿಸಿ ಹೀಗೆ ಹೇಳಿದಳು:

'ಓ ಶಂಕರನೆ! ದೇವದೇವನಾದ ನೀನು ನನ್ನಲ್ಲಿ ಅನುಗ್ರಹವುಳ್ಳವನಾಗಿದ್ದರೆ, ನಿನ್ನಿಂದ ವರವನ್ನು ಪಡೆಯಲು ನಾನು ಯೋಗ್ಯಳಾಗಿದ್ದರೆ ಮತ್ತು ನಾನು ಪಾಪದಿಂದ ಪರಿಶುದ್ಧಳಾಗಿದ್ದರೆ, ನನ್ನ ತಪಸ್ಸಿನಿಂದ ನೀನು ಪ್ರಸನ್ನನೂ ಆಗಿದ್ದರೆ ನನ್ನ ಕೋರಿಕೆಗಳನ್ನು ಈಡೇರಿಸು. ಮೊದಲಿಗೆ ಈ ಪ್ರಪಂಚದಲ್ಲಿ ಪ್ರಾಣಿಗಳು ಜನಿಸಿದೊಡನೆಯೇ ಕಾಮವಿಕಾರವನ್ನು ಹೊಂದಬಾರದು. ಹಾಗೇ, ನನ್ನ ವೃತ್ತಾಂತವು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿ ಅದರಿಂದ ನಾನೂ ಪ್ರಸಿದ್ಧಳಾಗುವಂತೆ ಮಾಡು. ನನ್ನ ದೃಷ್ಟಿಯು ನನ್ನ ಪತಿಯ ಹೊರತು ಇನ್ನೆಲ್ಲಿಯೂ ಕಾಮ ವಿಕಾರವುಳ್ಳದ್ದಾಗಬಾರದು. ನನ್ನ ಪತಿಯಾಗುವವನು ನನ್ನಲ್ಲಿ ತುಂಬಾ ಪ್ರೇಮವುಳ್ಳವನಾಗಬೇಕು. ನನ್ನನ್ನು ಕಾಮದೃಷ್ಟಿಯಿಂದ ನೋಡಿದ ಪರಪುರುಷನ ಪೌರುಷವೂ ನಾಶವಾಗಿ, ಅವನು ನಪುಂಸಕನಾಗಬೇಕು. ಈ ರೀತಿ ವರವನ್ನು ಕೊಡು' ಎಂದು ಪ್ರಾರ್ಥಿಸಿದಳು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ವ್ಯತ್ಯಾಸಗಳ ಗೊಡವೆಯೇಕೆ?

ಸಿರಿದರಿದ್ರತೆಗಳ್ಗೆ ಫಲದೊಳಂತರ ಕಿರಿದು |
ಸರಿತಪ್ಪುಗಳಿಗಂತು, ಜಾಣ ಬೆಪ್ಪುಗಳ್ಗಂ ||
ಮರಣವೆಲ್ಲವನೊಂದೆ ತೆರದಿ ಮುಸುಕುವುದೆಂದೊ |
ಪರವೆಯೆಂತಾದೊಡೇಂ – ಮಂಕುತಿಮ್ಮ || 637 ||

ಪದ-ಅರ್ಥ: ಸಿರಿದರಿದ್ರತೆಗಳ್ಗೆ = ಸಿರಿ(ಶ್ರೀಮಂತಿಕೆ) + ದರಿದ್ರತೆಗಳ್ಗೆ (ಬಡತನಗಳಿಗೆ), ಫಲದೊಳಂತರ = ಫಲದೊಳೆ (ಫಲದಲ್ಲಿ) + ಅಂತರ, ಸರಿತಪ್ಪುಗಳಿಗಂತು = ಸರಿತಪ್ಪುಗಳಿಗೆ + ಅಂತು, ಮರಣವೆಲ್ಲವನೊಂದೆ = ಮರಣವು + ಎಲ್ಲವನು + ಒಂದೆ, ಪರವೆಯೆಂತಾದೊಡೇಂ = ಪರವೆ(ಕಾಳಜಿ, ಗೊಡವೆ) + ಎಂತಾದೊಡೇಂ (ಹೇಗಾದರೇನು).

ವಾಚ್ಯಾರ್ಥ: ಶ್ರೀಮಂತಿಕೆ, ಬಡತನಗಳ ಫಲದಲ್ಲಿ ಅಂತರ ಕಡಿಮೆ. ಅದರಂತೆ ಸರಿ ಮತ್ತು ತಪ್ಪುಗಳ ನಡುವೆ, ಬುದ್ಧಿವಂತಿಕೆ ಮತ್ತು ದಡ್ಡತನಗಳ ನಡುವಿನ ಅಂತರ. ಸಾವು ಎಲ್ಲವನ್ನು ಒಂದೇ ರೀತಿಯಲ್ಲಿ ಮುಸುಕಿಬಿಡುತ್ತದೆ. ಏನಾದರಾಗಲಿ, ನಮಗೆ ಅದರ ಗೊಡವೆಯೇಕೆ?

ವಿವರಣೆ: ಗಂಗೋತ್ರಿಯಲ್ಲಿ ಒಂದು ಸಣ್ಣ ಝರಿಯಾಗಿ ಹುಟ್ಟಿದ ನದಿ ಮುಂದೆ ಮತ್ತೆ ಕೆಲವು ಹಳ್ಳಗಳನ್ನು ಸೇರಿಕೊಳ್ಳುತ್ತ ದೊಡ್ಡದಾಗಿ ಹರಿದು ಗಂಗೆಯಾಗುತ್ತದೆ. ಗಂಗಾನದಿ ಮೊಟ್ಟಮೊದಲ ಬಾರಿಗೆ ಪರ್ವತದ ಶಿಖರಗಳಿಂದ ಇಳಿದು ಬರುವುದನ್ನು ಕಲ್ಪಿಸಿಕೊಳ್ಳಿ. ಅದು ಸಣ್ಣಪುಟ್ಟ ತಗ್ಗು-ದಿನ್ನೆಗಳನ್ನು ಕಷ್ಟಪಟ್ಟು ದಾಟುತ್ತ, ಹತ್ತಾರು ಬಾರಿ ತನ್ನ ದಿಕ್ಕು ದಿಶೆಗಳನ್ನು ಬದಲಾಯಿಸುತ್ತ ನಡೆಯುತ್ತದೆ. ನಡನಡುವೆ ಅದರ ಪಾತ್ರ ಕಿರಿದಾದೀತು ಅಥವಾ ವಿಸ್ತಾರವಾದೀತು. ಅದೇನೇ ಆದರೂ ಅದನ್ನು ಜನ ಗುರುತಿಸುವುದು ಗಂಗೆಯೆಂದೇ. ಅದೇ ರೀತಿಯಲ್ಲಿ ಮನುಷ್ಯನ ಬದುಕು ಕೂಡ ಏರಿಳಿತಗಳಲ್ಲೇ ಸಾಗುತ್ತದೆ. ಏರು ಬಂದಾಗ ಶ್ರೀಮಂತಿಕೆಯೆಂತಲೂ, ಇಳಿಜಾರು ಬಂದಾಗ ಬಡತನವೆಂತಲೂ ಜನ ಗುರುತಿಸುತ್ತಾರೆ. ಆದರೆ ಮೂಲತಃ ವ್ಯಕ್ತಿ ಅದೇ. ಗಂಗೆಯ ಮಗ ಭೀಷ್ಮ, ಅವನಂತಹ ಪರಾಕ್ರಮಶಾಲಿ, ನ್ಯಾಯನಿಷ್ಠುರ ಯಾರೂ ಇಲ್ಲ ಎಂಬ ಪ್ರತೀತಿ. ಅವನ ಪ್ರತಿಜ್ಞೆ ದಂತಕಥೆಯಾಯಿತು. ಆದರೆ ಕೊನೆಗೆ ತನ್ನ ತಮ್ಮನ ಮಗ ಧೃತರಾಷ್ಟ್ರನಿಗೆ ಏನೂ ಹೇಳಲು ಆಗದೆ ಅಸಹಾಯಕನಾಗಿ, ಅನ್ಯಾಯದ ಪರ ನಿಂತು ಹೋರಾಡಿ, ಕೊನೆಗೆ ಶರಶಯ್ಯೆಯಲ್ಲಿ ಮಲಗಿ, ರಕ್ತ ಬಸಿದುಕೊಂಡು ಸಾವಿಗಾಗಿ ಉತ್ತರಾಯಣ ಪರ್ವಕಾಲಕ್ಕೆ ಕಾಯಬೇಕಾದ ಪರಿಸ್ಥಿತಿ ತಂದುಕೊಂಡ. ಅವನು ಮಾಡಿದ್ದು ಸರಿಯೋ, ತಪ್ಪೋ? ಅವನು ಜಾಣನೋ, ಬೆಪ್ಪನೋ? ತಿಳಿಯುವುದು ಹೇಗೆ? ಯಾಕೆಂದರೆ ಬದುಕಿನಲ್ಲಿ ಆತ ಎರಡನ್ನೂ ಪ್ರದರ್ಶಿಸಿದವನು. ಸೀತೆ ರಾಮನನ್ನು ಮಾಯಾಜಿಂಕೆಯನ್ನು ಹಿಡಿದುಕೊಂಡು ಬರಲು ಕಳುಹಿಸಿ, ಆತ ಮಾಯಾವಿಯ ಕೂಗನ್ನು ಕೇಳಿ, ಲಕ್ಷ್ಮಣನನ್ನು ಒತ್ತಾಯದಿಂದ ಕಳುಹಿಸಿದ್ದು ಸರಿಯೋ, ತಪ್ಪೋ? ಲಕ್ಷ್ಮಣನನ್ನು ಸಂಶಯಿಸಿ ಕಳುಹಿಸಿದ್ದು ತಪ್ಪು ಎನ್ನುವುದಾದರೆ, ಲಕ್ಷ್ಮಣ ಹೋಗಿರದಿದ್ದರೆ, ಆಕೆಯ ಅಪಹರಣ, ಅದರ ಪರಿಣಾಮವಾಗಿ ರಾವಣನ ವಧೆ ಆಗುತ್ತಿರಲಿಲ್ಲ. ಸದಾಕಾಲದ ಭೋಗದಲ್ಲಿರಬೇಕೆಂದು ಮಗನ ಯೌವನವನ್ನೇ ಪಡೆದು ಸುಖಿಸದ ಯಯಾತಿ ಕೊನೆಗೆ ಎಲ್ಲವನ್ನೂ ತೊರೆದು ಸಂನ್ಯಾಸಿಯಾಗಿ ಸಂತೋಷ ಪಡೆದ. ಹಾಗಾದರೆ ಸಿರಿ, ದಾರಿದ್ರ್ಯಗಳ ವ್ಯತ್ಯಾಸವೇನು? ಯಾವುದು ಸುಖ ಕೊಟ್ಟೀತು?

ಇದನ್ನು ಕಗ್ಗ ಸಂಗ್ರಹರೂಪವಾಗಿ ಹೇಳುತ್ತದೆ. ಶ್ರೀಮಂತಿಕೆ, ಬಡತನಗಳಲ್ಲಿ ಬಹಳ ವ್ಯತ್ಯಾಸವಿಲ್ಲ. ಯಾಕೆಂದರೆ ಅದು ನೋಡುವ ದೃಷ್ಟಿಯಲ್ಲಿದೆ. ಬಡತನದಲ್ಲೂ ಸಂತೋಷಪಡುವವರಿದ್ದಾರೆ, ಶ್ರೀಮಂತಿಕೆಯಲ್ಲಿ ನರಳುವವರೂ ಇದ್ದಾರೆ. ಇದೇ ರೀತಿ ನ್ಯಾಯಾಧೀಶನಂತೆ ತಕ್ಕಡಿ ಹಿಡಿದುಕೊಂಡು, ಯಾವುದು ಸರಿ, ಯಾವುದು ತಪ್ಪು, ಯಾರು ಜಾಣ, ಯಾರು ಬೆಪ್ಪ ಎಂದು ಲೆಕ್ಕ ಹಾಕುವುದು ಬೇಡ. ಸಾವು ಎಂಬ ಸಮದರ್ಶಿ ಎಲ್ಲವನ್ನೂ ಒಂದೇ ರೀತಿ ನೋಡಿ ಮುಸುಕಿಬಿಡುತ್ತಾನೆ. ನಮ್ಮ ಬದುಕನ್ನು ನೇರವಾಗಿ ಮಾಡಿಕೊಳ್ಳೋಣ, ಈ ವ್ಯತ್ಯಾಸಗಳ ಗೊಡವೆ ನಮಗೇಕೆ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮೇ 27, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ತ್ರಯೋದಶಿ ಗಂ. 13-10 ನಕ್ಷತ್ರ: ಭರಣಿ ಗಂ. 28-39 ಯೋಗ: ಶೋಭನ ಗಂ. 22-22, ಕರಣ: ವಣಿಜ ಗಂ. 13-10, ವೃಷಭ ಮಾಸದ 13 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-06 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 26 ಶವ್ವಾಲ್
ದಿನ ವಿಶೇಷ : ಸಾವಿತ್ರಿ ಚತುರ್ದಶಿ
ಅದೃಷ್ಟ ಸಂಖ್ಯೆ : 5, 11

ಮೇಷ: ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣಿತಿ ಪಡೆದುಕೊಳ್ಳುವಿರಿ. ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ ಹೆಚ್ಚಲಿದೆ. ದೈವಾನುಗ್ರಹದಿಂದ ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿಯೂ ಇಷ್ಟಾರ್ಥ ಸಿದ್ಧಿಸುವುದು.

ವೃಷಭ: ಸ್ವಲ್ಪ ಪರಿಶ್ರಮವೂ ಕೂಡ ಈ ದಿನ ಕಾರ್ಯಸಾಧನೆಯಲ್ಲಿ ಪ್ರದರ್ಶಿಸಲು ಸಾಧ್ಯವಾಗದಂತೆ ಆಗಲಿದೆ. ಈ ಹಿಂದೆ ಪಾರಂಭವಾಗಿರುವ ಕಾರ್ಯಗಳು ಮನುಷ್ಯ ಪ್ರಯತ್ನದ ಕೊರತೆಯಿಂದಾಗಿ ಸ್ತಬ್ಧವಾದಂತಾಗಲಿದೆ.

ಮಿಥುನ: ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು ಹಾಗೂ ಮನೆಯಲ್ಲಿ ದೇವತಾಕಾರ್ಯಕ್ರಮಗಳನ್ನು ಏರ್ಪಡಿಸುವಿರಿ. ಕರಕುಶಲ ವಸ್ತು ತಯಾರಕರು ಉತ್ತಮವಾದ ಕೆಲಸಗಳಿಂದ ಆದಾಯ ಹೆಚ್ಚಿಸಿಕೊಳ್ಳಬಹುದು.

ಕರ್ಕಾಟಕ: ಸಮಾನ ಮನಸ್ಕರಲ್ಲಿನ ಮಾತುಕತೆಗಳಿಂದಾಗಿ ಕೆಲಸಕಾರ್ಯಗಳು ಸುಗಮವಾಗುತ್ತದೆ. ಸಾಮಾಜಿಕ ವ್ಯವಹಾರಗಳಿಂದ ದೂರವಿದ್ದಷ್ಟು ಉತ್ತಮ. ಸಂಘರ್ಷದ ವಾತಾವರಣ ಸೃಷ್ಟಿಯಾಗಬಹುದು.

ಸಿಂಹ: ಹಲವು ದಿನದ ಬಿಡುವಿಲ್ಲದ ಕೆಲಸದಿಂದ ಬಳಲಿರುವ ನೀವು ವಿಶ್ರಾಂತಿಗಾಗಿ ಸ್ವಲ್ಪ ಸಮಯವನ್ನು ಮೀಸಲಿಡುವುದು ಉತ್ತಮ. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭ.

ಕನ್ಯಾ: ಸ್ವತಂತ್ರ ಮನೋಭಾವದಿಂದ ಹೊರ ಬರುವಂತಾಗಲಿದೆ. ಮನೆಯಲ್ಲಿ ಅಗತ್ಯ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಆದರಿಂದಾಗಿ ಮನೆಯ ವಾತಾವರಣ ಸರಿಯಾಗಿರುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ.

ತುಲಾ: ಬಯಸಿದ ಕೆಲಸಗಳನ್ನು ನೀವು ಇಂದು ತ್ವರಿತವಾಗಿ ಮಾಡಿ ಮುಗಿಸುತ್ತೀರಿ. ಆಟೊಮೊಬೈಲ್ಸ್ ಸಂಬಂಧಿತ ಕೆಲಸಗಾರರಿಗೆ ಹರ್ಷದಾಯಕ ದಿನ. ನಿಮ್ಮ ದೈಹಿಕ ಶ್ರಮವೇ ಈ ದಿನದ ಯಶಸ್ಸಿನ ಗುಟ್ಟಾಗಿರುವುದು.

ವೃಶ್ಚಿಕ: ಕುಟುಂಬ ಅಭಿವೃದ್ಧಿಯ ನಿಂತುಹೋಗಿದ್ದ ಕೆಲವು ಕಾರ್ಯಗಳು ಪುನಃ ಆರಂಭಗೊಳ್ಳುವುದು. ವ್ಯಾಪಾರ ವ್ಯವಹಾರದಲ್ಲಿ ಲಾಭ, ನಷ್ಟ ಏನೇ ಆದರೂ ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ದ್ವಿಚಕ್ರ ವಾಹನ ಕೊಳ್ಳುವ ಯೋಗ.

ಧನು: ರಬ್ಬರ್ ಮತ್ತು ಪ್ಲಾಸ್ಟಿಕ್ ವ್ಯಾಪಾರಗಳಿಂದ ಲಾಭ. ಮುಖ್ಯವಾದ ಮತ್ತು ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಬೇಕಾಗುವುದು. ಭೋಜನದ ಸಮಯವನ್ನು ಸ್ನೇಹಿತರೊಂದಿಗೆ ಕಳೆಯುವಿರಿ.

ಮಕರ: ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ. ನೀವು ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ, ಕೂಡಲೇ ಬಗೆಹರಿಸಿಕೊಳ್ಳಿರಿ. ಅನನ್ಯ ಭಕ್ತಿಯಿಂದ ಮಲ್ಲಿಕಾರ್ಜುನನನ್ನು ಆರಾಧಿಸಿ.

ಕುಂಭ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿ ಬಂದರೂ ಅಭಿವೃದ್ಧಿದಾಯಕವಾದ ಬೆಳವಣಿಗೆ ಹರ್ಷ ತರವುದು. ಮುಖಂಡತ್ವದ ಸಾಮಾಜಿಕ ಕಾರ್ಯಕ್ಕೆ ಗ್ರಾಮಸ್ಥರಿಂದ ನಿರೀಕ್ಷೆಗೂ ಮೀರಿ ಸಹಾಯ ಸೌಹಾರ್ದಗಳು ದೊರೆಯುವುದು.

ಮೀನ: ವಿಶ್ರಾಂತಿ ಇಲ್ಲದ ಕೆಲಸದಿಂದ ದೇಹಾಯಾಸ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶ. ಪ್ರವಾಸ ಹೋಗುವ ವಿಷಯದಲ್ಲಿ ಕುಟುಂಬದ ಸದಸ್ಯರು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳುವರು.

ಪದಬಂಧ 4970

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಯ ದಾಡೆ (3)
3.ತತ್ತರಿಸುತ್ತಾ ನೀಡಿದ ಜವಾಬು! (3)
5.ಅಭಾವದಲ್ಲಿ ಬಂದ ಅಕ್ಕನ ಗಂಡ (2)
6.ಸರಾಸರಿ ಹೇಳಿರುವುದು ತಪ್ಪಲ್ಲ! (2)
8.ಕೂಸು ಎದ್ದಿದ್ದು ಬೆಳಗಿನ ಜಾವ! (3)
9.ತಕ ತಕ ಕುಣಿಯಲು ಅತೀ ಆತುರ! (3)
11.ಕರಿಯ ಮರಿ ಬಿದ್ದ ಗುಂಡಿ (3)
12.ವಿಧಿ ನಿರ್ಣಯಿಸುವಾತ (3)
13.ಮಲಗುವಾಗ ಬಂದ ಅಡಿಯಾಳು (3)
15.ಪಾದದ ಬಳಿಯಿರುವ ಮರದ ಮೆಟ್ಟು (3)
17.ನಿಯಮ ಹೇಳಿದ ನರಕಾಧಿಪತಿ (2)
19.ನಿಹಾರಿಕೆ ನೋಡಿದ್ದಕ್ಕೇ ಈ ಕೇಡು! (2)
20.ತಿಕ್ಕಲನಿರಿಸಿಕೊಂಡ ಹಣೆ ಬೊಟ್ಟು (3)
21.ಮಾಲು ತರುವಾಗ ಸುತ್ತಿಕೊಂಡ ಬಟ್ಟೆ (3)

ಮೇಲಿಂದ ಕೆಳಕ್ಕೆ
1.ವರನಿಗೆ ಕೇಳಿಸಿದ ಧ್ವನಿ (2)
2.ನಯವಾಗಿ ಹೊಳೆಯುವ ಅಕ್ಷಿ (3)
3.ಕುಸುಕ್ಕನೆ ಜಾರಿದ ಜಾಗದಲ್ಲಿನ ಮರಳು (3)
4.ಅವಸರದಲ್ಲಿ ಚೆಲ್ಲಿದ ದ್ರವ (2)
5.ಭಾರ ಹೊತ್ತಿರುವ ನಮ್ಮ ದೇಶ (3)
7.ಪೇರಿ ಕೀಳುವ ಮೊದಲಿನ ದುರಸ್ತಿ! (3)
10.ಖೋತಾ ಎಂದು ಹೀಗೆ ಹೇಳಿ! (3)
11.ಗುಣಿಸುವ ಸಂಖ್ಯೆ ಉಲ್ಟಾಪಲ್ಟ ಆಗಿದೆ (3)
12.ವಿಷದಿಂದ ಕೂಡಿದ ಸಂಗತಿ (3)
14.ಯಮನ ಸೂತ್ರ ಉಲ್ಟಾ ಆಗಿದೆ? (3)
15.ಪಾಕದ ದೋಷ ಕಾಣುತ್ತಿದೆಯೇ? (3)
16.ಮೊಸರು ಮಾರುವಾಗ ಸಿಡಿದ ರಾಡಿ (3)
18.ಮಧುಮತಿಯ ಬುದ್ಧಿ (2)
19.ಅಹವಾಲು ಕೇಳುವಾಗ ನೀಡಿರುವ ಕ್ಷೀರ (2)



4969ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಿಲಿಕೆ 2.ಜಲಜ
4.ಆವರೋಹ 7.ಪ್ರತಿಫಲ
9.ನವಯೌವನ 12.ಸ್ವಾಭಿಮಾನ
13.ರುಷುವತ್ತು 15.ನಕ್ಷತ್ರ
16.ಮನವಿ

ಮೇಲಿಂದ ಕೆಳಕ್ಕೆ:
1.ಗಿರ್ಧಾರಂಅ 3.ಜಟಿಲ
5.ವರ 6.ಹಯವದನ
7.ಪ್ರಭಾವಬೀರು 8.ಫಲ
10.ನಾಭಿ 11.ನವ
12.ಸ್ವಾಧೀನ 14.ತ್ತುಪವಿ

ಸುಡೊಕು 5356

					5	4		9
		7	6				5	
	6	5			8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5355 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಷೇರುಪೇಟೆ ವಹಿವಾಟು 503

53,749 ಹಿಂದಿನ ಅಂತ್ಯ; 54,252 ಇಂದಿನ ಅಂತ್ಯ (54200, 54000, 53000, 43600, 53400; 10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,026
ಇಂದಿನ ಅಂತ್ಯ	16,170
▲	144
ದಿನದ ಗರಿಷ್ಠ	16,204

ವಿನಿಮಯ ದರ

$ ಡಾಲರ್	77.61
£ ಪೌಂಡ್	97.45
€ ಯುರೊ	82.87
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1545 (1565)
ಸೂರ್ಯಕಾಂತಿ (ರಿಫೈನ್ಡ್)	₹1850 (1850)
ಪಾಮೋಲಿನ್	₹1525 (1530)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹366-625
ದ್ವಿತಳಿ (ಬಿ.ವಿ) ₹272-777

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹172.50
ಆರ್‌ಎಸ್‌ಎಸ್-5 ₹165
ಗುಡ್ ಲಾಟ್ ₹160

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹900-1100
ಮಧ್ಯಮ	₹700-900
ಸಣ್ಣ	₹300-600

ಪಾರೇಖ್ ವೇತನ ಶೇ 88ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇನ್ಫೊಸಿಸ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಲೀಲ್ ಪಾರೇಖ್ ಅವರ ವೇತನ ಶೇಕಡ 88ರಷ್ಟು ಹೆಚ್ಚಾಗಿದೆ. ಅವರು ವಾರ್ಷಿಕ ₹ 79.75 ಕೋಟಿ ವೇತನ ಪಡೆಯಲಿದ್ದಾರೆ.

ಈ ಹೆಚ್ಚಳದಿಂದಾಗಿ ಪಾರೇಖ್ ಅವರು ದೇಶದಲ್ಲಿ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ಸಿಇಒಗಳ ಪೈಕಿ ಒಬ್ಬರೆನಿಸಿಕೊಂಡಿದ್ದಾರೆ.

ಪಾರೇಖ್ ಅವರನ್ನು ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕ ಆಗಿ ಜುಲೈ 1ರಿಂದ ಅನ್ವಯವಾಗುವಂತೆ ಮರುನೇಮಕ ಮಾಡಲು ಅನುಮತಿ ನೀಡುವಂತೆ ಕಂಪನಿಯು ಷೇರುದಾರರ ಒಪ್ಪಿಗೆ ಕೋರಿದೆ.

ಕಂಪನಿಯ ಸಹ ಸಂಸ್ಥಾಪಕ ಮತ್ತು ಅಧ್ಯಕ್ಷ ನಂದನ್ ನಿಲೇಕಣಿ ಅವರು ಸ್ವಇಚ್ಛೆಯಿಂದ ಯಾವುದೇ ಗೌರವಧನ ಪಡೆದಿಲ್ಲ. ಈಗಿನ ಏರಿಕೆಯ ನಂತರದಲ್ಲಿ ಪಾರೇಖ್ ಮತ್ತು ಇನ್ಫೊಸಿಸ್‌ನ ನೌಕರರ ಸರಾಸರಿ ವೇತನದ ನಡುವಣ ವ್ಯತ್ಯಾಸ ಇನ್ನಷ್ಟು ಜಾಸ್ತಿ ಆಗಲಿದೆ.

ಸಿಇಒ ವೇತನವನ್ನು ಹೋಲಿಕೆ ಮಾಡುವಾಗ ಕಂಪನಿಯ ಸಾಧನೆ ಹಾಗೂ ಷೇರು ಮೌಲ್ಯದಲ್ಲಿನ ಹೆಚ್ಚಳವನ್ನು ಪರಿಗಣಿಸಬೇಕು ಎಂದು ಇನ್ಫೊಸಿಸ್ ಹೇಳಿದೆ.

ದೇಶದ ಇತರ ಪ್ರಮುಖ ಐ.ಟಿ. ಕಂಪನಿಗಳ ಸಿಇಒ ವೇತನ ಹೀಗಿದೆ

₹64.34 ಕೋಟಿ ಥಿಯರಿ ಡೆಲಾಪೋರ್ಟ್ (ವಿಪ್ರೊ)

₹32.21 ಕೋಟಿ ಸಿ. ವಿಜಯಕುಮಾರ್ (ಎಚ್‌ಸಿಎಲ್ ಟೆಕ್ನಾಲಜೀಸ್)

₹25.76 ಕೋಟಿ ರಾಜೇಶ್ ಗೋಪಿನಾಥನ್ (ಟಿಸಿಎಸ್)

₹22 ಕೋಟಿ. ಸಿ.ಪಿ. ಗುರ್ನಾನಿ (ಟೆಕ್ ಮಹೀಂದ್ರ)

ಬೆಳವಣಿಗೆ ಅಂದಾಜು ತಗ್ಗಿಸಿದ ಮೂಡಿಸ್



ನವದೆಹಲಿ (ಪಿಟಿಐ): ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸ್ ಸಂಸ್ಥೆಯು ಭಾರತದ ಆರ್ಥಿಕ ಬೆಳವಣಿಗೆ ದರವು 2022ರಲ್ಲಿ ಶೇಕಡ 8.8ರಷ್ಟು ಇರಲಿದೆ ಎಂದು ಹೇಳಿದೆ.

ಬೆಳವಣಿಗೆ ದರವು ಶೇ 9.1ರಷ್ಟು ಆಗಲಿದೆ ಎಂದು ಸಂಸ್ಥೆಯು ಈ ಮೊದಲು ಅಂದಾಜಿಸಿತ್ತು.

ಬೆಳವಣಿಗೆ ಅಂದಾಜನ್ನು ತಗ್ಗಿಸಿರುವುದಕ್ಕೆ ಪ್ರಮುಖ ಕಾರಣ ಹಣದುಬ್ಬರದ ಹೆಚ್ಚಳ ಎಂದು ಸಂಸ್ಥೆ ಹೇಳಿದೆ.

ಕಚ್ಚಾ ತೈಲ, ಆಹಾರ ಉತ್ಪನ್ನಗಳು, ರಸಗೊಬ್ಬರದ ಬೆಲೆ ಏರಿಕೆಯು ಕುಟುಂಬಗಳ ಖರ್ಚುಗಳ ಮೇಲೆ ಮುಂದಿನ ತಿಂಗಳುಗಳಲ್ಲಿ ಪರಿಣಾಮ ಉಂಟುಮಾಡಲಿದೆ. ಇಂಧನ ಹಾಗೂ ಆಹಾರ ವಸ್ತುಗಳ ಬೆಲೆ ಹೆಚ್ಚಳವು ಇನ್ನಷ್ಟು ವ್ಯಾಪಕವಾಗುವುದನ್ನು ತಡೆಯುವ ಉದ್ದೇಶದಿಂದ ರೆಪೊ ದರ ಹೆಚ್ಚಳ ಮಾಡಿರುವುದು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಳವಾಗುವುದಕ್ಕೆ ಅಡ್ಡಿಯಾಗಲಿದೆ ಎಂದು ಸಂಸ್ಥೆ ಅಂದಾಜಿಸಿದೆ.

2023ರಲ್ಲಿ ಬೆಳವಣಿಗೆ ದರವು ಶೇ 5.4ರಷ್ಟು ಇರಲಿದೆ ಎಂದು ಈ ಮೊದಲು ಮಾಡಿದ್ದ ಅಂದಾಜಿನಲ್ಲಿ ಸಂಸ್ಥೆಯು ಬದಲಾವಣೆ ತಂದಿಲ್ಲ.

ಜಾಗತಿಕ ಪ್ರತಿಕೂಲ ಪರಿಸ್ಥಿತಿ: ಹೊರನಡೆದ ಇಬ್ಬರು ಬಿಡ್‌ದಾರರು

ಬಿಪಿಸಿಎಲ್ ಮಾರಾಟ ಸದ್ಯಕ್ಕಿಲ್ಲ

ನವದೆಹಲಿ (ಪಿಟಿಐ): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ (ಬಿಪಿಸಿಎಲ್) ಹೊಂದಿರುವ ಶೇಕಡ 52.98ರಷ್ಟು ಷೇರುಗಳನ್ನು ಮಾರಾಟ ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರ ಸದ್ಯಕ್ಕೆ ಕೈಬಿಟ್ಟಿದೆ.

ಜಾಗತಿಕ ಇಂಧನ ಮಾರುಕಟ್ಟೆಯ ಸದ್ಯದ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಖಾಸಗೀಕರಣ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂದು ಬಹುತೇಕ ಬಿಡ್‌ದಾರರು ಹೇಳಿದ್ದಾರೆ. ಹೀಗಾಗಿ ಷೇರು ವಿಕ್ರಯವನ್ನು ಕೈಬಿಡಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಬಿಪಿಸಿಎಲ್‌ನಲ್ಲಿ ಹೊಂದಿರುವ ಷೇರುಗಳನ್ನು ಮಾರಾಟ ಮಾಡಲು ಕೇಂದ್ರ ಸರ್ಕಾರವು ಖರೀದಿ ಆಸಕ್ತಿ ತಿಳಿಸುವಂತೆ 2020ರ ಮಾರ್ಚ್‌ನಲ್ಲಿ ಬಿಡ್ ಆಹ್ವಾನಿಸಿತ್ತು. 2020ರ ನವೆಂಬರ್ ವೇಳೆಗೆ ಮೂರು ಕಂಪನಿಗಳು ಬಿಡ್ ಸಲ್ಲಿಸಿದ್ದವು. ಆದರೆ, ಇಂಧನ ಬೆಲೆಯ ಬಗ್ಗೆ ಸ್ಪಷ್ಟತೆ ಸಿಗದೇ ಇರುವುದರಿಂದ ಎರಡು ಕಂಪನಿಗಳು ಬಿಡ್‌ನಿಂದ ಹೊರನಡೆದಿದ್ದು, ಕೇವಲ ಒಂದು ಕಂಪನಿ ಉಳಿದುಕೊಂಡಿದೆ. ಹೀಗಾಗಿ ಷೇರು ವಿಕ್ರಯ ಪ್ರಕ್ರಿಯೆ ಕೈಬಿಡಲು ಮತ್ತು ಖರೀದಿ ಆಸಕ್ತಿ ವ್ಯಕ್ತಪಡಿಸಿ ಸಲ್ಲಿಕೆ ಆಗಿರುವ ಬಿಡ್‌ಗಳನ್ನು ರದ್ದುಪಡಿಸಲು ನಿರ್ಧರಿಸಲಾಗಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ (ಡಿಐಪಿಎಎಂ) ಹೇಳಿದೆ.

ಮುಖ್ಯಾಂಶಗಳು

- ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಳಿತದ ಪರಿಣಾಮ
- ಷೇರು ವಿಕ್ರಯಕ್ಕೆ ಹಿನ್ನಡೆ

ಕೋವಿಡ್ ಸಾಂಕ್ರಾಮಿಕ ಹಾಗೂ ಜಾಗತಿಕ ಬಿಕ್ಕಟ್ಟಿನಿಂದಾಗಿ ತೈಲ ಮತ್ತು ಅನಿಲ ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ ಎಂದು ಅದು ತಿಳಿಸಿದೆ.

ವೇದಾಂತ ಸಮೂಹ, ಅಮೆರಿಕದ ಅಪೋಲೊ ಗ್ಲೋಬಲ್ ಮ್ಯಾನೇಜ್‌ಮೆಂಟ್ ಮತ್ತು ಐ ಸ್ಕ್ವೇರ್ಡ್ ಕ್ಯಾಪಿಟಲ್ ಅಡ್ವೈಸರ್ಸ್ ಕಂಪನಿಗಳು ಬಿಪಿಸಿಎಲ್ ಖರೀದಿಸುವ ಬಗ್ಗೆ ಆಸಕ್ತಿ ತೋರಿ ಅರ್ಜಿ ಸಲ್ಲಿಸಿದ್ದವು.

ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಅವಲೋಕಿಸಿ ಷೇರು ವಿಕ್ರಯ ಪ್ರಕ್ರಿಯೆಯನ್ನು ಮತ್ತೆ ಆರಂಭ ಮಾಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಇಲಾಖೆಯು ಹೇಳಿದೆ.

ಸರ್ಕಾರಿ ಸ್ವಾಮ್ಯದ ಎರಡನೇ ಅತಿದೊಡ್ಡ ತೈಲ ಮತ್ತು ಅನಿಲ ಕಂಪನಿಯು ಮುಂಬೈ, ಕೊಚ್ಚಿ, ಮಧ್ಯಪ್ರದೇಶದಲ್ಲಿ ತೈಲ ಸಂಸ್ಕರಣಾ ಘಟಕಗಳನ್ನು ಹೊಂದಿದೆ. ರಿಲಯನ್ಸ್ ಮತ್ತು ಇಂಡಿಯನ್ ಆಯಿಲ್ ಕಂಪನಿಗಳ ಬಳಿಕ ಅತಿ ಹೆಚ್ಚು ತೈಲ ಸಂಸ್ಕರಣಾ ಸಾಮರ್ಥ್ಯ ಹೊಂದಿರುವ ಕಂಪನಿ ಇದಾಗಿದೆ.

ಹತ್ತಿ ಬೆಳೆಯುವ ಪ್ರದೇಶ ಕಡಿಮೆ; ಬೆಲೆಯಲ್ಲಿ ಭಾರಿ ಏರಿಕೆ

ಅಕ್ಕಿ, ಹತ್ತಿ ರಫ್ತಿಗೆ ತಾತ್ಕಾಲಿಕ ನಿರ್ಬಂಧ?

• ಅನ್ನಪೂರ್ಣಾ ಸಿಂಗ್

ನವದೆಹಲಿ: ಅಕ್ಕಿ (ಬಾಸ್ಮತಿ ಹೊರತುಪಡಿಸಿ) ಹಾಗೂ ಹತ್ತಿಯ ರಫ್ತಿನ ಮೇಲೆ ಕೇಂದ್ರ ಸರ್ಕಾರವು ತಾತ್ಕಾಲಿಕ ನಿರ್ಬಂಧಗಳನ್ನು ವಿಧಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಹತ್ತಿಯ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದೆ.

'ಮುಂಗಾರು ಮಳೆ ಹೇಗಿರುತ್ತದೆ ಎಂಬುದನ್ನು ಗಮನಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ. ಉಚಿತ ಆಹಾರಧಾನ್ಯ ವಿತರಣೆ ಯೋಜನೆಯ ಅಡಿಯಲ್ಲಿ ನೀಡುವ ಅಕ್ಕಿ ಮತ್ತು ಗೋಧಿ ಪ್ರಮಾಣದಲ್ಲಿ ಬದಲಾವಣೆ ತಂದ ನಂತರದಲ್ಲಿ ಅಕ್ಕಿಯ ಅಗತ್ಯ ಹೆಚ್ಚಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಈ ವರ್ಷದ ಜೂನ್‌ನಿಂದ ಮುಂದಿನ ವರ್ಷದ ಮಾರ್ಚ್‌ವರೆಗೆ ಕೇಂದ್ರವು ರಾಜ್ಯಗಳಿಗೆ ಗೋಧಿಯ ಪ್ರಮಾಣಕ್ಕಿಂತ 60 ಲಕ್ಷ ಟನ್ ಹೆಚ್ಚು ಅಕ್ಕಿಯನ್ನು ವಿತರಣೆ ಮಾಡಲಿದೆ.

ಹತ್ತಿಯನ್ನು ಬೆಳೆಯುವ ಪ್ರದೇಶ ಕಡಿಮೆ ಆಗಿದೆ ಎಂಬ ಮಾಹಿತಿಯು ಕೇಂದ್ರದ ಬಳಿ ಇದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಹತ್ತಿಯ ಬೆಲೆಯು ದುಪ್ಪಟ್ಟಾಗಿದೆ. ವರ್ತಕರು ಹಾಗೂ ಹತ್ತಿ ಗಿರಣಿ ಪ್ರತಿನಿಧಿಗಳು ರಫ್ತಿನ ಮೇಲೆ ತಾತ್ಕಾಲಿಕ ನಿರ್ಬಂಧ ಹೇರುವಂತೆ ಕೇಳುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಅವರ ಸಮಸ್ಯೆಗಳ ಬಗ್ಗೆ ಸರ್ಕಾರವು ಚರ್ಚಿಸುತ್ತಿದೆ. ಕಿರು ಅವಧಿಗೆ ನಿರ್ಬಂಧ ವಿಧಿಸುವುದರಿಂದ ಅವರಿಗೆ ಸಹಾಯ ಆಗುವುದೇ ಎಂಬುದನ್ನು ಪರಿಶೀಲಿಸುತ್ತಿದೆ.

ಆರ್ಥಿಕ ಬೆಳವಣಿಗೆಗೆ ಅಡ್ಡಿ ಆಗದಂತೆ ನೋಡಿಕೊಂಡು, ಹಣದುಬ್ಬರ ಪ್ರಮಾಣವನ್ನು ಕನಿಷ್ಠ ಶೇಕಡ 1ರಷ್ಟು ತಗ್ಗಿಸುವುದು ಕೇಂದ್ರ ಸರ್ಕಾರದ ಮುಖ್ಯ ಉದ್ದೇಶ. ಇದನ್ನು ಗಮನದಲ್ಲಿ ಇರಿಸಿಕೊಂಡು ತೀರ್ಮಾನ ಕೈಗೊಳ್ಳಲಾಗುತ್ತದೆ ಎನ್ನಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾರತದಲ್ಲಿ 25 ವರ್ಷ ಪೂರೈಸಿದ ಫೇಬರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಬರ್ ಇಂಡಿಯಾ ಕಂಪನಿಯು ಭಾರತದಲ್ಲಿ ತನ್ನ 25ನೇ ವರ್ಷಾಚರಣೆಯ ಅಂಗವಾಗಿ ಟಿ.ವಿ. ಜಾಹೀರಾತು ಬಿಡುಗಡೆ ಮಾಡಿದೆ.

ಬದಲಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ಗ್ರಾಹಕರಿಗೆ ಸುರಕ್ಷಿತವಾದ ಅಡುಗೆ ಉಪಕರಣಗಳನ್ನು ನೀಡುವ ಕುರಿತು ಕಂಪನಿಯ ಬದ್ಧತೆಯನ್ನು ಈ ಜಾಹೀರಾತಿನಲ್ಲಿ ವಿವರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಂಪನಿಯು ಕಳೆದ ಐದು ವರ್ಷಗಳಿಂದ ವರ್ಷದಿಂದ ವರ್ಷಕ್ಕೆ ಶೇಕಡ 25ರ ದರದಲ್ಲಿ ಬೆಳವಣಿಗೆ ಕಾಣುತ್ತಿದೆ.

'ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಹೊಸ ಉತ್ಪನ್ನಗಳನ್ನು ನೀಡುವುದರತ್ತ ಗಮನ ಹರಿಸಿದ್ದೇವೆ. 25 ವರ್ಷಗಳಿಂದ ಗ್ರಾಹಕರಿಗಾಗಿ ಹಲವು ಹೊಸ ಉತ್ಪನ್ನಗಳನ್ನು ಪರಿಚಯಿಸಲಾಗಿದೆ' ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ಹಿರಿಯ ನಿರ್ದೇಶಕ ಹರ್ದೇಶ್ ಚೋಜರ್ ತಿಳಿಸಿದ್ದಾರೆ.

ಎಲೆಕ್ಟ್ರಿಕ್ 'ಬಿಎಂಡಬ್ಲ್ಯು ಐ4' ಬಿಡುಗಡೆ

ಗುರುಗ್ರಾಮ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಬಿಎಂಡಬ್ಲ್ಯು ಕಂಪನಿಯು ಸಂಪೂರ್ಣ ವಿದ್ಯುತ್ ಚಾಲಿತ 'ಐ4' ಕಾರನ್ನು ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ಬೆಲೆ ₹ 69.9 ಲಕ್ಷ ಇದೆ.

ಆರು ತಿಂಗಳಿನಲ್ಲಿ ಮೂರು ವಿದ್ಯುತ್ ಚಾಲಿತ ವಾಹನ ಬಿಡುಗಡೆ ಮಾಡುವುದಾಗಿ ಕಂಪನಿಯು ಕಳೆದ ನವೆಂಬರ್‌ನಲ್ಲಿ ಘೋಷಿಸಿತ್ತು. ಇದರ ಭಾಗವಾಗಿ ಈಗಾಗಲೇ ಎಸ್‌ಯುವಿ ಐಎಕ್ಸ್ ಮತ್ತು ಹ್ಯಾಚ್‌ಬ್ಯಾಕ್ ಮಿನಿ ಬಿಡುಗಡೆ ಮಾಡಿದ್ದು, ಈ ಸಾಲಿಗೆ 'ಐ4' ಸಹ ಸೇರಿಕೊಂಡಿದೆ.

ಹೊಸ ಕಾರು ಐದನೇ ಪೀಳಿಗೆಯ ಬಿಎಂಡಬ್ಲ್ಯು ಇ-ಡ್ರೈವ್ ತಂತ್ರಜ್ಞಾನ ಹೊಂದಿದೆ. 5.7 ಸೆಕೆಂಡ್‌ಗಳಲ್ಲಿ ಈ ಕಾರು ಪ್ರತಿ ಗಂಟೆಗೆ 100 ಕಿ.ಮೀ. ವೇಗವನ್ನು ತಲುಪಬಲ್ಲದು. ಇದು ಲಿಥಿಯಂ ಅಯಾನ್ ಬ್ಯಾಟರಿ ಹೊಂದಿದ್ದು, ಪ್ರತಿ ಗಂಟೆಗೆ 80.7 ಕಿಲೊವಾಟ್ ಸಾಮರ್ಥ್ಯ ಹೊಂದಿದೆ ಎಂದು ಕಂಪನಿ ಹೇಳಿಕೊಂಡಿದೆ.

'ಭಾರತದ ಮಾರುಕಟ್ಟೆಗೆ ವಿದ್ಯುತ್ ಚಾಲಿತ ಮಧ್ಯಮ ಗಾತ್ರದ ಸೆಡಾನ್ ಬಿಡುಗಡೆ ಮಾಡಲು ಸಂತೋಷ ಆಗುತ್ತಿದೆ. ವಿದ್ಯುತ್ ಚಾಲಿತ ವಾಹನ ವಿಭಾಗದಲ್ಲಿ ಕಂಪನಿಯ ಮೂರನೇ ಉತ್ಪನ್ನ ಇದಾಗಿದೆ. ಒಂದು ಬಾರಿ ಚಾರ್ಜ್ ಮಾಡಿದರೆ 590 ಕಿಲೋಮೀಟರ್ ಪ್ರಯಾಣಿಸಬಹುದು' ಎಂದು ಬಿಎಂಡಬ್ಲ್ಯು ಸಮೂಹದ ಭಾರತದ ಅಧ್ಯಕ್ಷ ವಿಕ್ರಂ ಪವ್ವಾ ಹೇಳಿದ್ದಾರೆ.

ಕಂಪನಿಯ ಜಾಲತಾಣದಲ್ಲಿ ಬಿಎಂಡಬ್ಲ್ಯು ಐ4 ಬುಕಿಂಗ್ ಮಾಡಬಹುದು. ಜುಲೈನಿಂದ ವಿತರಣೆ ಆರಂಭ ಆಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಥರ್ಡ್ ಪಾರ್ಟಿ ವಿಮೆ ಕಂತು ಜೂನ್ 1ರಿಂದ ಹೆಚ್ಚಳ

ಒಂದನೇ ಪುಟದಿಂದ

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಎರಡು ವರ್ಷಗಳವರೆಗೆ ಥರ್ಡ್ ಪಾರ್ಟಿ ವಿಮೆ ಕಂತಿನ ಪರಿಷ್ಕರಣೆಯನ್ನು ತಡೆಹಿಡಿಯಲಾಗಿತ್ತು.

ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವ ವಾಣಿಜ್ಯ ವಾಹನಗಳ ಥರ್ಡ್ ಪಾರ್ಟಿ ಪ್ರೀಮಿಯಂ ಮೊತ್ತ ಹೆಚ್ಚಳದ ನಿರ್ಧಾರವು ಅನವಶ್ಯಕ ಎನ್ನುವುದು ರಸ್ತೆ ಸಾರಿಗೆ ಸಂಘದ ಸರ್ವಾನುಮತದ ಅಭಿಪ್ರಾಯ ಎಂದು ಆಲ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ (ಎಐಎಂಟಿಸಿ) ಅಧ್ಯಕ್ಷ ಕುಲತರಣ್ ಸಿಂಗ್ ಅತ್ವಾಲ್ ಹೇಳಿದ್ದಾರೆ.

ವಿಮೆ ಕಂತು ಎಷ್ಟು:

- 30 ಕಿಲೋವಾಟ್ ಒಳಗಿನ ವಿದ್ಯುತ್ ಚಾಲಿತ ಕಾರು; ₹ 1,780
- 30 ಕಿಲೋವಾಟ್‌ಗಿಂತ ಹೆಚ್ಚು 60 ಕಿಲೋವಾಟ್‌ಗಿಂತ ಕಡಿಮೆ; ₹ 2,904
- ಹೈಬ್ರಿಡ್ ಎಲೆಕ್ಟ್ರಿಕ್ ವಾಹನಗಳಿಗೆ ಶೇ 7.5ರಷ್ಟು ರಿಯಾಯಿತಿ
- ವಿದ್ಯುತ್ ಚಾಲಿತ ವಾಹನಗಳಿಗೆ ಶೇ 15ರಷ್ಟು ರಿಯಾಯಿತಿ
- ಶಿಕ್ಷಣ ಸಂಸ್ಥೆಗಳಲ್ಲಿ ಬಳಸುವ ಬಸ್‌ಗಳಿಗೆ ವಿಮಾ ಕಂತಿನಲ್ಲಿ ಶೇ 15ರಷ್ಟು ರಿಯಾಯಿತಿ
- ವಿಂಟೇಜ್ ಕಾರು ಎಂದು ನೋಂದಣಿ ಆಗಿರುವ ಖಾಸಗಿ ಕಾರುಗಳಿಗೆ ಪ್ರೀಮಿಯಂ ಮೊತ್ತದಲ್ಲಿ ಶೇ 50ರಷ್ಟು ರಿಯಾಯಿತಿ

ಥರ್ಡ್ ಪಾರ್ಟಿ ವಿಮಾ ಕಂತಿನ ವಿವರ

ವಾಹನ	2019-20ರ ದರ	ಪರಿಷ್ಕೃತ ದರ
ಕಾರು		
1000 ಸಿಸಿ	₹2,072	₹2,094
1000-1,500 ಸಿಸಿ	₹3,221	₹3,416
ದ್ವಿಚಕ್ರ ವಾಹನ		
150-350 ಸಿಸಿ	₹1,193	₹1,366
350 ಸಿಸಿಗೂ ಹೆಚ್ಚು	₹2,323	₹2,804.
ಸರಕು ಸಾಗಣೆ ವಾಣಿಜ್ಯ ವಾಹನ		
12 ಸಾವಿರ ಕೆ.ಜಿಯಿಂದ 20 ಸಾವಿರ ಕೆ.ಜಿ	₹33,414	₹35,313
40 ಸಾವಿರ ಕೆ.ಜಿ.ಗಿಂತ ಹೆಚ್ಚು	₹41,561	₹44,242

ಸೆನ್ಸೆಕ್ಸ್ 503 ಅಂಶ ಚೇತರಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ವಾರದ ವಹಿವಾಟಿನಲ್ಲಿ ಮೊದಲ ಬಾರಿಗೆ ಗಳಿಕೆ ಕಂಡುಕೊಂಡಿವೆ. ಲೋಹ, ಬ್ಯಾಂಕ್ ಮತ್ತು ಐ.ಟಿ. ವಲಯದ ಷೇರುಗಳ ಖರೀದಿಗೆ ಹೂಡಿಕೆದಾರರು ಮುಂದಾಗಿದ್ದರಿಂದ ಮೂರು ದಿನಗಳ ಕುಸಿತಕ್ಕೆ ತಡೆಬಿದ್ದಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 503 ಅಂಶ ಹೆಚ್ಚಾಗಿ 54,252 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 144 ಅಂಶ ಹೆಚ್ಚಾಗಿ 16,170 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಎಲ್‌ಇಟಿಯ ಮೂವರು ಉಗ್ರರ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಗುರುವಾರ ಭದ್ರತಾ ಪಡೆಗಳು ಎನ್‌ಕೌಂಟರ್ ನಡೆಸಿ ಲಷ್ಕರ್-ಎ-ತೈಯಬಾ (ಎಲ್‌ಇಟಿ) ಸಂಘಟನೆಯ ಮೂವರು ಉಗ್ರರನ್ನು ಹತ್ಯೆ ಮಾಡಿವೆ.

'ಹತ್ಯೆಯಾದವರು ಲಷ್ಕರ್-ಎ-ತೈಯಬಾ ಸಂಘಟನೆಗೆ ಸೇರಿದ ಪಾಕಿಸ್ತಾನದ ಉಗ್ರರು. ಈ ವರ್ಷ 26 ವಿದೇಶಿ ಭಯೋತ್ಪಾದಕರನ್ನು (14 ಜೆಇಎಂ ಮತ್ತು 12 ಎಲ್‌ಇಟಿ) ಹತ್ಯೆ ಮಾಡಲಾಗಿದೆ' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

'ಈ ಉಗ್ರರು ಈಚೆಗೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಿಂದ ಕಾಶ್ಮೀರಕ್ಕೆ ನುಸುಳಿದ್ದರು. ಭದ್ರತಾ ಪಡೆಗಳು ಅವರನ್ನು ಕುಪ್ವಾರ ಜಿಲ್ಲೆಯ ಜುಮಾಗುಂಡ್ ಗ್ರಾಮದಲ್ಲಿ ತಟಸ್ಥಗೊಳಿಸಿವೆ' ಎಂದು ಮೂಲಗಳು ತಿಳಿಸಿವೆ.

ಬುಧವಾರ(ಮೇ 25) ನೆರೆಯ ಜಿಲ್ಲೆ ಬಾರಾಮುಲ್ಲದಲ್ಲಿ ಭದ್ರತಾ ಪಡೆಗಳು ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಮೂವರು ಪಾಕಿಸ್ತಾನಿ ಉಗ್ರರು ಹತ್ಯೆ ಹಾಗೂ ಪೊಲೀಸ್ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ ಒಂದು ದಿನದ ಬಳಿಕ ಭದ್ರತಾ ಪಡೆಗಳು ಮೂವರು ಎಲ್‌ಇಟಿ ಉಗ್ರರನ್ನು ಹತ್ಯೆ ಮಾಡಿವೆ.

'ಕಾಶ್ಮೀರ ಕಣಿವೆಯಲ್ಲಿ ಭದ್ರತಾ ಪಡೆಗಳು ನಡೆಸಿದ ವಿವಿಧ ಎನ್‌ಕೌಂಟರ್‌ಗಳಲ್ಲಿ 26 ಪಾಕಿಸ್ತಾನಿಗಳು ಸೇರಿ 90ಕ್ಕೂ ಹೆಚ್ಚು ಉಗ್ರರು ಹತರಾಗಿದ್ದಾರೆ. ಈ ವರ್ಷದ ಜನವರಿ 1 ರಿಂದ ಏಪ್ರಿಲ್ 30 ರವರೆಗೆ ಸುಮಾರು 55 ಸ್ಥಳೀಯರು ಉಗ್ರರ ಪಡೆ ಸೇರಿರುವ ಆತಂಕಕಾರಿ ಬೆಳವಣಿಗೆ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

ಡಾಲರ್ ಇಂಡಸ್ಟ್ರೀಸ್‌ನಿಂದ ಹೊಸ ಲಾಂಛನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲರ್ ಇಂಡಸ್ಟ್ರೀಸ್ ಕಂಪನಿಯು 50ನೆಯ ವರ್ಷಾಚರಣೆಯ ಸಂದರ್ಭದಲ್ಲಿ ವಿಶೇಷ ಲಾಂಛನವನ್ನು ಅನಾವರಣ ಮಾಡಿದೆ. ಇದನ್ನು ಕಂಪನಿಯ ಸಂಸ್ಥಾಪಕ ಹಾಗೂ ಗೌರವಾಧ್ಯಕ್ಷ ದೀನ್‌ದಯಾಳ್ ಗುಪ್ತ ಅನಾವರಣಗೊಳಿಸಿದರು.

ವಿಷನ್ 2025 ಭಾಗವಾಗಿ ಕಂಪನಿಯು ಹೊಸ ಉತ್ಪನ್ನಗಳ ಬಿಡುಗಡೆಗೆ ಹಾಗೂ ವಹಿವಾಟು ವಿಸ್ತರಣೆಗೆ ₹ 120 ಕೋಟಿ ಕಾಯ್ದಿರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಕಂಪನಿಯು ಈಗ ಹೊಂದಿರುವ 4 ಮೆಗಾವಾಟ್ ಸೌರವಿದ್ಯುತ್ ಘಟಕದ ಸಾಮರ್ಥ್ಯವನ್ನು 6 ಮೆಗಾವಾಟ್‌ಗೆ ಹೆಚ್ಚಿಸುವ ಉದ್ದೇಶವನ್ನು ಕೂಡ ಹೊಂದಿದೆ. ಅಲ್ಲದೆ, ಕಂಪನಿಯು ತನ್ನ ಬ್ರ್ಯಾಂಡ್‌ನ ಉತ್ಪನ್ನಗಳ ಮಾರಾಟಕ್ಕೆ 125 ಅಂಗಡಿಗಳನ್ನು 2025ಕ್ಕೆ ಮೊದಲು ತೆರೆಯಲಿದೆ.

ಮುಂಬೈ ಧಾರಣೆ

ಶೇಂಗಾ 26-5-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10850-10900
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1505 (1595)
ಪಾಮ್ ವಾರದ ಡೆಲಿವರಿ	1523 (1528)
ಸೂರ್ಯಕಾಂತಿ ಎಣ್ಣೆ ಕಚ್ಚಾ	1780 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,800 (50,900)
ಬೆಳ್ಳಿ ಕೆ.ಜಿ 61,650 (61,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	24509-30929
ಕೋಕ	14222-28170
ಹಳೆಚಾಲಿ	48519-48669
ಹೊಸಚಾಲಿ	34000-38369
ಪುತ್ತೂರು	
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23899-31289
ಚಾಲಿ	34000-38699
ಕೋಕ	23019-31199
ಕೆಂಪುಗೋಟು	29469-36899
ರಾಶಿ	44869-48039
ತಟ್ಟಿಬೆಟ್ಟೆ	44869-48039
ಶಿರಸಿ	
ಬೆಟ್ಟೆ	36899-45018
ಬಿಳಿಗೋಟು	23009-32899
ಚಾಲಿ	36518-39500
ರಾಶಿ	47099-50088
ಯಲ್ಲಾಪುರ	
ಬಿಳಿಗೋಟು	27612-32812
ಚಾಲಿ	35819-39390
ಕೋಕ	18899-28899
ಕೆಂಪುಗೋಟು	28699-34142
ರಾಶಿ	47911-54799
ತಟ್ಟಿಬೆಟ್ಟೆ	37136-46600
ಶಿವಮೊಗ್ಗ	
ಬೆಟ್ಟೆ	49900-53989
ಗೊರಬಲು	16009-37699
ರಾಶಿ	44269-49639
ಸರಕು	56109-80399
ಸಾಗರ	
ಬಿಳಿಗೋಟು	16110-32569
ಚಾಲಿ	33409-38529
ಕೋಕ	12110-35899
ಕೆಂಪುಗೋಟು	12219-39599
ರಾಶಿ	37299-49229
ಸಿಪ್ಪೆಗೋಟು	16500-21513

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	---	16000	--- ಸೆಂಟ್ಸ್
ಎಸಿ	8900	---	8675	
ಆರ್‌ಪಿ	9500	---	10000	ಲಂಡನ್
ಆರ್‌ಸಿ	4700	---	4475	--- ಡಾಲರ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

WANTED FIELD Service Engineer to Service ATM in Tumkur district. BE/Diploma/ITI.Candidate must have Basic Knowledge about Computer Hardware,Electronics and must have 2 wheeler.Training will be provided to selected Candidates.Adequate Compensation Immediate joining. Call 8482982125 or 9999379822.Mail Resume to careers@techbiteservices.com

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ. ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17,800 - 68,000/-, 9538811104, 9538811223

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC,Degree ಸಂಬಳ 15000 to 28000 ಸಂಪರ್ಕಿಸಿರಿ 9980814578, 9980812378

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000- 15,000. 8951315839, 9880545002

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Multiple Vacancy

ಬೇಕಾಗಿದ್ದಾರೆಬೆಂಗಳೂರಿನ ಕಂಪನಿಯೊಂದರಲ್ಲಿ ಟ್ರೈನರ್ಸ್, ಲೀಡರ್ಸ್, ಅಸಿಸ್ಟೆಂಟ್ ಮ್ಯಾನೇಜರ್, ಬ್ರಾಂಚ್ ಮ್ಯಾನೇಜರ್, ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30. ವಿದ್ಯಾರ್ಹತೆ SSLC ಮೇಲ್ಪಟ್ಟವರು. ಸಂಬಳ ಟ್ರೈನಿಂಗ್ ಸಮಯದಲ್ಲಿ10,000ದಿಂದ 12,000 ಟ್ರೈನಿಂಗ್ ಮುಗಿದ ನಂತರ25,000 ದಿಂದ 50,000ದ ವರೆಗೆ ನೀಡಲಾಗುವುದು.ಉಚಿತ ವಸತಿ, ಆಸಕ್ತಿಯುಳ್ಳವರು ಕರೆಮಾಡಿ 9110686982

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Situation Required

WANTED MARRIED Hindu couple husband as driver not more than 35 years and wife as Cook for a family of 5 at Bangalore Good salary quarters and food Police verification will be made Call 9741900909

Teachers/ Professors

ಸುವರ್ಣ ಸಂಸ್ಕೃತಿಧಾಮ(ರಿ) ಸುವರ್ಣಮುಖಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವಡೇರಹಳ್ಳಿ, (ಗಂಟಕನದೊಡ್ಡಿ ಗೇಟ್) ಕಗ್ಗಲಹಳ್ಳಿ ಅಂಚೆ ಕನಕಪುರ ತಾಲ್ಲೂಕು, ಬೆಂಗಳೂರು- ಕನಕಪುರ ರಸ್ತೆ. ಕೆಳಗಿನ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ: 1) ಇಂಗ್ಲೀಷ್ ಭಾಷಾ ಶಿಕ್ಷಕರು:01 ಬಿ.ಎ.ಬಿಎಡ್ (ಇಂಗ್ಲೀಷ್ ಮೇಜರ್). 2) ವಿಜ್ಞಾನ ಶಿಕ್ಷಕರು:01 ಬಿಎಸ್ಸಿ.ಬಿಎಡ್ (ಪಿಸಿಎಂ) 3) ಅನುಭವಿ ಕ್ಲರ್ಕ್:01 (ಪದವಿ & ಕಂಪ್ಯೂಟರ್ ಜ್ಞಾನ) 4) ಸಂಸ್ಕೃತ ಶಿಕ್ಷಕರು:01 (ವಿದ್ವತ್) 5) ಅನುಭವಿ ಸೂಪರ್‌ವೈಸರ್:01. 6)ಅನುಭವಿ ಅಡುಗೆಯವರು. ಇಲ್ಲೆ ಉಳಿಯುವವರಿಗೆ (ಸಿಂಗಲ್) ಊಟ, ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತರು ಕೆಳಕಂಡ ವಿಳಾಸಕ್ಕೆ ಬಯೋಡೇಟಾವನ್ನು ಕಳುಹಿಸಬಹುದು.Email: suvarnamukhisamskritidhama@gmail.com ಮಾಹಿತಿಗಾಗಿ ಸಂಪರ್ಕಿಸಿ: ಮಹಾದೇವಯ್ಯ 9886128699. ಚಂದ್ರಶೇಖರ್ 9972970502.

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★||ಶ್ರೀಪಾತಾಳಭುವನೇಶ್ವರಿ||★ ಆರಾಧನೆಯಿಂದ ಪ್ರೀತಿಪ್ರೇಮ ಸ್ತ್ರೀಪುರುಷ ವಶೀಕರಣ, ದಾಂಪತ್ಯಕಿರಿಕಿರಿ, ಕಂಕಣಭಾಗ್ಯ, ಸಾಲದಭಾದೆ, ಸಂತಾನಭಾಗ್ಯ ಇನ್ನೂಯಾವುದೇ ಕಠಿಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. "ಆತ್ಮರಾಮ್ ಭಟ್" 9900933145

★||ಶ್ರೀಶಾಕಾಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1 ದಿನದಲ್ಲಿ ಶಾಶ್ವತ ಪರಿಹಾರ. 9900222591

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಇತರೆ

For Sale

केनरा बैंक Canara Bank सिंडिकेट Syndicate
FOR SALE
Sale of old Bank used furniture items at Canara Bank, Vijayanagar II Branch, Bengaluru.
Last date for submission of sealed quote: 31.05.2022
Contact: 94498 62614

ಪ್ರವಾಸ

Travel

ಸ್ವಯಂಭೂ ಹಿಮಲಿಂಗ ಅಮರನಾಥ್, ವೈಷ್ಣವಿದೇವಿ ಕಾಶ್ಮೀರ್ ಅಮೃತಸರ್ 26.06.2022 ರಿಂದ 13/17 ದಿನಗಳು. ಚಿತ್ರಕೂಟ, ನೈಮೀಶಾರಣ್ಯ ಕಾಶಿ,ಗಯಾ, ಪ್ರಯಾಗ,ಅಯೋಧ್ಯ 8 ದಿನಗಳು. ಸಿಕ್ಕಿಂ,ಕಾಮಕ್ಯ, ಡಾರ್ಜಲಿಂಗ್, ಪುರಿ,ಭುವನೇಶ್ವರ್ 14 ದಿನಗಳು. 07.08.2022 14.08.2022 ರಿಂದ ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು-18

10/07/2022 13/17 ದಿನಗಳು ರೈಲು/ವಿಮಾನದಲ್ಲಿ, ದೆಹಲಿ ಮಥುರ ಆಗ್ರ, ಅಮೃತಸರ, ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಕುರುಕ್ಷೇತ್ರ 21,000/- (ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'- 9739847429/ 9845560219.

03.07.2022 13ದಿನಗಳು ವಿಮಾನ,AC ಬಸ್,ಊಟ, ರೂಂ ವಸತಿಯೊಂದಿಗೆ ಕಾಶಿ, ಗಯಾ, ಅಲಹಾಬಾದ್,ಆಗ್ರಾ,ದೆಹಲಿ, ಅಯೋಧ್ಯ,ನೈಮಿಷರಣ್ಯಾ. ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ) 6363416487/ 9902433500

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in

SPECIAL RATES FOR
Admission Notice,
Education Success
Congratulation Ads

ಏಷ್ಯಾ ಕಪ್ ಹಾಕಿ ಟೂರ್ನಿ: ಪಾಕಿಸ್ತಾನದ ವಿಶ್ವಕಪ್ ಕನಸು ಭಗ್ನ

ಗೋಲು ಮಳೆ: ನಾಕೌಟ್ ಹಂತಕ್ಕೆ ಭಾರತ

ಜಕಾರ್ತ (ಪಿಟಿಐ): ಗೋಲು ಮಳೆ ಸುರಿಸಿದ ಭಾರತ ತಂಡ ಏಷ್ಯಾ ಕಪ್ ಹಾಕಿ ಟೂರ್ನಿಯ ಸೂಪರ್–4ರ ಹಂತಕ್ಕೆ ಲಗ್ಗೆ ಇರಿಸಿತು. ಇ ಜಿ.ಬಿ.ಕೆ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಅಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ತಂಡ ಆತಿಥೇಯ ಇಂಡೋನೇಷ್ಯಾವನ್ನು 16–0ಯಿಂದ ಮಣಿಸಿತು.

ಮೊದಲ ಎರಡು ಪಂದ್ಯಗಳಲ್ಲಿ ನೀರಸ ಆಟವಾಡಿದ್ದ ಭಾರತ ಸೂಪರ್–4ರ ಘಟ್ಟ ಪ್ರವೇಶಿಸಬೇಕಾದರೆ ಗುಂಪು ಹಂತದ ಕೊನೆಯ ಪಂದ್ಯದಲ್ಲಿ 15–0 ಅಂತರದಲ್ಲಿ ಗೆಲ್ಲಬೇಕಾದ ಒತ್ತಡವಿತ್ತು. ಆರಂಭದಿಂದಲೇ ಗೋಲುಗಳನ್ನು ಗಳಿಸುತ್ತ ಸಾಗಿದ ತಂಡ ಎದುರಾಳಿಗಳಿಗೆ ಒಂದು ಗೋಲು ಕೂಡ ಬಿಟ್ಟುಕೊಡದೆ ಜಯಭೇರಿ ಮೊಳಗಿಸಿತು. ಕೊನೆಯ ಕ್ವಾರ್ಟರ್‌ನಲ್ಲಿ 6 ಗೋಲುಗಳು ಭಾರತದ ಆಟಗಾರರ ಸ್ಟಿಕ್‌ನಿಂದ ಬಂದವು.

‘ಎ’ ಗುಂಪಿನಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ತಲಾ ನಾಲ್ಕು ಪಾಯಿಂಟ್ ಗಳಿಸಿವೆ. ಆದರೆ ಉತ್ತಮ ಗೋಲು ಸರಾಸರಿ ಆಧಾರದ ಮೇಲೆ ಭಾರತ ನಾಕೌಟ್ ಹಂತಕ್ಕೆ ಲಗ್ಗೆ ಇರಿಸಿತು. ಕೊನೆಯ ಪಂದ್ಯದಲ್ಲಿ ಜಪಾನ್‌ಗೆ 2–3ರಲ್ಲಿ ಮಣಿದ ಪಾಕಿಸ್ತಾನ ಟೂರ್ನಿಯಿಂದ ಹೊರಬಿತ್ತು. ತಂಡದ ವಿಶ್ವಕಪ್ ಪ್ರವೇಶದ ಕನಸು ಕೂಡ ಭಗ್ನಗೊಂಡಿತು. ಹಾಲಿ ಚಾಂಪಿಯನ್ ಭಾರತಕ್ಕಾಗಿ ದಿಪ್ಸನ್ ಟರ್ಕಿ 5, ಸುದೇವ್ ಬಿಳಿಮಗ್ಗ 3, ಎಸ್.ವಿ.ಸುನಿಲ್, ಪವನ್ ರಾಜ್‌ಭರ್ ಮತ್ತು ಕಾರ್ತಿ ಸೆಲ್ವಂ ತಲಾ ಎರಡು, ಉತ್ತಮ್ ಸಿಂಗ್ ಮತ್ತು ನೀಲಂ ಸಂಜೀವ್ ಕ್ಸೆಸ್ ಒಂದೊಂದು ಗೋಲು ಗಳಿಸಿದರು. 10 ಮತ್ತು 11ನೇ ನಿಮಿಷಗಳಲ್ಲಿ ರಾಜ್‌ಭರ್ ಗಳಿಸಿದ ಗೋಲುಗಳೊಂದಿಗೆ ಭಾರತ ಮುನ್ನಡೆ ಸಾಧಿಸಲು ಆರಂಭಿಸಿತ್ತು.

ಭಾರತ ಮತ್ತು ಇಂಡೋನೇಷ್ಯಾ ಆಟಗಾರರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು – ಹಾಕಿ ಇಂಡಿಯಾ ಟ್ವಿಟರ್ ಚಿತ್ರ

ಮಲೇಷ್ಯಾ, ಕೊರಿಯಾಗೆ ಗೆಲುವು

ಕೊರಿಯಾ ಮತ್ತು ಮಲೇಷ್ಯಾ ತಂಡಗಳು ಭರ್ಜರಿ ಜಯದೊಂದಿಗೆ ಸೂಪರ್ 4ರ ಘಟ್ಟ ಪ್ರವೇಶಿಸಿದವು. ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಮಲೇಷ್ಯಾ 8–1ರಲ್ಲಿ ಬಾಂಗ್ಲಾದೇಶವನ್ನು ಮಣಿಸಿ ಅಗ್ರಸ್ಥಾನಕ್ಕೇರಿತು. ಕೊರಿಯಾ 5–1ರಲ್ಲಿ ಒಮಾನ್ ವಿರುದ್ಧ ಜಯ ಗಳಿಸಿ ಎರಡನೇ ಸ್ಥಾನ ಗಳಿಸಿತು. ಈ ಮೂಲಕ ವಿಶ್ವಕಪ್‌ಗೆ ಅರ್ಹತೆ ಗಳಿಸುವ ಆಸೆಯನ್ನು ಜೀವಂತವಾಗಿರಿಸಿಕೊಂಡಿತು. ಒಟ್ಟು 7 ಪೆನಾಲ್ಟಿ ಕಾರ್ನರ್ ಅವಕಾಶಗಳ ಪೈಕಿ ಮೂರನ್ನು ಮಲೇಷ್ಯಾ ಗೋಲಾಗಿ ಪರಿವರ್ತಿಸಿತು.

ಟೆಸ್ಟ್: ಮ್ಯಾಥ್ಯೂಸ್, ಚಾಂಡಿಮಲ್ ಶತಕ

ಢಾಕಾ(ಪಿಟಿಐ): ಮ್ಯಾಥ್ಯೂಸ್ ಮತ್ತು ದಿನೇಶ್ ಚಾಂಡಿಮಲ್ ಅವರ ಶತಕಗಳ ಬಲದಿಂದ ಶ್ರೀಲಂಕಾ ತಂಡವು ಬಾಂಗ್ಲಾದೇಶ ಎದುರಿನ ಟೆಸ್ಟ್ ಪಂದ್ಯದ ಮೇಲೆ ಹಿಡಿತ ಸಾಧಿಸಿದೆ.

ಮ್ಯಾಥ್ಯೂಸ್ (ಔಟಾಗದೆ 145; 342ಎ, 4X12, 6X2) ಮತ್ತು ಚಾಂಡಿಮಲ್ (124; 219ಎ, 4X11, 6X1) ಆಟದ ಬಲದಿಂದ ಶ್ರೀಲಂಕಾ ಮೊದಲ ಇನಿಂಗ್ಸ್‌ನಲ್ಲಿ 165.1 ಓವರ್‌ಗಳಲ್ಲಿ 506 ರನ್ ಗಳಿಸಿ 141 ರನ್‌ಗಳ ಮುನ್ನಡೆ ಗಳಿಸಿತು. ಇದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡವು ನಾಲ್ಕನೇ ದಿನದಾಟದ ಅಂತ್ಯಕ್ಕೆ 13 ಓವರ್‌ಗಳಲ್ಲಿ 4 ವಿಕೆಟ್ ಗಳಿಗೆ 34 ರನ್ ಗಳಿಸಿದೆ. ಅಶಿತಾ ಫರ್ನಾಂಡೊ (12ಕ್ಕೆ2) ಉತ್ತಮ ದಾಳಿ ನಡೆಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 365, **ಶ್ರೀಲಂಕಾ:** 506 (ಏಂಜೆಲೊ ಮ್ಯಾಥ್ಯೂಸ್ ಔಟಾಗದೆ 145, ಚಾಂಡಿಮಲ್ 124, ಶಕೀಬ್ ಅಲ್ ಹಸನ್ 96ಕ್ಕೆ5, ಇಬಾದತ್ ಹುಸೇನ್ 148ಕ್ಕೆ4) ಎರಡನೇ ಇನಿಂಗ್ಸ್: ಬಾಂಗ್ಲಾ ದೇಶ: 13 ಓವರ್‌ಗಳಲ್ಲಿ 4ಕ್ಕೆ34 (ಅಶಿತ ಫರ್ನಾಂಡೊ 12ಕ್ಕೆ2).

ಗ್ರೀಸ್‌ನಲ್ಲಿ ಬೆಳಗಿದ ಕೇರಳ ಪ್ರತಿಭೆ

ಲಾಂಗ್‌ಜಂಪ್: ರಾಷ್ಟ್ರೀಯ ದಾಖಲೆವೀರನಿಗೆ ಒಲಿದ ಪದಕ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿರುವ ಮುರಳಿ ಶ್ರೀಶಂಕರ್ ಗ್ರೀಸ್‌ನಲ್ಲಿ ಚಿನ್ನದ ಸಂಭ್ರಮದ ಅಲೆ ಎಬ್ಬಿಸಿದರು. ಕಲಿಥಿಯಾದಲ್ಲಿ ಲಾಂಗ್ ಜಂಪ್‌ನಲ್ಲಿ ಚಿನ್ನ ಗೆದ್ದ ಅವರು ಕೇರಳದ ಪಾಲಕ್ಕಾಡ್‌ನ ಕುವರ.

ಕಳೆದ ತಿಂಗಳಲ್ಲಿ ಕೇರಳದ ತೇಞಿಪ್ಪಾಲಂನಲ್ಲಿ ನಡೆದ ಕೂಟದಲ್ಲಿ ಅವರು 8.36 ಮೀಟರ್ಸ್ ಸಾಧನೆಯೊಂದಿಗೆ ರಾಷ್ಟ್ರೀಯ ದಾಖಲೆ ಬರೆದಿದ್ದರು.

ಕಲಿಥಿಯಾದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆ ಮೀರಲು ಆಗದೇ ಇದ್ದರೂ ಸ್ವೀಡನ್, ಫ್ರಾನ್ಸ್‌ನ ಪ್ರಮುಖರಿಗಿಂತ ಹೆಚ್ಚಿನ ಸಾಧನೆ ಮಾಡಿದರು.

ಮೊದಲ ಎರಡು ಪ್ರಯತ್ನಗಳಲ್ಲಿ ಕ್ರಮವಾಗಿ 7.88 ಮೀಟರ್ಸ್ ಮತ್ತು 7.71 ಮೀಟರ್ಸ್ ದೂರು ಜಿಗಿದ ಅವರು ಮೂರನೇ ಪ್ರಯತ್ನದಲ್ಲಿ 8.31 ಮೀಟರ್ಸ್ ಸಾಧನೆ ಮಾಡಿದರು. ಹೀಗಾಗಿ ಸ್ವೀಡನ್‌ನ ತೊಬಿಯಾಸ್ ಮಾಂಟ್ಲರ್ ಮತ್ತು ಫ್ರಾನ್ಸ್‌ನ ಜೂಲ್ಸ್ ಪೊಮೆರಿಗೆ ನಿರಾಸೆ ಕಾದಿತ್ತು.

10 ಮಂದಿ ಸ್ಪರ್ಧಿಗಳಿದ್ದ ‘ಫೀಲ್ಡ್’ನಲ್ಲಿ ಶ್ರೀಶಂಕರ್, ತೊಬಿಯಾಸ್ ಮತ್ತು ಜೂಲ್ಸ್ ಮಾತ್ರ 8 ಮೀಟರ್ಸ್‌ಗಿಂತ ದೂರ ಜಿಗಿದರು.

ಮುರಳಿ ಶ್ರೀಶಂಕರ್ –ಟ್ವಿಟರ್ ಚಿತ್ರ

ಒಲಿಂಪಿಕ್ಸ್ ನಂತರ ಅವರು ಪಾಲ್ಗೊಂಡಿರುವ ಮೊದಲ ಅಂತರರಾಷ್ಟ್ರೀಯ ಕೂಟ ಇದಾಗಿದೆ. ಈಚೆಗೆ ಪಾಲ್ಗೊಂಡ ರಾಷ್ಟ್ರೀಯ ಕೂಟಗಳಲ್ಲಿ ಅವರು ಸತತವಾಗಿ 8 ಮೀಟರ್‌ಗೂ ಹೆಚ್ಚಿನ ಸಾಧನೆ ಮಾಡಿದ್ದಾರೆ.

ತಿರುವನಂತಪುರದಲ್ಲಿ ನಡೆದ ವರ್ಷದ ಮೊದಲ ಎರಡು ಗ್ರ್ಯಾನ್‌ಪ್ರಿಗಳಲ್ಲಿ ಕ್ರಮವಾಗಿ 8.14 ಮೀ ಮತ್ತು 8.17 ಮೀ ಸಾಧನೆ ಮಾಡಿದ್ದರು. ನಂತರ ಕೋಯಿಕ್ಕೋಡ್‌ನಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದರು.

ಜ್ಯೋತಿ ದಾಖಲೆ

100 ಮೀಟರ್ಸ್ ಓಟದಲ್ಲಿ ಜ್ಯೋತಿ ಯಾರಾಜಿ ಎರಡು ವಾರದಲ್ಲಿ ಮೂರು ಬಾರಿ ಹೊಸ ದಾಖಲೆ ಸೃಷ್ಟಿಸಿದರು. ನೆದರ್ಲೆಂಡ್ಸ್‌ನಲ್ಲಿ ನಡೆಯುತ್ತಿರುವ ಡಿ ಹ್ಯಾರಿ ಶಲ್ಟಿಂಗ್ ಗೇಮ್ಸ್‌ನಲ್ಲಿ 22 ವರ್ಷದ ಜ್ಯೋತಿ 13.04 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಜೆಸ್ವಿನ್ ಆಲ್ಡ್ರಿನ್‌ಗೆ 5ನೇ ಸ್ಥಾನ: ಕೋಯಿಕ್ಕೋಡ್‌ನಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್‌ಪ್ರಿಯಲ್ಲಿ ಮುರಳಿ ಶ್ರೀಶಂಕರ್‌ಗೆ ಪ್ರಬಲ ಪೈಪೋಟಿ ನೀಡಿದ್ದ ತಮಿಳುನಾಡಿನ ಜೆಸ್ವಿನ್ ಆಲ್ಡ್ರಿನ್ ಅವರು ಸ್ಪೇನ್‌ನಲ್ಲಿ ನಡೆದ ಇಬೆರೊಅಮೆರಿಕನ್ ಕೂಟದಲ್ಲಿ ಐದನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಅವರು 7.69 ಮೀ ದೂರ ಜಿಗಿದರು. ಕ್ರೊವೇಷ್ಯಾದ ಫಿಲಿಪ್ ಪ್ರಾವ್ಡಿವಾ (7.91 ಮೀ), ಉರುಗ್ವೆಯ ಎಮಿಲಿಯಾನೊ ಲಾಸ (7.82 ಮೀ) ಮತ್ತು ಪೆರುವಿನ ಜೋಸ್ ಲೂಯಿಸ್ ಮಂಡ್ರೋಜ್ (7.77 ಮೀ) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಪ್ರಜ್ಞಾನಂದ್‌ಗೆ ಹಿನ್ನಡೆ

ಚೆನ್ನೈ: ಭಾರತದ ಪ್ರಜ್ಞಾನಂದ, ಮೆಲ್ಟ್‌ವಾಟರ್ ಚಾಂಪಿಯನ್ಸ್ ಚೆಸ್ ಟೂರ್ ಚೆಸೆಬಲ್ ಮಾಸ್ಟರ್ಸ್ ಟೂರ್ನಿಯ ಪ್ರಶಸ್ತಿ ಸುತ್ತಿನಲ್ಲಿ ಆರಂಭದಲ್ಲಿ ಹಿನ್ನಡೆಗೆ ಒಳಗಾಗಿದ್ದಾರೆ. ಚೀನಾದ ದಿಂಗ್ ಲಿರೆನ್ ವಿರುದ್ಧ ನಡೆದ ಫೈನಲ್‌ನ ಮೊದಲ ದಿನ ಪ್ರಜ್ಞಾನಂದ 2.5-1.5ರ ಹಿನ್ನಡೆ ಅನುಭವಿಸಿದರು. ಮೊದಲ ಪಂದ್ಯದ ಮೊದಲ ಗೇಮ್‌ನಲ್ಲಿ ಸೋತ ಪ್ರಜ್ಞಾನಂದ ನಂತರ ಚೇತರಿಸಿಕೊಂಡು ಸಮಬಲ ಸಾಧಿಸಿದರು. ನಂತರ ಲಿರೆನ್ ಅವರು ಅಮೋಘ ಆಟವಾಡಿ ಮುನ್ನಡೆದರು.

ಫುಟ್‌ಬಾಲ್ ಆಟಗಾರ ಸರವಣನ್ ನಿಧನ

ಬೆಂಗಳೂರು: ಸಬ್ ಜೂನಿಯರ್ ವಿಭಾಗದಲ್ಲಿ ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ ಫುಟ್‌ಬಾಲ್ ಆಟಗಾರ ಸರವಣನ್ (55) ಬುಧವಾರ ಆಸ್ಪತ್ರೆಯಲ್ಲಿ ನಿಧನರಾದರು. 1983ರಲ್ಲಿ ನಡೆದ ಸಬ್ ಜೂನಿಯರ್ ರಾಷ್ಟ್ರೀಯ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಅವರು ನಂತರ ಸೀನಿಯರ್ ವಿಭಾಗದಲ್ಲಿ ಸರ್ಕಾರಿ ಮುದ್ರಣಾಲಯ ತಂಡದ ಪರವಾಗಿ ಆಡುತ್ತಿದ್ದರು. ಸೂಪರ್ ಡಿವಿಷನ್‌ನಲ್ಲಿ ಎಜಿಒಆರ್‌ಜಿ ತಂಡದಲ್ಲಿದ್ದರು.

ಸರವಣನ್

ಈಜು ಕೂಟ: ಹಾಷಿಕಾ, ರಿಧಿಮಾ ದಾಖಲೆ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಬೆಂಗಳೂರಿನ ಡಾಲ್ಫಿನ್ ಈಜು ಕೇಂದ್ರದ ಹಾಷಿಕಾ ರಾಮಚಂದ್ರ ಮತ್ತು ಬಸವನಗುಡಿ ಈಜು ಕೇಂದ್ರದ ರಿಧಿಮಾ ವೀರೇಂದ್ರಕುಮಾರ ಅವರು ಕರ್ನಾಟಕ ರಾಜ್ಯ ಈಜು ಸಂಸ್ಥೆ, ಬೆಳಗಾವಿಯ ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಸಹಯೋಗದಲ್ಲಿ ಗುರುವಾರ ನಡೆದ ರಾಜ್ಯ ಈಜು ಚಾಂಪಿಯನ್‌ಷಿಪ್‌ನ ಜೂನಿಯರ್ ವಿಭಾಗದಲ್ಲಿ ಚಿನ್ನ ಗೆದ್ದರು.

ಬಾಲಕಿಯರ 200 ಮೀ. ಫ್ರೀಸ್ಟೈಲ್‌ನಲ್ಲಿ ಹಾಷಿಕಾ(ಕಾಲ 2 ನಿಮಿಷ, 21.51ಸೆ.) 28 ವರ್ಷಗಳ ಹಿಂದೆ ಸಜಿನಿ ಶೆಟ್ಟಿ ನಿರ್ಮಿಸಿದ್ದ ದಾಖಲೆ(2:22.66ಸೆ.) ಮುರಿದರು. 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ರಿಧಿಮಾ(29.77 ಸೆ.) ಗುರಿ ಮುಟ್ಟಿ, ತಮ್ಮದೇ ದಾಖಲೆ(30.10 ಸೆ.) ಉತ್ತಮಪಡಿಸಿಕೊಂಡರು.

ಫಲಿತಾಂಶ: ಬಾಲಕಿಯರ ವಿಭಾಗ(ಗುಂಪು–2): 200 ಮೀ. ಫ್ರೀಸ್ಟೈಲ್: ಹಾಷಿಕಾ(ಕಾಲ 2 ನಿಮಿಷ, 21.51ಸೆ.)–1, ತನಿಷಿ ಗುಪ್ತಾ(ಡಾಲ್ಫಿನ್ ಕೇಂದ್ರ; 2:29.64ಸೆ.)–2, ತನಿಷಾ ವಿನಯ(2:37:28 ಸೆ.)–3.(ಗುಂಪು–2) 50 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಶಾಹ್(ಡಾಲ್ಫಿನ್ ಈಜು ಕೇಂದ್ರ; 33.13ಸೆ.)–1, ಪ್ರಿಯಾಂಶಿ ಮಿಶ್ರಾ(ಗಫ್ರಾಯ್ ಸ್ವಿಮ್ಮಿಂಗ್ ಪ್ರೊಗ್ರಾಮ್; 33.61ಸೆ.)–2, ನಕ್ಷತ್ರಾ ಗೌತಮ್(ಬಸವನಗುಡಿ ಈಜು ಕೇಂದ್ರ; 34.12ಸೆ.)–3;

ಮಹಿಳೆಯರು (ಗುಂಪು–1): 50 ಮೀ. ಬ್ಯಾಕ್‌ಸ್ಟ್ರೋಕ್: ರಿಧಿಮಾ(29.77 ಸೆ.)–1 ಶಾಲಿನಿ ದೀಕ್ಷಿತ್(ಡಾಲ್ಫಿನ್ ಈಜು ಕೇಂದ್ರ:31.55ಸೆ.)–2, ರಿತು ಭರಮರೆಡ್ಡಿ(ಬಸವನಗುಡಿ ಈಜು ಕೇಂದ್ರ; 32.56 ಸೆ.)–3; ಮಹಿಳೆಯರ ವಿಭಾಗ(ಗುಂಪು–1): 800 ಮೀ. ಫ್ರೀಸ್ಟೈಲ್: ಶಿರೀನ್ ಎನ್.(9:35.12ಸೆ.), ಆದಿತಿ ಮುಲಾಯ್(9:51.45ಸೆ.)–2, ರಿತಿಕಾ ಬಿ.ಎಂ. (ಮೂವರು ಬಸವನಗುಡಿ ಈಜು ಕೇಂದ್ರ; 10:00.17ಸೆ.)–3; ಬಾಲಕರು: (ಗುಂಪು–1): 800 ಮೀ. ಫ್ರೀಸ್ಟೈಲ್: ಪವನ ಧನಂಜಯ(8:48.57 ಸೆ.)–1, ಅಮೋಘ ವೆಂಕಟೇಶ(ಇಬ್ಬರೂ ಬಸವನಗುಡಿ ಈಜು ಕೇಂದ್ರ; 9:00:06ಸೆ.)–2, ಧೋನಿಶ್ ಎನ್.(ವಿಜಯನಗರ ಈಜು ಕೇಂದ್ರ; 9:09.31ಸೆ.)–3; 200 ಮೀ. ಬಟರ್‌ಫ್ಲೈ: ಉತ್ಕರ್ಷ ಪಾಟೀಲ(ಬಸವನಗುಡಿ ಈಜು ಕೇಂದ್ರ;2:06.58ಸೆ.)–1, ಕಾರ್ತಿಕೇಯನ್ (ಡಾಲ್ಫಿನ್ ಈಜು ಕೇಂದ್ರ;2:08.88)–2, ನಯನ್ ವಿಘ್ನೇಶ್ (ನೆಟ್ಟಕಲ್ಲಪ್ಪ ಈಜು ಕೇಂದ್ರ;2:09.34ಸೆ.)–3. (ಗುಂಪು–2): 100 ಮೀ. ಬ್ರೆಸ್ಟ್‌ಸ್ಟ್ರೋಕ್: ಆರ್. ನವನೀತ್ ಗೌಡ(ಡಾಲ್ಫಿನ್ ಈಜು ಕೇಂದ್ರ; 1:12.34ಸೆ.)–1, ದಕ್ಷ ಮಟ್ಟ(ಬಸವನಗುಡಿ ಈಜು ಕೇಂದ್ರ: 1:17.00ಸೆ.)–2, ಡೆನಿಯಲ್ ಪಾಲ್(ಡಾಲ್ಫಿನ್ ಕೇಂದ್ರ; 1:17.03ಸೆ.)–3‘; 100 ಮೀ. ಬ್ರೆಸ್ಟ್‌ಸ್ಟ್ರೋಕ್(ಗುಂಪು–1): ವಿದಿಥ್ ಶಂಕರ(ಡಾಲ್ಫಿನ್ ಕೇಂದ್ರ; 1:06.47ಸೆ.)–1, ಶುಭಾಂಗ ಕುಬೇರ್ (1:09.16 ಸೆ.)–2, ಆದಿತ್ ಓಲೇಟಿ(ಇಬ್ಬರೂ ಬಸವನಗುಡಿ ಈಜು ಕೇಂದ್ರ;1:09.59ಸೆ.)–3. (ಗುಂಪು–1) 50 ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ ಪಾಟೀಲ(ಬಸವನಗುಡಿ ಈಜು ಕೇಂದ್ರ; 27.76ಸೆ.)–1, ನಯನ್ ವಿಘ್ನೇಶ(ನೆಟ್ಟಕಲ್ಲಪ್ಪ ಈಜು ಕೇಂದ್ರ; 28.29 ಸೆ.)–2, ಆಕಾಶ ಮಾಣಿ(ಬಸವನಗುಡಿ ಈಜು ಕೇಂದ್ರ; 28.51ಸೆ.)–3; (ಗುಂಪು–2) 50 ಮೀ. ಬ್ಯಾಕ್‌ಸ್ಟ್ರೋಕ್: ಇಶಾನ್ ಮೆಹ್ರಾ (ಡಾಲ್ಫಿನ್ ಈಜು ಕೇಂದ್ರ;29.56ಸೆ.)–1, ಕುಶಾಲ್ ಕೆ.(-ಬಸವನಗುಡಿ ಈಜು ಕೇಂದ್ರ; 29.82ಸೆ.)–2, ಅಮನ್ ಸುಣಗಾರ(ಬೆಳಗಾವಿ ಸ್ವಿಮ್ಮರ್ಸ್ ಕ್ಲಬ್; 29.88ಸೆ.)–3; ಮಹಿಳೆಯರ ವಿಭಾಗ (ಗುಂಪು–1): 100 ಮೀ. ಬ್ರೆಸ್ಟ್‌ಸ್ಟ್ರೋಕ್: ಸಾನ್ವಿ ರಾವ್ (ಗ್ಲೋಬಲ್ ಈಜು ಕೇಂದ್ರ; 1:17.28ಸೆ.)–1, ಎಸ್.ಲಕ್ಷ್ಯ (ಬಸವನಗುಡಿ ಈಜು ಕೇಂದ್ರ; 1:17.34 ಸೆ.)–2, ಲಿನೇಯ್ಯಾ ಅನಿಲಕುಮಾರ(ಗ್ಲೋಬಲ್ ಈಜು ಕೇಂದ್ರ; 1:18.51ಸೆ.)–3; (ಗುಂಪು–2) 100 ಮೀ. ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ (ಡಾಲ್ಫಿನ್ ಕೇಂದ್ರ; 1:16.39ಸೆ.)–1, ವಿನಿತಾ ನಯನಾ(ಬಸವನಗುಡಿ ಈಜು ಕೇಂದ್ರ; 1:17.48ಸೆ.)–2, ರೈನಾ ಫರ್ನಾಂಡೀಸ್(-ಡಾಲ್ಫಿನ್ ಈಜು ಕೇಂದ್ರ;1:17.50ಸೆ.)–3;

ಗುಂಪು 3: ಬಾಲಕಿಯರು: 100 ಮೀ. ಬಟರ್‌ಫ್ಲೈ: ಅಲಿಸ್ಸಾ ರೆಗೊ(1:17.81ಸೆ.)–1, ಜನನಿ ವಿ.(1:21.21ಸೆ.)–2, ದ್ವಿಶಾ ಶೆಟ್ಟಿ(ಮೂವರು ಡಾಲ್ಫಿನ್ ಈಜು ಕೇಂದ್ರ;1:24.37ಸೆ.)–3; 200 ಮೀ. ಫ್ರೀಸ್ಟೈಲ್: ಅಲಿಸ್ಸಾ ರೆಗೊ (ಡಾಲ್ಫಿನ್ ಕೇಂದ್ರ;2:27.65 ಸೆ.)–1, ತ್ರಿಶಾ ಸಿಂಧು (ಡಿಕೆವಿ ಈಜು ಕೇಂದ್ರ;2:28.53 ಸೆ.)–2, ತನ್ವಿ ಗೌರವ(ವಿಜಯನಗರ ಈಜು ಕೇಂದ್ರ; 2:23.770ಸೆ.)–3; ಬಾಲಕರು: 100 ಮೀ. ಬಟರ್‌ಫ್ಲೈ: ಅರ್ಜುನ ರಾಘವನ್(1:16.28ಸೆ.)–1, ಅಥರ್ವ ಪಾಲ್‌ಸಿಂಗ್ ರಾಥೋಡ(ಇಬ್ಬರೂ ಡಾಲ್ಫಿನ್ ಈಜು ಕೇಂದ್ರ;1:16.69ಸೆ.)–2, ಎಸ್.ಕ್ರಿಶ್(ಬಸವನಗುಡಿ ಈಜು ಕೇಂದ್ರ; 1:17.25ಸೆ.)–3; 200 ಮೀ. ಫ್ರೀಸ್ಟೈಲ್: ಶರಣ ಶ್ರೀಧರ (ಕಾಲ: 2ನಿಮಿಷ 19.08 ಸೆ.)–1, ಜಾಸ್ ಸಿಂಗ್(ಇಬ್ಬರೂ ಮತ್ಸ್ಯ ಈಜು ಕೇಂದ್ರ;2:29.93ಸೆ.)–2, ಆರವ್ ಜೆ. (ಪೂಜಾ ಈಜು ಕೇಂದ್ರ; 2:33.08 ಸೆ.)–3;

200 ಮೀ. ಫ್ರೀಸ್ಟೈಲ್‌ನಲ್ಲಿ ವಿಜೇತರಾದ ಆಲಿಸಾ ರೇಗೊ, ತ್ರಿಶಾ ಸಿಂಧು ಹಾಗೂ ತನ್ವಿ ಗೌರವ –ಪ್ರಜಾವಾಣಿ ಚಿತ್ರ/ಏಕನಾಥ ಅಗಸಿಮನಿ

ಫ್ರೆಂಚ್ ಓಪನ್ ಟೆನಿಸ್: ಜೆಂಗ್‌ಗೆ ಮಣಿದ ಹಲೆಪ್

ಮೆಡ್ವೆಡೆವ್‌ಗೆ ಜಯ; ಹಲೆಪ್‌ಗೆ ನಿರಾಸೆ

ಪ್ಯಾರಿಸ್ (ರಾಯಿಟರ್ಸ್): ಸುಲಭ ಜಯ ಸಾಧಿಸಿದ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಮೂರನೇ ಸುತ್ತು ಪ್ರವೇಶಿಸಿದರು.

ಫಿಲಿಪ್ ಚಾರ್ಟರ್ ಅಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಸರ್ಬಿಯಾದ ಲಾಸ್ಲೊ ಜೇರೆ ವಿರುದ್ಧ ಮೆಡ್ವೆಡೆವ್ 6-3, 6-4, 6-3ರಲ್ಲಿ ಜಯ ಗಳಿಸಿದರು.

ಆರಂಭದಲ್ಲಿ ಕೊಂಚ ಹಿನ್ನಡೆ ಅನುಭವಿಸಿದರೂ ನಂತರ ರಕ್ಷಣಾತ್ಮಕ ಮತ್ತು ಆಕ್ರಮಣಕಾರಿ ಆಟದ ಮೂಲಕ ಮಿಂಚಿ ಗೆಲುವಿನ ಹಾದಿಯಲ್ಲಿ ಮುನ್ನಡೆದರು. ಸರ್ಬಿಯಾದ ಮಿಯೋಮಿರ್ ಕೆಸ್ಮನೊವಿಚ್ ವಿರುದ್ಧ ಅವರು ಮುಂದಿನ ಸುತ್ತಿನಲ್ಲಿ ಸೆಣಸುವರು.

ಚೀನಾ ಪ್ರತಿಭೆಗೆ ಮಣಿದ ಹಲೆಪ್: ಚೀನಾದ ಯುವ ಆಟಗಾರ್ತಿ ಜೆಂಗ್ ಕ್ವಿನ್ವೆಂಗ್ ಎದುರು ಸೋತ ಸಿಮೋನ ಹಲೆಪ್ ಟೂರ್ನಿಯಿಂದ ಹೊರಬಿದ್ದರು. 19 ವರ್ಷದ ಜೆಂಗ್ 2–6, 6–2, 6–1ಲ್ಲಿ ಜಯ ಗಳಿಸಿದರು.

ಪೌಲಾ ಬಡೋಸಾ ಮಹಿಳೆಯರ ವಿಭಾಗದ ಮೂರನೇ ಸುತ್ತು ಪ್ರವೇಶಿಸಿದರು. ಅವರು 7-5, 3-6, 6-2ರಲ್ಲಿ ಸ್ಲೊವೇನಿಯಾದ ಕಾಜಾ ಜುವಾನ್ ವಿರುದ್ಧ ಗೆದ್ದರು. ಬೇಸ್‌ಲೈನ್‌ನಿಂದ ಭರ್ಜರಿ ಹೊಡೆತಗಳೊಂದಿಗೆ ಮಿಂಚಿದ ಪೌಲಾ ನಂತರ ಡ್ರಾಪ್ ಶಾಟ್‌ಗಳ ಮೂಲಕ ಎದುರಾಳಿಯನ್ನು ಕಾಡಿದರು.

ಎರಡನೇ ಸೆಟ್‌ನಲ್ಲಿ ಜುವಾನ್ ತಿರುಗೇಟು ನೀಡಿದರು. ಆದರೆ ನಿರ್ಣಾಯಕ ಮೂರನೇ ಸೆಟ್ ಗೆದ್ದು ಪೌಲಾ ಅವರು ಪಂದ್ಯ ತಮ್ಮದಾಗಿಸಿಕೊಂಡರು.

ಪೌಲಾ ಬಡೋಸ –ಎಎಫ್‌ಪಿ ಚಿತ್ರ

ಬೋಪಣ್ಣ ಜೋಡಿ 16ರ ಘಟ್ಟ ಪ್ರವೇಶ

ಭಾರತದ ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮಟ್ವೆ ಮಿಡೆಲ್‌ಕೂಪ್ ಪುರುಷರ ಡಬಲ್ಸ್‌ನ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಗುರುವಾರ ನಡೆದ ಪಂದದಲ್ಲಿ ಅವರು ಆ್ಯಂಡ್ರೆ ಗೊಲುಬೆ ಮತ್ತು ಫ್ಯಾಬ್ರಿಸ್ ಮಾರ್ಟಿನ್ ವಿರುದ್ಧ 6-3, 6-4ರಲ್ಲಿ ಜಯ ಗಳಿಸಿದರು.

ಒಂದು ತಾಸು ಆರು ನಿಮಿಷ ನಡೆದ ಪಂದ್ಯದಲ್ಲಿ 16ನೇ ಶ್ರೇಯಾಂಕದ ಭಾರತ–ನೆದರ್ಲೆಂಡ್ಸ್ ಜೋಡಿಗೆ ಕಜಕಸ್ತಾನ ಮತ್ತು ಫ್ರಾನ್ಸ್ ಜೋಡಿ ಆರಂಭದಲ್ಲಿ ಪ್ರತಿರೋಧ ಒಡ್ಡಿ 4–4ರ ಸಮಬಲ ಸಾಧಿಸಿತು. ನಂತರ ಬೋಪಣ್ಣ ಮತ್ತು ಮಿಡೆಲ್‌ಕೂಪ್ ಪಾರಮ್ಯ ಮೆರೆದರು. ಬೋಪಣ್ಣ 2011, 2016, 2018 ಮತ್ತು 2021 ಫ್ರೆಂಚ್ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಪ್ರತ್ಯೇಕತಾವಾದಿಗಳಿಗೆ ರಷ್ಯಾ ಪೌರತ್ವ: ಪುಟಿನ್ ಆದೇಶ

ಕೀವ್ (ಎಪಿ): ರಷ್ಯಾ ಸೇನೆಯ ಬಲವರ್ಧನೆಗೆ ನೇಮಕಾತಿಯಲ್ಲಿ ವಯೋಮಾನ ಸಡಿಲಿಕೆಯ ಮಸೂದೆಯನ್ನು ಸಂಸತ್ತು ಅಂಗೀಕರಿಸಿದ ಬೆನ್ನಲ್ಲೇ ಅಧ್ಯಕ್ಷ ಪುಟಿನ್, ಉಕ್ರೇನ್‌ನ ದಕ್ಷಿಣದ ಕೆಲವು ಪ್ರದೇಶಗಳಲ್ಲಿ ತಮ್ಮ ಪರವಿರುವ ಪ್ರತ್ಯೇಕತಾವಾದಿಗಳಿಗೆ ರಷ್ಯಾ ಪೌರತ್ವವನ್ನು ತ್ವರಿತವಾಗಿ ನೀಡಲು ಆದೇಶಿಸಿದ್ದಾರೆ.

ರಷ್ಯಾ ಆಕ್ರಮಿತ ಪ್ರದೇಶಗಳ ಮೇಲೆ ಹಿಡಿತ ಸಾಧಿಸಲು ಪುಟಿನ್ ಬುಧವಾರ ಹೊರಡಿಸಿರುವ ಈ ಆದೇಶವು ಉಕ್ರೇನಿನ ಕೆರ್ಸಾನ್ ಮತ್ತು ಝುಪೊರಿಝಿಯಾ ಪ್ರದೇಶಗಳಿಗೆ ಅನ್ವಯಿಸಲಿದೆ.

ಉಕ್ರೇನ್ ಸೇನೆಗೆ ಭಾರಿ ನಷ್ಟ: ಉಕ್ರೇನಿನ ಪೂರ್ವದಲ್ಲಿನ ಪೊಕ್ರೊವ್‌ಸ್ಕ್ ರೈಲು ನಿಲ್ದಾಣದಲ್ಲಿ ಅಪಾರ ಪ್ರಮಾಣದ ಯುದ್ಧೋಪಕರಣ ಮತ್ತು ಸೇನೆಯ ದೊಡ್ಡ ಘಟಕ ಗುರಿಯಾಗಿಸಿ ವೈಮಾನಿಕ ದಾಳಿ ನಡೆಸಿ, ಉಕ್ರೇನ್ ಸೇನೆಗೆ ಭಾರಿ ನಷ್ಟ ಮಾಡಿರುವುದಾಗಿ ರಷ್ಯಾ ಸೇನೆ ಗುರುವಾರ ಹೇಳಿದೆ.

ಉಕ್ರೇನ್ ಪಡೆಗಳಿಗೆ ಬಲ ತುಂಬಲು ಆಕ್ರಮಣಕಾರಿ ದಳವನ್ನು ರೈಲು ನಿಲ್ದಾಣಕ್ಕೆ ತಂದು ಇಳಿಸುತ್ತಿದ್ದಾಗ ಯುದ್ಧ ವಿಮಾನಗಳು ಬಾಂಬ್ ದಾಳಿ ನಡೆಸಿದವು. ದಕ್ಷಿಣ ಮೈಕೋಲೈವ್ ಪ್ರದೇಶದ ನಿಪ್ರೊವ್‌ಸ್ಕೆಯಲ್ಲಿ ಉಕ್ರೇನ್‌ನ ವಿದ್ಯುನ್ಮಾನ ಗುಪ್ತಚರ ಕೇಂದ್ರ ನಾಶಪಡಿಸಿ, ಉಕ್ರೇನ್‌ನ 11 ಸೈನಿಕರು ಮತ್ತು 15 ವಿದೇಶಿ ತಜ್ಞರನ್ನು ಕೊಲ್ಲಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಮೇಜರ್ ಜನರಲ್ ಐಗೊರ್ ಕೊನಶೆಂಕೋವ್ ತಿಳಿಸಿದರು.

ಮುಂದಿನ ಗುರಿ ಪೋಲೆಂಡ್: ‘ಉಕ್ರೇನ್ ಸಮಸ್ಯೆಗೆ ಕೊನೆಹಾಡಿದ್ದೇವೆ. ಮುಂದಿನ ಸರದಿ ಪೋಲೆಂಡ್‌ನದು’ ಎಂದು ಚೆಚನ್ಯಾ ನಾಯಕ ಮತ್ತು ಪುಟಿನ್ ಅವರ ಮಿತ್ರ ರಮ್ಜಾನ್ ಕದಿರೋವ್ ಹೇಳಿದ್ದಾರೆ. ಈ ಮೂಲಕ ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸಿದ ಪೋಲೆಂಡ್‌ಗೆ ನೇರ ಬೆದರಿಕೆ ಹಾಕಿದ್ದಾರೆ.

‘ಪುಟಿನ್ ಆದೇಶ ನೀಡಿದರೆ, ಕೇವಲ 6 ಸೆಕೆಂಡ್‌ಗಳಲ್ಲಿ ನಮ್ಮ ಸಾಮರ್ಥ್ಯ ನಿಮಗೆ ತೋರಿಸುತ್ತೇವೆ’ ಎಂದು ಕದಿರೋವ್ ಬೆದರಿಕೆ ಹಾಕಿರುವ ವಿಡಿಯೊ ಟ್ವಿಟರ್‌ನಲ್ಲಿ ಬಿಡುಗಡೆಯಾಗಿದೆ.

‘8 ವರ್ಷ ಪೂರೈಸಿದ ದುರಾಡಳಿತದ ಸರ್ಕಾರ’

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 8ನೇ ವರ್ಷ ಪೂರೈಸಿರುವ ಬೆನ್ನಲ್ಲೇ, 8 ವರ್ಷಗಳ ಆಡಳಿತವು ದುರವಸ್ಥೆ ಮತ್ತು ದುರಾಡಳಿತದಿಂದ ಕೂಡಿತ್ತು ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಅವಧಿಯಲ್ಲಿ ಹಣದುಬ್ಬರದ ಭಾರಿ ಏರಿಕೆ, ಉದ್ಯೋಗ ಕುಸಿತ ಮತ್ತು ಕೋಮು ಧ್ರುವೀಕರಣವು ಈ ಸರ್ಕಾರದ ಹಾಲ್‌ಮಾರ್ಕ್ ಆಗಿದೆ ಎಂದು ಕಾಂಗ್ರೆಸ್ ದೂರಿದೆ.

ಗುರುವಾರ ಜಂಟಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ನಾಯಕರಾದ ರಣದೀಪ್ ಸುರ್ಜೇವಾಲ ಮತ್ತು ಅಜಯ್ ಮಾಕೇನ್ ಅವರು, ‘ಸುಳ್ಳುಗಳು ಮತ್ತು ಘೋಷಣೆಗಳ ಮೂಲಕ ಜನರಿಗೆ ವಂಚನೆ ಮಾಡುವ ಮೂಲಕ ಬಿಜೆಪಿ ಸರ್ಕಾರವು ಎಲ್ಲ ದಾಖಲೆಗಳನ್ನು ಮುರಿದಿದೆ’ ಎಂದು ಹೇಳಿದರು.

ಜನರಿಗೆ ನೀಡಲಾಗಿದ್ದ ಒಳ್ಳೆಯ ದಿನ(ಅಚ್ಛೇದಿನ್)ದ ಭರವಸೆಯು ಕೇವಲ ಬಿಜೆಪಿ ಮತ್ತು ಹಲವು ಕೆಲವು ಉದ್ಯಮಿಗಳಿಗೆ ಮಾತ್ರವೇ ಸೀಮಿತವಾಗಿತ್ತು. ಬಿಜೆಪಿಯ ವೈಫಲ್ಯಗಳನ್ನು ವಿವರಿಸುವ 8 ವರ್ಷಗಳು ಮತ್ತು 8 ವಂಚನೆಗಳು, ಬಿಜೆಪಿ ವೈಫಲ್ಯತೆ ಎಂಬ ಕೈಪಿಡಿಯನ್ನು ಬಿಡುಗಡೆ ಕಾಂಗ್ರೆಸ್ ಮಾಡಿದೆ.

ಬಿಜೆಪಿಯು ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣದ ಬಗ್ಗೆ ಚಿಂತೆಯೇ ಮಾಡುವುದಿಲ್ಲ ಎಂದು ಮಾಕೇನ್ ಹೇಳಿದರು.

ಸುಂಜ್ವಾನ್ ದಾಳಿ: ಪ್ರಮುಖ ಆರೋಪಿ ಸೆರೆ

ನವದೆಹಲಿ: ಜಮ್ಮು ಹೊರವಲಯದ ಸುಂಜ್ವಾನ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಪ್ರಮುಖ ಆರೋಪಿ ಎಂದು ಶಂಕಿಸಲಾದ ಅಬಿದ್ ಅಹಮ್ಮದ್ ಮೀರ್ ಎಂಬಾತನನ್ನು ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಬಂಧಿಸಿದೆ.

ಪುಲ್ವಾಮಾ ನಿವಾಸಿ ಅಬಿದ್, ಜೈಶ್–ಎ–ಮೊಹಮ್ಮದ್(ಜೆಇಎಂ) ಉಗ್ರ ಸಂಘಟನೆಯ ನಂಟು ಹೊಂದಿದ್ದು, ಇದೇ ಪ್ರಕರಣಕ್ಕೆ ಸಂಬಂಧಿಸಿ ಈ ಹಿಂದೆ ಬಂಧಿಸಿದ್ದ ಬಿಲಾಲ್ ಅಹಮ್ಮದ್ ವಾಗೆಯ ಸಹಚರ ಎಂದು ಎನ್‌ಐಎ ಅಧಿಕಾರಿಗಳು ಗುರುವಾರ ಹೇಳಿದ್ದಾರೆ. ಪಾಕಿಸ್ತಾನದಲ್ಲಿರುವ ಜೆಇಎಂ ಉಗ್ರರ ಜೊತೆಗೂ ಈತನಿಗೆ ನಂಟಿದೆ ಎಂದಿದ್ದಾರೆ.

ಏಪ್ರಿಲ್ 22ರಂದು ಅರೆಸೇನಾ ಪಡೆಯನ್ನು ಕರೆದೊಯ್ಯುತ್ತಿದ್ದ ಬಸ್‌ನ ಮೇಲೆ ಜೆಇಎಂನ ಇಬ್ಬರು ಆತ್ಮಾಹುತಿ ದಾಳಿಕೋರರು ನಡೆಸಿದ ದಾಳಿಯಲ್ಲಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ಎಎಸ್‌ಐಯೊಬ್ಬರು ಹುತಾತ್ಮರಾಗಿದ್ದರು. ಇಬ್ಬರು ದಾಳಿಕೋರರು ಕೂಡ ಮೃತಪಟ್ಟಿದ್ದರು.

ಕೋವಿಡ್‌ನಿಂದ ಶೇ 9ರಷ್ಟು ಸಾವು: ಕೇಂದ್ರದ ವರದಿ

ನವದೆಹಲಿ: 2020ರಲ್ಲಿ ದೇಶದಲ್ಲಿ ವೈದ್ಯಕೀಯ ಪ್ರಮಾಣಪತ್ರದೊಂದಿಗೆ ದಾಖಲಾದ ಒಟ್ಟು 18.11 ಲಕ್ಷ ಸಾವಿನ ಪ್ರಕರಣಗಳಲ್ಲಿ, ಶೇ 42 ರಷ್ಟು ಮಂದಿ ಹೃದಯ ಕಾಯಿಲೆ, ರಕ್ತಹೀನತೆ ಮತ್ತು ಉಬ್ಬಸದಿಂದ ಮೃತಪಟ್ಟಿದ್ದಾರೆ. 1.60 ಲಕ್ಷ ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದು, ಇಂತಹ ಸಾವಿನ ಪ್ರಮಾಣ ಶೇ 9ರಷ್ಟಿದೆ ಎಂದು ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರ ವರದಿಯಲ್ಲಿ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಸೆನೆಗಲ್: ಆಸ್ಪತ್ರೆಯಲ್ಲಿ 11 ಶಿಶುಗಳು ಸಾವು

ಡಕಾರ್, ಸೆನೆಗಲ್ (ಎಪಿ): ಸೆನೆಗಲ್‌ನ ಟಿವಾವಾನ್ ನಗರದ ಸಾರ್ವಜನಿಕ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಬುಧವಾರ ರಾತ್ರಿ ಅಗ್ನಿ ಅವಘಡದಲ್ಲಿ 11 ನವಜಾತ ಶಿಶುಗಳು ಮೃತಪಟ್ಟಿವೆ.

ರಾಜಧಾನಿ ಡಕಾರ್‌ನಿಂದ ಈಶಾನ್ಯಕ್ಕೆ 120 ಕಿಲೋಮೀಟರ್ ದೂರದಲ್ಲಿ ಟಿವಾವಾನ್‌ನ ಮೇಮ್ ಅಬ್ದೌ ಅಜೀಜ್ ಸೈ ದಬಾಖ್ ಆಸ್ಪತ್ರೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿದೆ ಎಂದು ಮೇಯರ್ ಡೆಂಬಾ ಡಿಯೋಪ್ ಹೇಳಿದ್ದಾರೆ. ‘ಈ ಘಟನೆ ತೀವ್ರ ನೋವು ಮತ್ತು ನಿರಾಶೆ ಮೂಡಿಸಿದೆ’ ಎಂದು ಸೆನೆಗಲ್ ಅಧ್ಯಕ್ಷ ಮ್ಯಾಕಿ ಸಾಲ್ ಟ್ವೀಟ್ ಮಾಡಿದ್ದಾರೆ.

ಬಾಹ್ಯಾಕಾಶ ಸಹಕಾರ: ಬ್ರಿಕ್ಸ್ ಜಂಟಿ ಸಮಿತಿ

ಬೀಜಿಂಗ್ (ಪಿಟಿಐ): ಬ್ರಿಕ್ಸ್ ಸದಸ್ಯ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಬಾಹ್ಯಾಕಾಶ ಸಹಕಾರದ ಜಂಟಿ ಸಮಿತಿಯನ್ನು ಬುಧವಾರ ಅಧಿಕೃತವಾಗಿ ಪ್ರಾರಂಭಿಸಿವೆ.

ಬ್ರಿಕ್ಸ್ ದೇಶಗಳ ಬಾಹ್ಯಾಕಾಶ ಸಂಸ್ಥೆಗಳು ದೂರಸಂವೇದಿ ಉಪಗ್ರಹ ಪರಿವೀಕ್ಷಣೆ ಮತ್ತು ದತ್ತಾಂಶ ಹಂಚಿಕೆ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೆಚ್ಚಿಸುವ ಉದ್ದೇಶದಿಂದ ಈ ಜಂಟಿ ಸಮಿತಿ ಪ್ರಾರಂಭಿಸಿವೆ. ಕಳೆದ ಆಗಸ್ಟ್‌ನಲ್ಲಿ, ಬ್ರಿಕ್ಸ್ ರಿಮೋಟ್ ಸೆನ್ಸಿಂಗ್ ಉಪಗ್ರಹ ಸಮೂಹ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಈ ವರ್ಷದ ಅಧ್ಯಕ್ಷ ಸ್ಥಾನ ಚೀನಾಕ್ಕೆ ಸಿಕ್ಕಿದೆ.

ಅಮೆರಿಕ– ಜಪಾನ್ ವಿಮಾನ ಹಾರಾಟ

ಟೋಕಿಯೊ/ ಬೀಜಿಂಗ್(ಎಪಿ/ರಾಯಿಟರ್ಸ್): ಜಪಾನ್ ಮತ್ತು ಅಮೆರಿಕ ಪಡೆಗಳು ಜಪಾನ್ ಸಮುದ್ರದ ಮೇಲೆ ಯುದ್ಧ ವಿಮಾನಗಳು ಜಂಟಿ ಹಾರಾಟ ಅಭ್ಯಾಸ ನಡೆಸಿದವು ಎಂದು ಜಪಾನ್ ಸೇನೆ ಗುರುವಾರ ತಿಳಿಸಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಟೋಕಿಯೊಕ್ಕೆ ಭೇಟಿ ನೀಡಿದ್ದಾಗ ಚೀನಾ ಮತ್ತು ರಷ್ಯಾದ ಬಾಂಬರ್ ವಿಮಾನಗಳು ಮಂಗಳವಾರ ಜಪಾನ್ ಬಳಿ ಜಂಟಿ ಹಾರಾಟ ನಡೆಸಿದ್ದಕ್ಕೆ ಅಮೆರಿಕ, ಜಪಾನ್ ಈ ರೀತಿ ಪ್ರತಿಕ್ರಿಯಿಸಿವೆ. ಚೀನಾ-ರಷ್ಯಾದ ಯುದ್ಧ ವಿಮಾನಗಳ ಜಂಟಿ ಹಾರಾಟವು, ಕ್ವಾಡ್‌ಗೆ ಬೆದರಿಕೆಯೊಡ್ಡುವ ಜತೆಗೆ, ಪ್ರಚೋದನೆ ಹೆಚ್ಚಿಸುವ ಉದ್ದೇಶ ಹೊಂದಿದೆ ಎಂದು ಜಪಾನ್ ರಕ್ಷಣಾ ಸಚಿವ ನಬುವೊ ಕಿಶಿ ಹೇಳಿದ್ದಾರೆ.

ತೈವಾನ್ ಸುತ್ತ ಸಮರಾಭ್ಯಾಸ: ತೈವಾನ್ ಆಕ್ರಮಣಕ್ಕೆ ಚೀನಾ ಮುಂದಾದರೆ ಸೈನ್ಯದೊಂದಿಗೆ ಮಧ್ಯಪ್ರವೇಶಿಸುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಎಚ್ಚರಿಕೆ ನೀಡಿದ ಕೆಲವು ದಿನಗಳಲ್ಲಿ, ಚೀನಾ ಬುಧವಾರ ತೈವಾನ್ ಸುತ್ತಲೂ ಸೇನಾ ಸಮಾರಭ್ಯಾಸಗಳನ್ನು ನಡೆಸುವುದಾಗಿ ಘೋಷಿಸಿದೆ.



ಇಂದು ಎರಡನೇ ಕ್ವಾಲಿಫೈಯರ್: ಬೆಂಗಳೂರು ತಂಡಕ್ಕೆ ರಾಜಸ್ಥಾನ ಚಾಲೆಂಜ್

ಫೈನಲ್ ಮೇಲೆ ‘ರಾಯಲ್’ ಕಣ್ಣು

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಫಫ್ ಡುಪ್ಲೆಸಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ರಜತ್ ಪಾಟೀದಾರ್ ಚೆಂದದ ಶತಕದ ಬಲದಿಂದ ಎಲಿಮಿನೇಟರ್ ಪಂದ್ಯದಲ್ಲಿ ಜಯಭೇರಿ ಬಾರಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಚೊಚ್ಚಲ ಪ್ರಶಸ್ತಿ ಗೆಲುವಿಗೆ ಇನ್ನೆರಡೇ ಹೆಜ್ಜೆ ಬಾಕಿ ಇದೆ.

ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಅಂಗಳದಲ್ಲಿ ಶುಕ್ರವಾರ ನಡೆಯಲಿರುವ ಎರಡನೇ ಕ್ವಾಲಿಫೈಯರ್ ಆರ್‌ಸಿಬಿಗೆ ಮೊದಲ ಹೆಜ್ಜೆಯಾಗಲಿದೆ. ಇದರಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಸವಾಲನ್ನು ಎದುರಿಸಬೇಕಿದೆ. ಈ ಪಂದ್ಯದಲ್ಲಿ ಜಯಿಸುವ ತಂಡವು ಫೈನಲ್‌ಗೆ ಪ್ರವೇಶಿಸಿ, ಗುಜರಾತ್ ಟೈಟನ್ಸ್ ಬಳಗವನ್ನು ಎದುರಿಸಲಿದೆ.

ಆರ್‌ಸಿಬಿಯು ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಟೈಟನ್ಸ್ ಮತ್ತು ಎಲಿಮಿನೇಟರ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಭರ್ಜರಿ ಜಯ ಸಾಧಿಸಿದೆ. ಇದು ತಂಡದಲ್ಲಿ ಆತ್ಮವಿಶ್ವಾಸ ಇಮ್ಮಡಿಯಾಗುವಂತೆ ಮಾಡಿದೆ. ಪ್ರಮುಖ ಬ್ಯಾಟರ್‌ಗಳಾದ ಫಫ್ ಡುಪ್ಲೆಸಿ ಮತ್ತು ವಿರಾಟ್ ಕೊಹ್ಲಿ ಅವರಿಬ್ಬರ ಲಯ ಅಸ್ಥಿರವಾಗಿದ್ದರೂ, ರಜತ್ ಪಾಟೀದಾರ್, ದಿನೇಶ್ ಕಾರ್ತಿಕ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಶಹಬಾಜ್ ಅಹಮದ್ ಅವರ ಮೇಲೆ ವಿಶ್ವಾಸವಿಡಬಹುದು. ಆದರೆ, ಬೌಲಿಂಗ್‌ನಲ್ಲಿ ಜೋಶ್ ಹ್ಯಾಜಲ್‌ವುಡ್ ಮತ್ತು ವಣಿಂದು ಹಸರಂಗಾ ಬಿಟ್ಟರೆ ಉಳಿದವರಿಂದ ನಿರಂತರವಾಗಿ ಉತ್ತಮ ಆಟ ಕಂಡುಬಂದಿಲ್ಲ.

ರಾಜಸ್ಥಾನ ತಂಡದಲ್ಲಿ ಮೂರು ಶತಕ ಬಾರಿಸಿರುವ ಜೋಸ್ ಬಟ್ಲರ್, ಯಶಸ್ವಿ ಜೈಸ್ವಾಲ್, ನಾಯಕ ಸಂಜು ಸ್ಯಾಮ್ಸನ್ ಮತ್ತು ದೇವದತ್ತ ಪಡಿಕ್ಕಲ್ ಉತ್ತಮ ಲಯದಲ್ಲಿದ್ದಾರೆ. ಅವರನ್ನು ಕಟ್ಟಿಹಾಕುವ ಸವಾಲು ಆರ್‌ಸಿಬಿ ಬೌಲರ್‌ಗಳ ಮುಂದಿದೆ.

ರಾಜಸ್ಥಾನ ಬೌಲರ್‌ಗಳಾದ ಪ್ರಸಿದ್ಧಕೃಷ್ಣ, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅಶ್ವಿನ್ ಮತ್ತು ಬೌಲ್ಟ್ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೌಲಿಂಗ್ ಮಾಡಿದರೆ ಆರ್‌ಸಿಬಿ ಬ್ಯಾಟಿಂಗ್ ಪಡೆಯ ಹಾದಿ ಕಠಿಣವಾಗಬಹುದು. ಅದರಲ್ಲೂ ಚಾಹಲ್ ತಮ್ಮ ನಿಕಟಪೂರ್ವ ತಂಡದ ಎದುರು ಉತ್ತಮ ಬೌಲಿಂಗ್ ಮಾಡುವ ಛಲದಲ್ಲಿದ್ದಾರೆ.

ಐಪಿಎಲ್‌ನ ಮೊದಲ ಆವೃತ್ತಿಯ ಚಾಂಪಿಯನ್ ರಾಜಸ್ಥಾನ ತಂಡವು ಈ ಬಾರಿ ಲೀಗ್ ಹಂತದಲ್ಲಿ ಎರಡನೇ ಸ್ಥಾನ ಪಡೆದು, ಮೊದಲ ಕ್ವಾಲಿಫೈಯರ್ ಆಡಿತ್ತು. ಆದರೆ, ಆ ಪಂದ್ಯದಲ್ಲಿ ಟೈಟನ್ಸ್ ಎದುರು ಸೋತಿತ್ತು.

ಒತ್ತಡದ ಸನ್ನಿವೇಶದಲ್ಲಿ ರಜತ್ ಪಾಟೀದಾರ್ ಅಮೋಘವಾಗಿ ಬ್ಯಾಟಿಂಗ್ ಮಾಡಿದರು. ಟೂರ್ನಿ ಇತಿಹಾಸದಲ್ಲೇ ಅದ್ಭುತ ಶತಕ ಇದು. ಇಂಥ ಇನಿಂಗ್ಸ್ ನೋಡಿಯೇ ಇಲ್ಲ
ವಿರಾಟ್ ಕೊಹ್ಲಿ ಆರ್‌ಸಿಬಿ ಬ್ಯಾಟರ್

ಐಪಿಎಲ್ 2022 ಮುಖಾಮುಖಿ	
ಪಂದ್ಯ	2
ರಾಜಸ್ಥಾನ ಜಯ	1
ಆರ್‌ಸಿಬಿ ಜಯ	1

ಸಂಜು ಸ್ಯಾಮ್ಸನ್

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	26
ಹಸರಂಗ	ಬೆಂಗಳೂರು	25
ಕಗಿಸೊ	ಪಂಜಾಬ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	718
ರಾಹುಲ್	ಲಖನೌ	616
ಕ್ವಿಂಟನ್ ಡಿಕಾಕ್	ಲಖನೌ	508

ನಾಯಕರ ಬಲಾಬಲ	
ಫಫ್ ಡುಪ್ಲೆಸಿ (ಆರ್‌ಸಿಬಿ)	
ಪಂದ್ಯ	115
ರನ್	3378
ಶ್ರೇಷ್ಠ	96
ಅರ್ಧಶತಕ	25
ಬೌಂಡರಿ	311
ಸಿಕ್ಸರ್	109

ಸಂಜು ಸ್ಯಾಮ್ಸನ್ (ರಾಜಸ್ಥಾನ ರಾಯಲ್ಸ್)	
ಪಂದ್ಯ	136
ರನ್	3489
ಶ್ರೇಷ್ಠ	119
ಶತಕ	3
ಅರ್ಧಶತಕ	17
ಬೌಂಡರಿ	276
ಸಿಕ್ಸರ್	156
ಸ್ಟಂಪಿಂಗ್	12
ಕ್ಯಾಚ್	72

ಅಂಕಿ ಅಂಶ: ಐಪಿಎಲ್ ವೆಬ್‌ಸೈಟ್

ಐಪಿಎಲ್ ಸಾಧನೆ
ರಾಜಸ್ಥಾನ್ ರಾಯಲ್ಸ್
ಚಾಂಪಿಯನ್: 2008
ಆರ್‌ಸಿಬಿ
ರನ್ನರ್ಸ್ ಅಪ್: 2009, 2011 ಮತ್ತು 2016

ಸೂಪರ್ ನೋವಾಸ್–ವೆಲೋಸಿಟಿ ಫೈನಲ್

ಮಹಿಳೆಯರ ಟಿ20 ಚಾಲೆಂಜ್: ಟ್ರೇಲ್‌ಬ್ಲೇಜರ್ಸ್‌ಗೆ ಜಯ

ಪುಣೆ (ಪಿಟಿಐ): ಸೂಪರ್‌ನೋವಾಸ್ ಮತ್ತು ವೆಲೋಸಿಟಿ ತಂಡಗಳು ಐಪಿಎಲ್ ಅಂಗವಾಗಿ ನಡೆಯುತ್ತಿರುವ ಮಹಿಳಾ ಚಾಲೆಂಜ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಪಂದ್ಯ ಶನಿವಾರ ನಡೆಯಲಿದೆ.

ಗುರುವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ವೆಲೋಸಿಟಿ ತಂಡವನ್ನು ಟ್ರೇಲ್‌ಬ್ಲೇಜರ್ಸ್ 16 ರನ್‌ಗಳಿಂದ ಮಣಿಸಿತು. ಆದರೆ ಉತ್ತಮ ರನ್‌ರೇಟ್ ಆಧಾರದಲ್ಲಿ ವೆಲೋಸಿಟಿ ಫೈನಲ್ ಪ್ರವೇಶಿಸಿತು.

191 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ವೆಲೋಸಿಟಿ 9 ವಿಕೆಟ್ ಕಳೆದುಕೊಂಡು 174 ರನ್ ಗಳಿಸಿತು. ಕಿರಣ್ ಪ್ರಭು ನವಗಿರೆ 34 ಎಸೆತಗಳಲ್ಲಿ 69 ರನ್ ಗಳಿಸಿ ಮಿಂಚಿದರು. ತಲಾ 5 ಬೌಂಡರಿ ಮತ್ತು ಸಿಕ್ಸರ್‌ಗಳನ್ನು ಅವರು ಸಿಡಿಸಿದರು.

ಟಾಸ್ ಗೆದ್ದ ವೆಲೋಸಿಟಿ ತಂಡದ ನಾಯಕಿ ದೀಪ್ತಿ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆರಂಭಿಕ ಬ್ಯಾಟರ್ ಎಸ್. ಮೇಘನಾ ಮತ್ತು ಜೆಮಿಮಾ ರಾಡ್ರಿಗಸ್ ಅವರ ಭರ್ಜರಿ ಅರ್ಧಶತಕಗಳ ಬಲದಿಂದ ಟ್ರೇಲ್‌ಬ್ಲೇಜರ್ಸ್ ದೊಡ್ಡ ಮೊತ್ತ ದಾಖಲಿಸಿತು.

ವಿಕೆಟ್‌ಗಾಗಿ ಮನವಿ ಸಲ್ಲಿಸಿದ ರಾಜೇಶ್ವರಿ –ಐಪಿಎಲ್ ವೆಬ್‌ಸೈಟ್ ಚಿತ್ರ

ಮೂರನೇ ಓವರ್‌ನಲ್ಲಿಯೇ ಟ್ರೇಲ್‌ಬ್ಲೇಜರ್ಸ್ ನಾಯಕಿ ಸ್ಮೃತಿ ಮಂದಾನ ಔಟಾದರು. ಆದರೆ ಮೇಘನಾ (73; 47ಎ, 4X7, 6X4) ಮತ್ತು ಜೆಮಿಮಾ (66; 44ಎ, 4X7, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಟ್ರೇಲ್ ಬ್ಲೇಜರ್ಸ್: 20 ಓವರ್‌ಗಳಲ್ಲಿ 5ಕ್ಕೆ190 (ಸಬ್ಬಿನೇನಿ ಮೇಘನಾ 73, ಜೆಮಿಮಾ ರಾಡ್ರಿಗಸ್ 66, ಹೆಯಲಿ ಮ್ಯಾಥ್ಯೂಸ್ 27; ಸಿಮ್ರನ್ ಬಹಾದೂರ್ 31ಕ್ಕೆ2, ಸ್ನೇಹ ರಾಣಾ 37ಕ್ಕೆ1, ಅಯಬೋಂಗಾ ಕಾಕಾ 27ಕ್ಕೆ1); **ವೆಲೋಸಿಟಿ:** 20 ಓವರ್‌ಗಳಲ್ಲಿ 9ಕ್ಕೆ 174 (ಶಫಾಲಿ ವರ್ಮಾ 29, ಕಿರಣ್ ಪ್ರಭು 69; ರೇಣುಕಾ ಸಿಂಗ್ 32ಕ್ಕೆ1, ಹಯೆಲಿ ಮ್ಯಾಥ್ಯೂಸ್ 20ಕ್ಕೆ1, ಸಲ್ಮಾ ಖಾತೂನ್ 22ಕ್ಕೆ1, ರಾಜೇಶ್ವರಿ ಗಾಯಕವಾಡ್ 44ಕ್ಕೆ2, ಪೂನಂ ಯಾದವ್ 33ಕ್ಕೆ2, ಸೋಫಿಯಾ ಡಂಕ್ಲಿ 8ಕ್ಕೆ1). ಫಲಿತಾಂಶ: ಟ್ರೇಲ್‌ಬ್ಲೇಜರ್ಸ್‌ಗೆ 16 ರನ್‌ಗಳ ಜಯ.

ಆರ್‌ಸಿಬಿ ಬೌಲರ್‌ಗಳನ್ನು ಶ್ಲಾಘಿಸಿದ ರಾಹುಲ್

ಕೋಲ್ಕತ್ತ (ಪಿಟಿಐ): ಇನಿಂಗ್ಸ್‌ನ ಮಧ್ಯದ ಹಂತದ ಓವರ್‌ಗಳಲ್ಲಿ ಎರಡು ಸಿಕ್ಸರ್‌ಗಳನ್ನು ಹೊಡೆದಿದ್ದರೆ ಪಂದ್ಯದ ಜಯ ತಮ್ಮ ತಂಡದತ್ತ ವಾಲುತ್ತಿತ್ತು. ನಮ್ಮ ಬ್ಯಾಟಿಂಗ್ ಪಡೆ ದೊಡ್ಡ ಹೊಡೆತಗಳನ್ನು ಆಡಲು ಪ್ರಯತ್ನಿಸಿತು. ಆದರೆ ಎದುರಾಳಿ ತಂಡದ ಬೌಲರ್‌ಗಳು ಉತ್ತಮವಾಗಿ ಬೌಲಿಂಗ್ ಮಾಡಿದರು ಎಂದು ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್ ಹೇಳಿದ್ದಾರೆ.

ಬುಧವಾರ ನಡೆದ ಎಲಿಮಿನೇಟರ್ ಪಂದ್ಯದಲ್ಲಿ ಲಖನೌ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಸೋಲನುಭವಿಸಿತ್ತು. 208 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಲಖನೌ ತಂಡದ ರಾಹುಲ್ ಬಿರುಸಾದ ಬ್ಯಾಟಿಂಗ್ ಮಾಡಲಿಲ್ಲವೆಂಬ ಟೀಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗಿವೆ.

ಪವರ್‌ಪ್ಲೇ ನಂತರದ ಏಳು ಓವರ್‌ಗಳಲ್ಲಿ ರಾಹುಲ್ ಒಂದು ಬೌಂಡರಿ ಮಾತ್ರ ಗಳಿಸಿದ್ದರು. ಇದೇ ಮೊದಲ ಬಾರಿ ಟೂರ್ನಿಯಲ್ಲಿ ಆಡಿದ ಲಖನೌ ತಂಡವು ಗುರಿ ಬೆನ್ನಟ್ಟಿದ್ದ ಏಳು ಪಂದ್ಯಗಳ ಪೈಕಿ ಐದರಲ್ಲಿ ಸೋತಿದೆ.

‘ಟೂರ್ನಿಯಲ್ಲಿ ಚೇಸಿಂಗ್ ಮಾಡಿದ ಪಂದ್ಯಗಳಲ್ಲಿ ನಮ್ಮ ಸಾಧನೆ ಚೆನ್ನಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಈ ವಿಷಯದಲ್ಲಿ ಸುಧಾರಣೆಗೆ ಪ್ರಯತ್ನಿಸುತ್ತೇವೆ’ ಎಂದು ರಾಹುಲ್ ಹೇಳಿದರು.

ಈ ಪಂದ್ಯದಲ್ಲಿ ರಾಹುಲ್ 79 (58ಎಸೆತ) ರನ್ ಗಳಿಸಿದ್ದರು. ಟೂರ್ನಿಯಲ್ಲಿ ಒಟ್ಟು 600ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ.

ಲವ್ಲಿನಾ ಬೊರ್ಗೊಹೈನ್

ಅಥ್ಲೀಟ್ಸ್ ಸಮಿತಿಗೆ ಲವ್ಲಿನಾ ಆಯ್ಕೆ

ನವದೆಹಲಿ(ಪಿಟಿಐ): ಒಲಿಂಪಿಯನ್ ಲವ್ಲಿನಾ ಬೊರ್ಗೊಹೈನ್ ಅಥ್ಲೀಟ್ಸ್ ಸಮಿತಿಯ ನಿರ್ದೇಶಕರ ಮಂಡಳಿಯ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ ಎಂದು ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ಗುರುವಾರ ತಿಳಿಸಿದೆ.

ಈಚೆಗೆ ನಡೆದ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಸಂದರ್ಭದಲ್ಲಿ ಚುನಾವಣೆ ನಡೆಯಿತು. ಅದರಲ್ಲಿ ಲವ್ಲಿನಾ ಅತಿ ಹೆಚ್ಚು ಮತಗಳನ್ನು ಗಳಿಸಿದರು.

‘ಈ ಜಯವು ನನಗೆ ಸಂದ ಬಹುದೊಡ್ಡ ಗೌರವ. ಈ ಪ್ರತಿಷ್ಠಿತ ಸಂಸ್ಥೆಯ ಸದಸ್ಯೆಯಾಗುವ ಹಂಬಲವಿತ್ತು. ಆದರೆ, ಅದಕ್ಕಿಂತಲೂ ದೊಡ್ಡ ಸ್ಥಾನ ಲಭಿಸಿದೆ. ಇದರಿಂದಾಗಿ ಭಾರತದಲ್ಲಿ ಬಾಕ್ಸಿಂಗ್‌ಗೆ ಉತ್ತೇಜನ ನೀಡಲು ಸಾಧ್ಯವಾಗಲಿದೆ. ಅದರಲ್ಲೂ ಮಹಿಳೆಯ ಬಾಕ್ಸಿಂಗ್ ಬೆಳವಣಿಗೆಗೆ ಕಾರ್ಯನಿರ್ವಹಿಸಲು ನನಗೆ ಅವಕಾಶ ಲಭಿಸಿದೆ’ ಎಂದು ಲವ್ಲಿನಾ ಹೇಳಿದ್ದಾರೆ.